ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

45

ಸೆಪ್ಟೆಂಬರ್ 7 ಶನಿವಾರ 2024

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 143 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಉತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ



ಮೈಸೂರಿನ ಕಲಾಮಂದಿರದಲ್ಲಿ ಜರುಗಿದ ಶಿಕ್ಷಕರ ದಿನಾಚರಣೆಯಲ್ಲಿ ಚಾಮಲಾಪುರ ಶಾಲೆಯ ಶಿಕ್ಷಕರಾದ ಸಾಲುಂಡಿ ದೊರೆಸ್ವಾಮಿ ಅವರಿಗೆ ಜಲ್ಲಾ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಯನ್ನು ಶಾಸಕ ಕೆ.ಹರೀಶ್ ಗೌಡ ಪ್ರದಾನ ಮಾಡಿದರು. ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಪ್ರಾಂಶುಪಾಲ ನಾಗರಾಜಯ್ಯ, ಕ್ಷೇತ್ರ ಶಿಕ್ಷಣಾಧಿಕಾರಿ ಎಸ್. ರೇವಣ್ಣ, ಮಹದೇವಸ್ವಾಮಿ ಮತ್ತಿತರರು ಈ ವೇಳೆ ಉಪಸ್ಥಿತರಿದ್ದರು.

ರಸ್ತೆಯ ಡಾಂಬರೀಕರಣಕ್ಕೆ ಚಾಲನೆ



ಮೈಸೂರಿನ ವಾರ್ಡ್ ನಂಬರ್ 56 ಅಶೋಕಪುರಂ ಭಾಗದ ಅರಣ್ಯ ಭವನದ ರಸ್ತೆಯ ಡಾಂಬರೀಕರಣಕ್ಕೆ ಕೆಆರ್ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಚಾಲನೆ ನೀಡಿದರು. ಈ ವೇಳೆ ನಗರ ಪಾಲಿಕೆ ಮಾಜಿ ಸದಸ್ಯೆ ಶಾರದಮ್ಮ, ಈಶ್ವರ್, ಪಿ.ಟಿ.ಕೃಷ್ಣ, ಹಿರಿಯ ಮುಖಂಡರಾದ ವಿಶ್ವೇಶ್ವರಯ್ಯ, ವಿ.ಸೋಮ ಸುಂದರ್, ನಾಗರಾಜ್, ಬಿಲ್ಲಯ್ಯ, ವಾರ್ಡ್ ಅಧ್ಯಕ್ಷ ದೀಪಕ್, ಅಶೋಕ ಪುರಂ ರವಿ, ಮಧು, ಕೆ.ಆರ್ ಕ್ಷೇತ್ರದ ಪ್ರಧಾನ ಕಾರ್ಯದರ್ಶಿ ಜಯರಾಮ್, ಪ್ರದೀಪ್ ಕುಮಾರ್, ಕಿಶೋರ್ ಮುಂತಾದವರಿದ್ದರು

ಸೆ.9ರಂದು ಕಲಿಸು ಫೌಂಡೇಷನ್‌ನ 100ನೇ ಗ್ರಂಥಾಲಯ ಉದ್ಘಾಟನೆ

ಮೈಸೂರು, ಸೆ.6– ಮೈಸೂರಿನ ಕಲಿಸು ಫೌಂಡೇಷನ್ ವತಿಯಿಂದ ಸೆ.9ರಂದು ಬೆಳಗ್ಗೆ 10.15ಕ್ಕೆ ಕುಂಬಾರಕೊಪ್ಪಲಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 100ನೇ ಗ್ರಂಥಾಲಯ ಉದ್ಘಾಟನಾ ಸಮಾರಂಭವನ್ನು ಏರ್ಪಡಿಸಲಾಗಿದೆ. ಗ್ರಂಥಾಲಯ ವನ್ನು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಶಾಸಕ ಕೆ. ಹರೀಶ್‌ಗೌಡ, ಡಿಡಿಪಿಐ ಜವರೇಗೌಡ, ಶಾಲೆ ಮುಖ್ಯೋಪಾಧ್ಯಾಯ ಲೋಹಿತೇಶ, ಹೆಚ್ಚುವರಿ ಜಿಲ್ಲಾಧಿಕಾರಿ ಪಿ.ಶಿವರಾಜು, ಕ್ಷೇತ್ರ ಶಿಕ್ಷಣಾಧಿಕಾರಿ (ಉತ್ತರ ವಲಯ) ಎಸ್.ರೇವಣ್ಣ, ಕಲಿಸು ಫೌಂಡೇಷನ್ ಸಂಸ್ಥಾಪಕರು ಮತ್ತು ಸಿಇಓ ಎಂ.ಎಂ. ನಿಖಿಲೇಶ್ ಈ ವೇಳೆ ಉಪಸ್ಥಿತರಿರುವರು.

ಬಿಜೆಪಿ ಸದಸ್ಯತ್ವ ಅಭಿಯಾನ



ಮೈಸೂರು ವಿಜಯನಗರದ 3ನೇ ಹಂತದಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಹಿನಕಲ್ ಮಹಾಶಕ್ತಿ ಕೇಂದ್ರದ ವತಿಯಿಂದ ಹಮ್ಮಿಕೊಂಡಿದ್ದ ಬಿಜೆಪಿ ಸದಸ್ಯತ್ವ ಅಭಿಯಾನಕ್ಕೆ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಚಾಲನೆ ನೀಡಿದರು. ಕ್ಷೇತ್ರದ ಅಧ್ಯಕ್ಷ ಪೈ.ಟಿ.ರವಿ, ಉಪಾಧ್ಯಕ್ಷ ಹಿನಕಲ್ ಗಣೇಶ್, ಸುನೀಲ್, ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹೇಮಂತ್ ಕುಮಾರ್ ಗೌಡ, ಹಿರಿಯ ಮುಖಂಡರಾದ ಶ್ರೀನಿವಾಸ್, ರಾಜ್‌ಕುಮಾರ್, ನಗರ ಪ್ರಧಾನ ಕಾರ್ಯದರ್ಶಿ ಕೇಬಲ್ ಮಹೇಶ್, ನಿಕಟಪೂರ್ವ ಅಧ್ಯಕ್ಷರಾದ ಗೆಜ್ಜಗಳ್ಳಿ ಮಹೇಶ್, ಅರುಣ್ ಕುಮಾರ್ ಗೌಡ, ನಂದೀಶ್, ಹಿನಕಲ್ ಮಹಾಶಕ್ತಿ ಕೇಂದ್ರದ ಅಧ್ಯಕ್ಷೆ ಶಾಲಿನಿ, ಪ್ರಧಾನ ಕಾರ್ಯದರ್ಶಿ ನಾರಾಯಣ್, ರೇವಣ್ಣ, ಶಾಮಣ್ಣ, ವೆಂಕಟೇಶರಾವ್, ಪ್ರಭು, ಎಸ್.ಪ್ರಕಾಶ್ ನಂಜುಂಡಸ್ವಾಮಿ, ವೀರಭದ್ರ ಸವಿತಗೌಡ, ಇಂದ್ರ, ಅಂಬಿಕಾ, ಮೋಹನ್, ರಾಜು, ನಾಗರಾಜು ಮತ್ತಿತರರು ಈ ವೇಳೆ ಉಪಸ್ಥಿತರಿದ್ದರು.

ಪಂಪ ಪ್ರಶಸ್ತಿ ಪುರಸ್ಕೃತ ಡಾ. ಸಿಪಿಕೆಗೆ ದಸರಾ ಪ್ರಧಾನ ಕವಿಗೋಷ್ಠಿಯ ಅಧ್ಯಕ್ಷತೆ ಕಲ್ಪಿಸಲು ಮನವಿ



ವಿಶ್ವವಿಖ್ಯಾತ ದಸರಾ ಪ್ರಧಾನ ಕವಿಗೋಷ್ಠಿಯ ಅಧ್ಯಕ್ಷತೆಗೆ ಪಂಪ ಪ್ರಶಸ್ತಿ ಪುರಸ್ಕೃತ ಖ್ಯಾತ ಸಾಹಿತಿ ಡಾ. ಸಿಪಿಕೆ ಅವರನ್ನು ಆಹ್ವಾನಿಸುವಂತೆ ಒತ್ತಾಯಿಸಿ ಸ್ಪಂದನ ಸಾಂಸ್ಕೃತಿಕ ಪರಿಷತ್ತಿನ ಅಧ್ಯಕ್ಷ ಟಿ. ಸತೀಶ್ ಜವರೇಗೌಡ ಕವಿಗೋಷ್ಠಿ ಉಪಸಮಿತಿಯ ಉಪ ವಿಶೇಷಾಧಿಕಾರಿ ವಿ.ಎನ್. ಮಲ್ಲಿಕಾರ್ಜುನಸ್ವಾಮಿ ಅವರಿಗೆ ಮನವಿ ಪತ್ರ ನೀಡಿದರು. ಸಾಹಿತಿ ಡಾ.ಬಿ. ಬಸವರಾಜು, ರಂಗಕರ್ಮಿ ಚಂದ್ರು ಮಂಡ್ಯ ಉಪಸ್ಥಿತರಿದ್ದರು.

ಮೈಸೂರು, ಸೆ. 6– ವಿಶ್ವವಿಖ್ಯಾತ ಮೈಸೂರು ದಸರಾ ಅಂಗವಾಗಿ ಜಗನ್ಮೋಹನ ಅರಮನೆಯಲ್ಲಿ ನಡೆಯಲಿರುವ 'ಪ್ರಧಾನ ಕವಿಗೋಷ್ಠಿ'ಗೆ ಪಂಪ ಪ್ರಶಸ್ತಿ ಪುರಸ್ಕೃತ ಹಿರಿಯ ಸಾಹಿತಿ ಡಾ. ಸಿಪಿಕೆ ಅವರನ್ನು ಆಹ್ವಾನಿಸುವಂತೆ ಕೋರಿ ದಸರಾ ಕವಿಗೋಷ್ಠಿಯ ಉಪಸಮಿತಿಯ ವಿಶೇಷಾಧಿಕಾರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವಿಭಾಗೀಯ ಜಂಟಿ ಕಾರ್ಯದರ್ಶಿ ವಿ.ಎನ್. ಮಲ್ಲಿಕಾರ್ಜುನಸ್ವಾಮಿ ಅವರಿಗೆ ಸ್ಪಂದನ ಸಾಂಸ್ಕೃತಿಕ ಪರಿಷತ್ತಿನ ಅಧ್ಯಕ್ಷ ಟಿ. ಸತೀಶ್ ಜವರೇಗೌಡ ಒತ್ತಾಯಿಸಿ ಮನವಿ ಪತ್ರ ಸಲ್ಲಿಸಿದರು.

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ವಿಶ್ರಾಂತ ನಿರ್ದೇಶಕರೂ ಖ್ಯಾತ ಸಾಹಿತಿಯೂ ಆಗಿರುವ ಸಿಪಿಕೆ ಅವರಿಗೆ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಪದವಿ ಮತ್ತು ಪ್ರತಿಷ್ಠಿತ ಪಂಪ ಪ್ರಶಸ್ತಿಯ ಗೌರವ ದೊರೆತರೂ ತವರು ನೆಲದಲ್ಲಿ ನಡೆಯುವ ದಸರಾ ಪ್ರಧಾನ ಕವಿಗೋಷ್ಠಿಯ ಅಧ್ಯಕ್ಷತೆ ಈವರೆಗೆ ಅವರಿಗೆ ಲಭಿಸದಿರುವುದು ವಿಷಾದದ ಸಂಗತಿ.

ಅವರಿಗೆ ಒಂದು ಘನವಾದ ಸಾಹಿತ್ಯ ಪರಂಪರೆಯಿದೆ. ಇದರಲ್ಲಿ ಕನ್ನಡ ಮತ್ತು ಅದರ ಉಪಭಾಷೆಗಳನ್ನೂ ಒಳಗೊಂಡಂತೆ ಜಿಲ್ಲೆಗೆ ಒಬ್ಬರಂತೆ ವಿವಿಧ ಜಿಲ್ಲೆಗಳ ನಾಡಿನ ಪ್ರತಿಭಾನ್ವಿತ ಖ್ಯಾತನಾಮ ಕವಿಗಳು ಭಾಗ ವಹಿಸುವುದು ವಿಶೇಷ. ಹಾಗೆ ಈ ಬಾರಿಯ ದಸರಾ ಕವಿಗೋಷ್ಠಿಯು ಅಕ್ಟೋಬರ್ 5 ರಿಂದ 9 ರವರೆಗೆ ನಡೆಯಲಿದೆ. ಈ ವಿಖ್ಯಾತ, ಪ್ರಧಾನ ಕವಿಗೋಷ್ಠಿಯ ಘನ ಅಧ್ಯಕ್ಷತೆಗೆ ಸಿಪಿಕೆ ಅವರನ್ನು ಆಹ್ವಾನಿಸಬೇಕೆಂದು ಕೋರಿದ್ದಾರೆ. ಈ ಸಂದರ್ಭದಲ್ಲಿ ಕೇಂದ್ರ ಕನ್ನಡ ಸಾಹಿತ್ಯ ವೇದಿಕೆಯ ಜಿಲ್ಲಾಧ್ಯಕ್ಷ ಡಾ.ಬಿ.ಬಸವರಾಜು, ಅದಮ್ಯ ರಂಗಶಾಲೆಯ ಸಂಸ್ಥಾಪಕ ಕಾರ್ಯದರ್ಶಿ ಚಂದ್ರು ಮಂಡ್ಯ, ದಸರಾ ಕವಿಗೋಷ್ಠಿ ಉಪಸಮಿತಿಯ ಕಾರ್ಯಾಧ್ಯಕ್ಷೆ ಡಾ. ಎನ್.ಕೆ. ಲೋಲಾಕ್ಷಿ ಉಪಸ್ಥಿತರಿದ್ದರು.

ಲಕ್ಷ್ಮಣ ಗೌಡರು ನಿಧನ



ಮೈಸೂರು, ಸೆ.6– ಮೈಸೂರು ತಾಲೂಕು ಕಸಬಾ ಹೋಬಳಿ ನಾಗನಹಳ್ಳಿ ಗ್ರಾಮದ ಮಾಜಿ ಚಿಕ್ಕ ಯಜಮಾನರಾದ ಲಕ್ಷ್ಮಣ ಗೌಡರು(82) ಇಂದು ನಿಧನರಾದರು. ದಿವಂಗತರು ಪತ್ನಿ ಮತ್ತು ಮೂವರು ಪುತ್ರರು, ಮೊಮ್ಮಕ್ಕಳನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆಯನ್ನು ನಾಗನಹಳ್ಳಿ ಗ್ರಾಮದಲ್ಲಿ ನಾಳೆ (ಸೆ.7) ಬೆಳಗ್ಗೆ 11 ಘಂಟೆಗೆ ನೆರವೇರಿಸಲಾಗುವುದು ಎಂದು ಕುಟುಂಬದವರು ತಿಳಿಸಿದ್ದಾರೆ.

ಕರ್ನಾಟಕ ಮಾತ್ರವಲ್ಲದೆ ದೇಶದಲ್ಲೇ ರಾಜಕೀಯ ಅಸ್ಥಿರತೆ ಶಾಸಕ ಜಿ.ಟಿ.ದೇವೇಗೌಡ ಆತಂಕ

ಮೈಸೂರು, ಸೆ.6(ಬಿಎಲ್‌ಯು)– ಕರ್ನಾಟಕ ಮಾತ್ರವಲ್ಲದೆ ಇಡೀ ದೇಶದಲ್ಲೆ ಇಂದು ರಾಜಕೀಯ ಅಸ್ಥಿರತೆ ಇದೆ ಎಂದು ಶಾಸಕ ಜಿ.ಟಿ.ದೇವೇಗೌಡರು ಅಭಿಪ್ರಾಯಪಟ್ಟರು.

ನಗರದ ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಇಂದು ಸುತ್ತೂರು ಜಗದ್ಗುರು ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಯವರ 109ನೇ ಜನ್ಮ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಇಂತಹ ರಾಜಕೀಯ ಅಸ್ಥಿರತೆ ಪರಿಸ್ಥಿತಿಯಲ್ಲಿ ಆದರ್ಶ ಬೋಧನೆ ಮಾಡಿದ ಗುರು–ಹಿರಿಯರ ತತ್ವ ಪಾಲನೆ ಪ್ರಸ್ತುತ ಎಂದರು.

ಅದರಲ್ಲೂ ಯುವ ಸಮೂಹ ಆದರ್ಶ ಗುಣಗಳನ್ನು ಮೈಗೂಡಿಸಿಕೊಳ್ಳಬೇಕು. ಈ ಮೂಲಕ ಸ್ವಾಸ್ಥ್ಯ ಸಮಾಜ ನಿರ್ಮಾಣಕ್ಕೆ ಮುಂದಾಗಬೇಕು ಎಂದು ಸಲಹೆ ನೀಡಿದರು. ಪ್ರತಿಯೊಬ್ಬರು ಗುರುಗಳಾಗಲು ಸಾಧ್ಯವಿಲ್ಲ. ಗುರುಗಳು ದೇವರ ಸಮಾನರು. ಈ ಹಿನ್ನೆಲೆಯಲ್ಲಿ ಡಾ.ರಾಜೇಂದ್ರ ಸ್ವಾಮೀಜಿ ಅಕ್ಷರ ವಂಚಿತರನ್ನು ಶಿಕ್ಷಣದ ಮುಖ್ಯ ವಾಹಿನಿಗೆ ತರಲು ಶ್ರಮಿಸಿದರು ಎಂದು ಅವರ ಗುಣಗಾನ ಮಾಡಿದರು.

ಮನುಷ್ಯನಿಗೆ ಕಷ್ಟ, ಸುಖ ಎರಡೂ ಬರುತ್ತದೆ. ಆದರೆ ಶ್ರೀಮಂತಿಕೆ ಬಂದಾಗ ಗರ್ವ ಪಡದೆ, ಕಷ್ಟ ಬಂದಾಗ ಎದೆಗುಂದದೆ ಜೀವನ ನಡೆಸಬೇಕು. ಇಂತಹ ವಿಚಾರಗಳನ್ನು ಡಾ.ರಾಜೇಂದ್ರ ಸ್ವಾಮೀಜಿ ಸದಾ ಬೋಧಿಸಿದ್ದರು. ಶ್ರೀಗಳ ಸ್ಮರಣೆ ಪ್ರತಿದಿನ ಮಾಡಬೇಕು. ಈ ಮೂಲಕ ಒಳ್ಳೆಯ ಗುಣಗಳನ್ನು ಮೈಗೂಡಿಸಿಕೊಳ್ಳಬೇಕು ಎಂದರು.



ಮೈಸೂರಿನ ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಶುಕ್ರವಾರ ಸುತ್ತೂರು ಜಗದ್ಗುರು ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಯವರ 109ನೇ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದಲ್ಲಿ ಸಮಾಜ ಸೇವೆ ಮಾಡಿರುವ ಸಾಧಕರನ್ನು ಸನ್ಮಾನಿಸಲಾಯಿತು. ಶಾಸಕ ಜಿ.ಟಿ.ದೇವೇಗೌಡ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಸಮಾಜ ಸೇವಕ ಮಂಜುನಾಥ್, ಮೈಸೂರು ಶರಣ ಮಂಡಳಿ ಅಧ್ಯಕ್ಷ ಮೂಗೂರು ನಂಜುಂಡಸ್ವಾಮಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಶ್ರೀಗಳ ಹೆಸರಿನಲ್ಲಿ ಪ್ರಶಸ್ತಿ ನೀಡುತ್ತಿರುವ ಈ ಕಾರ್ಯಕ್ರಮ ಅರ್ಥಪೂರ್ಣ ಹಾಗೂ ಸಾರ್ಥಕವಾಗಿದೆ. ಪ್ರಶಸ್ತಿ ಪಡೆದಿರುವ ಎಲ್ಲರೂ ಮತ್ತಷ್ಟು ಸಮಾಜಮುಖಿ ಸೇವೆ ಮಾಡಬೇಕು ಎಂದು ಗೌಡರು ಸಲಹೆ ನೀಡಿದರು. ಡಾ.ರಾಜೇಂದ್ರ ಶ್ರೀಗಳ ಜೀವನ ಮತ್ತು ಸಾಧನೆ ಕುರಿತಂತೆ ಜೆಎಸ್‌ಎಸ್ ಸಂಸ್ಥೆಯ ಸಂಯೋಜನಾಧಿಕಾರಿ ಜಿ.ಎಲ್.ತ್ರಿಪುರಾಂತಕ ಉಪನ್ಯಾಸ ನೀಡಿದರು. ಈ ವೇಳೆ ಹಿರಿಯ ಐಪಿಎಸ್ ಅಧಿಕಾರಿ ಡಾ.ಧರಣಿದೇವಿ ಮಾಲಗತ್ತಿ, ಹೋಟೆಲ್ ಉದ್ಯಮಿ ರವಿಶಾಸ್ತ್ರಿ, ಪ್ರೊಜಯ ಪ್ರಕಾಶ್‌ಗೌಡ, ಎಂ.ರಾಮಪ್ಪ, ಆದಿಶೇಷಗೌಡ, ರಾಮಚಂದ್ರ ಅವರಿಗೆ ರಾಜೇಂದ್ರ ಶ್ರೀ ಸೇವಾ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಸಮಾಜ ಸೇವಕ ಮಂಜುನಾಥ್, ಮೈಸೂರು ಶರಣ ಮಂಡಳಿ ಅಧ್ಯಕ್ಷ ಮೂಗೂರು ನಂಜುಂಡಸ್ವಾಮಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

7.09.2024 ಶನಿವಾರ, ಮಳೆ ನಕ್ಷತ್ರ: ಪುಬ್ಬ, 31.08.2024 ರಿಂದ 12.09.2024 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಶುಕ್ಲ ಪಕ್ಷ, ತಿಥಿ: ಚೌತಿ, ನಕ್ಷತ್ರ: ಚಿತ್ತ, ರಾಹುಕಾಲ : ಬೆಳಗ್ಗೆ 9 ರಿಂದ 10.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬಂಜೆತನ, ಮುಟ್ಟಿನ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ಗಂಟೆಯಿಂದ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಅವಧೂತ ದತ್ತ ಪೀಠಾಧಿಪತಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ದತ್ತಪೀಠ ಉತ್ತರಾಧಿಕಾರಿ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿಯವರ 21ನೇ ಚಾತುರ್ಮಾಸ್ಯ ವ್ರತ ದೀಕ್ಷಾ ಮಹೋತ್ಸವ, ವಿನಾಯಕ ಚತುರ್ಥಿ, ಸಹಸ್ರ ಮೋದಕ ಗಣಪತಿ ಹೋಮ, ಶ್ರೀ ಗಣಪತಿ ನವರಾತ್ರಿ ಪ್ರಾರಂಭ, ಸ್ಥಳ: ಆಶ್ರಮದ ಆವರಣ, ಬೆಳಗ್ಗೆಯಿಂದ.

■ **ಕೆ.ಬಿ.ಎಲ್ ಸಿದ್ಧಿ ವಿನಾಯಕ ಟ್ರಸ್ಟ್:** ಗೌರಿ–ಗಣೇಶ ಹಬ್ಬದ ಪ್ರಯುಕ್ತ ಪ್ರತಿಭಾ ಪುರಸ್ಕಾರ, ಸ್ಥಳ: ವಿನಾಯಕ ದೇವಸ್ಥಾನದ ಆವರಣ, ಬಸ್ತಿಪುರ ಗ್ರಾಮ, ಬೆಳಗ್ಗೆ 11.30ಕ್ಕೆ.

■ **ಶ್ರೀ ಶ್ರೀ ಶ್ರೀ 101 ಗಣಪತಿ ದೇವಸ್ಥಾನ ಟ್ರಸ್ಟ್ :** ಶ್ರೀ ಗೌರಿ ಗಣೇಶ ಹಬ್ಬ ಮತ್ತು ಶ್ರೀ 101 ಗಣಪತಿ ಪ್ರತಿಷ್ಠಾಪನೆ, ಅಭಿಷೇಕ, ಗಣಹೋಮ, ವಿಶೇಷ ಹೂವಿನ ಅಲಂಕಾರ, ಬೆಳಗ್ಗೆ 10ಕ್ಕೆ ಮಹಾರುದ್ರಾಭಿಷೇಕ, ಸಂಜೆ 4ಕ್ಕೆ ಮಹಾಮಂಗಳಾರತಿ, ಮಹಾಸಂಕಲ್ಪ, ಗಂಗಾಪೂಜೆ, ಶ್ರೀ ನೂರೊಂದು ಗಣಪತಿಗಳಿಗೆ ತೈಲಾಭಿಷೇಕ, ಕ್ಷೀರಾಭಿಷೇಕ, ಪಂಚಾಮೃತ, ಮಹಾರುದ್ರಾಭಿಷೇಕ, ರಜತಕವಚಾಲಂಕಾರ, ಸಹಸ್ರ ಬಿಲ್ವದೂರ್ವ, ಕುಂಕುಮ ಅರ್ಚನೆಗಳು, ರಾಜೋಪಚಾರ, ರಾಷ್ಟ್ರಾಶೀರ್ವಾದ, ತೀರ್ಥಪ್ರಸಾದ ವಿನಿಯೋಗ, ಪ್ರಾಕಾರೋತ್ಸವ, ಸ್ಥಳ: 101 ಗಣಪತಿ ದೇವಸ್ಥಾನ, ತ್ಯಾಗರಾಜ ರಸ್ತೆ.

■ **ಶ್ರೀ ವಿದ್ಯಾಗಣಪತಿ ದೇವಸ್ಥಾನ, ಶ್ರೀ ಮಹಾಲಕ್ಷ್ಮಿ ದೇವಸ್ಥಾನ ಟ್ರಸ್ಟ್ :** ಗೌರಿ ಗಣೇಶ ಹಬ್ಬ ಹಾಗೂ 44ನೇ ವಾರ್ಷಿಕೋತ್ಸವದ ಪೂಜಾ ಮಹೋತ್ಸವ, ಬೆಳಗ್ಗೆ 4ಕ್ಕೆ ಮಹಾಗಣಪತಿಗೆ ಪಂಚಾಮೃತ ಅಭಿಷೇಕ, ಸಂಜೆ 7ಕ್ಕೆ ಶ್ರೀ ಮಹಾಗಣಪತಿ ಸ್ಥಾಪನೆ, 1008 ಮೋದಕಗಳಿಂದ ವಿದ್ಯಾಗಣಪತಿ ಹೋಮ, 108 ತೆಂಗಿನ ಕಾಯಿಗಳಿಂದ 9.30ಕ್ಕೆ ಪೂರ್ಣಾಹುತಿ, ಮಹಾಮಂಗಳಾರತಿ, ಸ್ಥಳ: ಶ್ರೀ ವಿದ್ಯಾಗಣಪತಿ ದೇವಸ್ಥಾನ, ವಿನಾಯಕನಗರ.


■ **ಕಲಾಸುರುಚಿ:** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ – 844, ಕಥೆ ಹೇಳುವವರು: ಶ್ರೀಯುತ ರವೀಶ್ ಕುಮಾರ್ ಬಿ, ನಿವೃತ್ತ ಶಿಕ್ಷಕರು ಹಾಗೂ ರಾಜ್ಯ ಸಂಪನ್ಮೂಲ ವ್ಯಕ್ತಿ, ಶಿಕ್ಷಣ ಇಲಾಖೆ, ಸ್ಥಳ: ಸುರುಚಿ ರಂಗಮನೆ, ಚಿತ್ರಭಾನು ರಸ್ತೆ, ಕುವೆಂಪು ನಗರ, ಸಂಜೆ 4.30 ರಿಂದ.

■ **ಎಸ್.ಪಿವಿಜಿಎಂಸಿ ಟ್ರಸ್ಟ್ ;** ಪಾರಂಪರಿಕ ಸಂಗೀತೋತ್ಸವ, ಡಾ. ವಿ. ಮಾಲಿನಿ ಮತ್ತು ತಂಡದಿಂದ ಹರಿಕಥೆ, ವಿದ್ವಾನ್ ಎ. ಉದಯರಾಜು–ಹಾರ್ಮೋನಿಯಂ, ವಿದ್ವಾನ್ ಎಂ.ಆರ್. ಶ್ರೀಕಂಠ–ತಬಲ, ಸಂಜೆ 6.45ಕ್ಕೆ, ಸ್ಥಳ: ಎಸ್‌ಪಿವಿಜಿಎಂಸಿ ಟ್ರಸ್ಟ್, 8ನೇ ಕ್ರಾಸ್, ವಿ.ವಿ. ಮೊಹಲ್ಲಾ.

■ **ಶ್ರೀ ಮಹಾಗಣಪತಿ ಸೇವಾ ಟ್ರಸ್ಟ್ ಹಾಗೂ ಶ್ರೀ ಮಹಾಗಣಪತಿ ದೇವಸ್ಥಾನ :** ಶ್ರೀ ವಿನಾಯಕಮೂರ್ತಿ ಪ್ರಾಣ ಪ್ರತಿಷ್ಠಾಪನೆ, ಹೋಮ ಹವನ, ಪೂಜಾ ಕಾರ್ಯಕ್ರಮ, ಸಂಜೆ 7.30ಕ್ಕೆ ವಿನಾಯಕನಿಗೆ ವಿಶೇಷ ಅಷ್ಟಾವಧಾನ ಸೇವೆ, ಮಂಗಳಾರತಿ, ಸ್ಥಳ: ಶ್ರೀ ಮಹಾಗಣಪತಿ ಸೇವಾ ಟ್ರಸ್ಟ್ ಹಾಗೂ ಶ್ರೀ ಮಹಾಗಣಪತಿ ದೇವಸ್ಥಾನ, ಬೃಂದಾವನ ಬಡಾವಣೆ.


■ **ಅಂಬಾರಿ ಬಾಯ್ಸ್ :** 10ನೇ ವರ್ಷದ ಗಣಪತಿ ಪೂಜಾ ಮಹೋತ್ಸವ, ಗಣಪತಿ ಪ್ರತಿಷ್ಠಾಪನೆ, ಪೂಜಾ ಮಹೋತ್ಸವ, ಸ್ಥಳ: ಕಾಮಾಟಗೇರಿ, ನಜರ್‌ಬಾದ್.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 CFTRI ಶೋಧ ಅನುಶೋಧ–ಪ್ರಾಯೋಜಿತ ಬಾನುಲಿ ಸರಣಿ, ಪ್ರಾಯೋಜಕರು: CSIR, CFTRI, Mysuru, 6.40 ಅರಿವಿನ ಶಿಖರ : ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಎಂ. ಆರ್. ಸುಧಾ, ಜಯಂತಿ. ವಿ. ಭಟ್, ವ್ಯಾಖ್ಯಾನ–ಡಾ. ಬಿ.ವಿ. ವಸಂತ ಕುಮಾರ್, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಹಾದಿಯಲ್ಲಿ ಕಂಡ ಮುಖ–ಬಾನುಲಿ ಸರಣಿ, ಪ್ರಸ್ತುತಿ: ಅಬ್ದುಲ್ ರಶೀದ್, 9.00 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ 'ನಮ್ಮೂರ್ ಹೆಸರು', ಪ್ರಸ್ತುತಿ : ಡಾ. ಮೈಸೂರು ಉಮೇಶ್. **ಮಧ್ಯಾಹ್ನ:** 12.00 ಆಯುಷ್‌ವಾಣಿ– ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: ಆಯುಷ್ ಇಲಾಖೆ, ಕರ್ನಾಟಕ ಸರ್ಕಾರ, 12.30 ದೇವರನಾಮ, 12.45 ಜನಪದ ಸಂಗೀತ, 1.20 ಭಾವಗೀತೆಗಳು, 3.00 ಹಳ್ಳಿ ಹಾಡು, 3.30 ಮಕ್ಕಳ ಮಂಟಪ, 4.00 ನಾಟಕ, 4.30 ನೆನಪಿನಂಗಳ (ಧ್ವನಿ ಭಂಡಾರದಿಂದ), 6.50 ಕೃಷಿರಂಗ: ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ಸುಸ್ಥಿರ ಹೈನುಗಾರಿಕೆ ಕುರಿತು ಸಂವಾದ. ಭಾಗವಹಿಸುತ್ತಾರೆ–ಹುಣಸೂರು ತಾಲ್ಲೂಕು ಬಿಳಿಕೆರೆ ಹೋಬಳಿ ಗದ್ದಿಗೆ ಗ್ರಾಮದ ನರಸಯ್ಯ ಹಾಗೂ ಅವರ ಮಗ ಬೀರೇಗೌಡ, ಪ್ರಸ್ತುತಿ: ಎನ್. ಕೇಶವಮೂರ್ತಿ, 8.00 ಯುವವಾಣಿ, 9.30 ಸವಿನೆನಪು–ಹಳೆಯ ಕನ್ನಡ ಚಿತಗೀತೆಗಳು, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ: ಪಂ. ರವೀಂದ್ರ ಯಗ್ವಲ್ ಮತ್ತು ಕಿರಣ್ ಯಗ್ವಲ್–ಯುಗಳ ತಬಲಾ, ಅನ್ಷುಲ್ ಪ್ರತಾಪ್ ಸಿಂಗ್ – ತಬಲಾ

ಮೈಸೂರು ಹಾಗೂ ಸುತ್ತಮುತ್ತ ನಾಳೆ...



ನಾಳಿನ ಪಂಚಾಂಗ

8.09.2024 ಭಾನುವಾರ, ಮಳೆ ನಕ್ಷತ್ರ: ಪುಬ್ಬ, 31.08.2024 ರಿಂದ 12.09.2024 ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಶುಕ್ಲ ಪಕ್ಷ, ತಿಥಿ: ಪಂಚಮಿ, ನಕ್ಷತ್ರ: ಸ್ವಾತಿ, ರಾಹುಕಾಲ : ಸಂಜೆ 4.30 ರಿಂದ 6ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಆರೋಗ್ಯಾಯುಷ್ಯ ಆರೋಗ್ಯವರ್ಧಕ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ಗಂಟೆಯಿಂದ.

■ **ಶ್ರೀ ಯದುಗಿರಿ ಯತಿರಾಜ ಮಠ, ಮೈಸೂರು ಶಾಖೆಯ ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನ :** 'ಸ್ವಾತಿ' ನಕ್ಷತ್ರದ ಪ್ರಯುಕ್ತ ವಿಶೇಷ ಪೂಜೆ, ಬೆಳಿಗ್ಗೆ 8ಕ್ಕೆ ಸಂಕಲ್ಪ, 9ಕ್ಕೆ ಅಭಿಷೇಕ, 10.30ಕ್ಕೆ ಅಲಂಕಾರ, 11.30ಕ್ಕೆ ಮಹಾಮಂಗಳಾರತಿ, ಮಧ್ಯಾಹ್ನ 12.30ಕ್ಕೆ ಶಾತ್ತುಮೊರೈ, 1 ಗಂಟೆಗೆ ತೀರ್ಥ ಪ್ರಸಾದ ವಿನಿಯೋಗ, ಸಂಜೆ 7.30ಕ್ಕೆ ಪ್ರಾಕಾರೋತ್ಸವ, ಸ್ಥಳ: ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನ, ಕಾಳಿದಾಸ ರಸ್ತೆ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್, ಬೆಳಗ್ಗೆ 10ರಿಂದ ಸಂಜೆ 7ರವರೆಗೆ.

■ **ಸ್ಪಾರ್ಕ್ಸ್ ಅಕಾಡೆಮಿ :** ನನ್ನ ಬಣ್ಣ ನನ್ನ ಗಣಪ ಚಿತ್ರಕಲಾ ಸ್ಪರ್ಧೆ, ಸ್ಥಳ: ಪುಟ್ಟರಾಜ ಗವಾಯಿ ಕ್ರೀಡಾಂಗಣ, ಜೆ.ಪಿ.ನಗರ, ಬೆಳಗ್ಗೆ 10 ರಿಂದ.

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ :** ಅವಧೂತ ದತ್ತ ಪೀಠಾಧಿಪತಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ದತ್ತಪೀಠ ಉತ್ತರಾಧಿಕಾರಿ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿಯವರ 21ನೇ ಚಾತುರ್ಮಾಸ್ಯ ವ್ರತ ದೀಕ್ಷಾ ಮಹೋತ್ಸವ, ದತ್ತ ಸ್ವಾಮಿಗೆ ತೈಲಾಭಿಷೇಕ, ಋಷಿ ಪಂಚಮಿ ಪ್ರಯುಕ್ತ ಚತುರ್ವೇದ ಸಭೆ, ಸ್ಥಳ: ಆಶ್ರಮದ ಆವರಣ, ಬೆಳಗ್ಗೆಯಿಂದ.

■ **ಶ್ರೀ ಚಾಮುಂಡೇಶ್ವರಿ ವಿವಿದೋದ್ದೇಶ ಸಹಕಾರ ಸಂಘ :** ಸರ್ವ ಸದಸ್ಯರ ವಾರ್ಷಿಕ ಮಹಾಸಭೆ, ಅಧ್ಯಕ್ಷತೆ :ಸಂಘದ ಅಧ್ಯಕ್ಷ ಎನ್. ರಾಜ್‌ಕುಮಾರ್, ಸ್ಥಳ: ಶ್ರೀ ದರ್ಶಿನಿ ಫಂಕ್ಷನ್ ಹಾಲ್, ಕೆಹೆಚ್‌ಬಿ ಕಾಲೋನಿ, ಬೆಳಗ್ಗೆ 10.30ಕ್ಕೆ.

■ **ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘ :** ರಾಯನಹುಂಡಿ ಗ್ರಾಮದಲ್ಲಿ ರೈತ ಕಲ್ಯಾಣದ ನಾಮಫಲಕ, ಸಂಘದ ಉದ್ಘಾಟನೆ ಮತ್ತು ಮಣ್ಣಿಗೆ ಮರುಜೀವ ಅಭಿಯಾನ, ಉಪಸ್ಥಿತರು : ಜಿಲ್ಲಾ ಕೃಷಿ ಜಂಟಿ ನಿರ್ದೇಶಕ ಕೆ.ಹೆಚ್. ರವಿ, ಮೈಸೂರು ತಾಲೂಕು ತಹಸೀಲ್ದಾರ್ ಕೆ.ಎಂ. ಮಹೇಶ್‌ಕುಮಾರ್, ನಂಜನಗೂಡು ತಾಲೂಕು ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು, ವರುಣಾ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಚೇತನ್, ಸ್ಥಳ: ರಾಯನಹುಂಡಿ ಗ್ರಾಮ, ಬೆಳಗ್ಗೆ 10.30ಕ್ಕೆ.

■ **ಎಂಎಸ್ ಗೋಲ್ಡ್ ಅಂಡ್ ಡೈಮಂಡ್ಸ್‌ನ :** ಮೆಗಾ ಶೋ ರೂಂ ಉದ್ಘಾಟನಾ ಸಮಾರಂಭ, ಉದ್ಘಾಟನೆ : ಗೋಲ್ಡನ್ ಸ್ಟಾರ್ ಗಣೇಶ್, ಮುಖ್ಯ ಅತಿಥಿಗಳು : ಶಾಸಕರಾದ ಕೆ. ಹರೀಶ್‌ಗೌಡ, ತನ್ವೀರ್ ಸೇಠ್, ಜಿ.ಟಿ. ದೇವೇಗೌಡ, ಟಿ.ಎಸ್. ಶ್ರೀವತ್ಸ, ಸ್ಥಳ: ಸಬ್ ಅರ್ಬನ್ ಬಸ್ ನಿಲ್ದಾಣದ ಸಮೀಪ, ಬಿ.ಎನ್. ರಸ್ತೆ, ಬೆಳಗ್ಗೆ 10.30ಕ್ಕೆ.

■ **ಶ್ರೀ ಶ್ರೀ ಶ್ರೀ 101 ಗಣಪತಿ ದೇವಸ್ಥಾನ ಟ್ರಸ್ಟ್ :** ಶ್ರೀ ಗೌರಿ ಗಣೇಶ ಹಬ್ಬ ಮತ್ತು ಶ್ರೀ 101 ಗಣಪತಿ ಪ್ರತಿಷ್ಠಾಪನೆ, ಭಕ್ತಿ ಗೀತೆ, ಭಾವಗೀತೆ, ಜನಪದ ಗೀತೆ : ಶ್ರೀಮತಿ ರೇಣುಕಾ ಶ್ರೀನಿವಾಸ್ ಮತ್ತು ವೃಂದದವರಿಂದ, ಸ್ಥಳ: 101 ಗಣಪತಿ ದೇವಸ್ಥಾನ, ತ್ಯಾಗರಾಜ ರಸ್ತೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಡಾ. ಬಿ. ಆರ್. ಅಣ್ಣಾಸಾಗರ್, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾಯಾನ–ಕನ್ನಡ ಕಲಾತ್ಮಕ ಚಿತ್ರಗಳ ಪರಿಚಯ ಮಾಲಿಕೆ, ಪ್ರಸ್ತುತಿ : ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ : ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ : ಗೀತಾ. ವೈ. ಪುಟ್ಟಿ, ಟಿ. ಎನ್. ಅಶ್ವಿನಿ, ಡಾ. ಪಿ.ಎಸ್. ಮುರಳೀಧರ್, ವ್ಯಾಖ್ಯಾನ : ಪ್ರೊ. ಸಿ. ನಾಗಣ್ಣ, 6.50 ರೈತರಿಗೆ ಸಲಹೆ, 7.15 'ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ' ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ವಿಕಾಸ ಅಕಾಡೆಮಿ, ಕಲಬುರ್ಗಿ, 8.30 ಕನ್ನಡ ಚಿತ್ರಗೀತೆಗಳು, 9.40 ನಮ್ಮ ಆರೋಗ್ಯ ಕಾರ್ಯಕ್ರಮ: ರಾಷ್ಟ್ರೀಯ ದೃಷ್ಟಿ ದಾನ ಪಾಕ್ಷಿಕದ ಸಂದರ್ಭದಲ್ಲಿ ಮಕ್ಕಳಲ್ಲಿ ಕಂಡುಬರುವ ಕಣ್ಣಿನ ಸಾಮಾನ್ಯ ತೊಂದರೆಗಳು ಮತ್ತು ಚಿಕಿತ್ಸೆ ಕುರಿತು ಹಿರಿಯ ನೇತ್ರತಜ್ಞರು ಹಾಗೂ ಮಕ್ಕಳ ನೇತ್ರ ಶಸ್ತ್ರ ಚಿಕಿತ್ಸಾ ತಜ್ಞರಾದ ಡಾ. ಕೆ.ವಿ. ರವಿಶಂಕರ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ : ಬೇದ್ರೆ ಮಂಜುನಾಥ್, 10.00 ಕೇಳಿ ಗಿಳಿಗಳೇ : ಕಥೆ ಕೇಳು ಪುಟ್ಟ–ಕಥೆ ಹೇಳುತ್ತಾರೆ ಬಿ. ಜಿ. ಕವಿತಾ, 10.30 ಮಕ್ಕಳ ಮಂಟಪ : ಶ್ರೀರಂಗಪಟ್ಟಣ ತಾಲೂಕು ಪಾಲಹಳ್ಳಿಯ ಶ್ರೀಶಾರದಾ ವಿದ್ಯಾ ಮಂದಿರದ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 11.00ನಿಮ್ಮೊಂದಿಗೆ ಆಕಾಶವಾಣಿಯಲ್ಲಿ ಮಿಶ್ರ ಮಾಧುರ್ಯ

ಮಧ್ಯಾಹ್ನ: 12.05 ವನಿತಾ ವಿಹಾರ–ರಾಷ್ಟ್ರೀಯ ಪೌಷ್ಟಿಕ ಸಪ್ತಾಹದ ಸಂದರ್ಭದಲ್ಲಿ ಮಹಿಳೆಯರಿಗೆ ಪೌಷ್ಟಿಕಾಂಶ ಪೂರೈಕೆ ಕುರಿತು ಆಹಾರ ತಜ್ಞೆ ಬಿ.ಸಿ.ವಿಶಾಖ ಅವರಿಂದ ಮಾಹಿತಿ, 12.30 ದೇವರ ನಾಮ– ರಶ್ಮಿ ಬಿನು, 12.45 ಜನಪದ ಸಂಗೀತ, 1.20 ಭಾವಗೀತೆಗಳು–ರಮೇಶ್ಚಂದ್ರ, 2.40ಕನ್ನಡ ಚಲನಚಿತ್ರ ಧ್ವನಿವಾಹಿನಿ –ಮುರಿಯದ ಮನೆ, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ : ಜಿ.ಕೆ. ರವೀಂದ್ರ ಕುಮಾರ್, 3.45 ಕರ್ನಾಟಕ ಶಾಸ್ತ್ರೀಯ ಸಂಗೀತ : ರವಿಚಂದ್ರ ಕೂಳೂರ್–ಕೊಳಲು ವಾದನ, 4.45 ಚಿತ್ರಗೀತೆಗಳು, 6.51 ಕೃಷಿರಂಗ : ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ: ಎನ್. ಕೇಶವಮೂರ್ತಿ, ಆರ್. ಲೋಕೇಶ್ವರಿ, ಡಾ. ಮೈಸೂರು ಉಮೇಶ್, ಕೃಷಿಲೋಕ, ಕೃಷಿ ದರ್ಪಣ –ವಾರದ ಕೃಷಿರಂಗ, ಕಿಸಾನ್ ವಾಣಿ ಕಾರ್ಯಕ್ರಮಗಳ ಮುನ್ನೋಟ, ಪ್ರಸ್ತುತಿ: ಆರ್. ಲೋಕೇಶ್ವರಿ, 7.45 Talk in Kannada–ಈಗಿನ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ವಾಹಿನಿ ಯಲ್ಲಿ ಮುಸ್ಲೀಮರು. ಈ ಬಗ್ಗೆ ಮಾತನಾಡುತ್ತಾರೆ ಇಲಿಯಾಸ್ ಅಹ್ಮದ್ ಖಾನ್, 8.00 ಹಾದಿಯಲ್ಲಿ ಕಂಡ ಮುಖ–ಬಾನುಲಿ ಸರಣಿ ಕನ್ನಡದ ಮೊದಲ ಮಂಗಳ ಮುಖಿ ಕವಯತ್ರಿ ಚಾಂದನಿ ಅವರೊಂದಿಗೆ ಸಂವಾದ, ಪ್ರಸ್ತುತಿ : ಅಬ್ದುಲ್ ರಶೀದ್, 9.15 ರಂಗಗೀತೆಗಳು–ಎಂ. ಎಸ್. ವೆಂಕಟರಾಮ್, 10.00 ರವಿವಾರದ ಅಖಿಲ ಭಾರತ ಸಂಗೀತ ಸಭೆ, ಅಪೂರ್ವ ಗೋಖಲೆ – ಹಾಡುಗಾರಿಕೆ

■ **ರಂಗಾಯಣ :** ನಿರಂತರ ರಂಗ ತಂಡದಿಂದ ಗೊರೂರು ನಾಟಕ ಪ್ರದರ್ಶನ, ರಚನೆ : ಗೊರೂರು ರಾಮಸ್ವಾಮಿ ಅಯ್ಯಂಗಾರ್, ನಿರ್ದೇಶನ : ಮಂಜುನಾಥ ಎಲ್. ಬಡಿಗೇರ್, ಸ್ಥಳ: ಭೂಮಿಗೀತ ರಂಗ ಮಂದಿರ, ಸಂಜೆ 6.30ಕ್ಕೆ.

■ **ಎಸ್.ಪಿವಿಜಿಎಂಸಿ ಟ್ರಸ್ಟ್ ; ಪಾರಂಪರಿಕ ಸಂಗೀತೋತ್ಸವ,** ಸಂಜೆ 6.00 ಘಂಟೆಗೆ 63ನೇ ಪಾರಂಪರಿಕ ಸಂಗೀತೋತ್ಸವದ ಉದ್ಘಾಟನಾ ಸಮಾರಂಭ, ಉದ್ಘಾಟನೆ : ಶಾಸಕ ಹರೀಶ್‌ಗೌಡ, ಉಪಸ್ಥಿತರು : ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ, ಅಧ್ಯಕ್ಷತೆ : ಎಸ್ ಪಿವಿಜಿಎಂಸಿ ಟ್ರಸ್ಟ್ ಅಧ್ಯಕ್ಷ ಜಗನ್ನಾಥ್ ಶೆಣೈ, ಸಂಜೆ 6.45 ವಿದುಷಿ ಸೂರ್ಯ ಗಾಯತ್ರಿ ಅವರಿಂದ ಗಾಯನ, ವಿದ್ವಾನ್ ಆದರ್ಶ ವಿಜಯಕುಮಾರ್–ವಯೋಲಿನ್, ವಿದ್ವಾನ್ ಕೃಪಾಲ್ ಸಾಯಿ ರಾಮ್– ಮೃದಂಗ, ವಿದ್ವಾನ್ ಪ್ರಶಾಂತ್ ಶಂಕರ್–ತಬಲಾ, ಸ್ಥಳ: ಎಸ್‌ಪಿವಿಜಿಎಂಸಿ ಟ್ರಸ್ಟ್, 8ನೇ ಕ್ರಾಸ್, ವಿ.ವಿ. ಮೊಹಲ್ಲಾ.

■ **ಶ್ರೀ ಮಹಾಗಣಪತಿ ಸೇವಾ ಟ್ರಸ್ಟ್ ಹಾಗೂ ಶ್ರೀ ಮಹಾಗಣಪತಿ ದೇವಸ್ಥಾನ :** ಶ್ರೀ ವಿನಾಯಕಮೂರ್ತಿ ಪ್ರಾಣ ಪ್ರತಿಷ್ಠಾಪನೆ, ಶ್ರೀ ವಿನಾಯಕ ಮೂರ್ತಿ ವಿಸರ್ಜನೆ, ಸ್ಥಳ: ಶ್ರೀ ಮಹಾಗಣಪತಿ ಸೇವಾ ಟ್ರಸ್ಟ್ ಹಾಗೂ ಶ್ರೀ ಮಹಾಗಣಪತಿ ದೇವಸ್ಥಾನ, ಬೃಂದಾವನ ಬಡಾವಣೆ, ಸಂಜೆ 6.30ಕ್ಕೆ.

■ **ನಟನ ರಂಗ ಶಾಲೆ :** ಪರಿವರ್ತನ ರಂಗ ಸಮಾಜದ ವತಿಯಿಂದ ಗೆಲಿಲಿಯೋಸ್ ಡಾಟರ್ ಡ್ರಾಮಾ ಆಫ್ ಸೈನ್ಸ್ ಅಂಡ್ ಪೇಥ್ (ಆಂಗ್ಲ ನಾಟಕ) ಪ್ರದರ್ಶನ, ನಾಟಕ, ಪರಿಕಲ್ಪನೆ, ರೂಪಾಂತರ, ನಿರ್ದೇಶನ : ಪ್ರೊ. ಎಸ್.ಆರ್. ರಮೇಶ್, ಸ್ಥಳ: ನಟನ ರಂಗಶಾಲೆ, ರಾಮಕೃಷ್ಣನಗರ, ಸಂಜೆ 6.30ಕ್ಕೆ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 7 ಶನಿವಾರ 2024

ಸಂಪುಟ: 45 | ಸಂಚಿಕೆ: 143

ಪುಟಗಳು: 12 ₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23 ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695 ಸುದ್ದಿ ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com,
website: www.mysurumithra.com

ನಕ್ಕರೆ ಅದೇ ಸ್ವರ್ಗ

ನಿಂಗಿ : ಮಾತು ಮಾತಿಗೂ ನಡುವೆ ನನ್ನ ತಂದೆ–ತಾಯಿಯನ್ನು ಏಕೆ ತರ್ತೀರಿ?

ಗುಂಡ : ನೋಡು ಟಿವಿ ಕೆಟ್ಟು ಹೋದಾಗ ಯಾರೂ ಟಿವಿ ಬಗ್ಗೆ ಮಾತಾಡಲ್ಲ. ಅದನ್ನು ತಯಾರಿಸಿದ ಕಂಪನಿ ಬಗ್ಗೆಯಷ್ಟೇ ಮಾತಾಡ್ತಾರೆ.

ಮೈಸೂರು ಮಿತ್ರ

ಶನಿವಾರ, 7 ಸೆಪ್ಟೆಂಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಬದುಕು ನಿಧಾನವಾಗಿ ಪಾಠ ಕಲಿಸುತ್ತೆ. ನಿನ್ನತನವನ್ನು ಅಡವಿಟ್ಟು ಯಾರನ್ನೂ ಪ್ರೀತಿಸುವ ಅಗತ್ಯವಿಲ್ಲ. ಏಕೆಂದರೆ, ಇಲ್ಲಿ ಯಾರು ಯಾರಿಗೂ ಅನಿವಾರ್ಯವಲ್ಲ. – ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಸಾಲ್ಗಾರ ಸುಮ್ಮನಿದ್ರು ಸಾಕ್ಷಿಗಾರ ಸುಮ್ಮನಿರ!

ನಿಮ್ಮ ಪತ್ರಗಳು

■ ಸಿಟಿ ಬಸ್, ತಂಗುದಾಣ ಸಮಸ್ಯೆ ನಿವಾರಿಸಿ

ಮಾನ್ಯರೆ,



ಮೈಸೂರು ನಗರದ ಕೆಲವು ಸಮಸ್ಯೆಗಳನ್ನು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಗಮನಕ್ಕೆ ತರಬಯಸುತ್ತೇನೆ. ಕೊರೊನಾದಿಂದಾಗಿ ಐದು ವರ್ಷಗಳ ಹಿಂದೆ ಕಾರ್ಯಾಚರಣೆ ಸ್ಥಗಿತಗೊಳಿಸಿದ್ದ ಮಾರ್ಗಸಂಖ್ಯೆ 105, 110, 11ಆರ್‌ಜಿ, 62 ಆರ್‌ಜೆ, 72, 135, 15 ಸಂಖ್ಯೆಯ ಬಸ್ಸುಗಳು ಇದುವರೆವಿಗೂ ಕಾರ್ಯಾಚರಣೆಗೊಂಡಿಲ್ಲ. ಮೈಸೂರು ನಗರದಲ್ಲಿ ನಗರ ಸಾರಿಗೆ ಬಸ್ಸುಗಳನ್ನು ತಮ್ಮ ದೈನಂದಿನ ಚಟುವಟಿಕೆಗಳಿಗಾಗಿ ನಂಬಿಕೊಂಡಿರುವ ಬಹಳಷ್ಟು ಸಂಖ್ಯೆಯ ಪ್ರಯಾಣಿಕರು ಮತ್ತು ಮಾಸಿಕ ಬಸ್ ಪಾಸ್ ಹೊಂದಿರುವವರು ಇದ್ದಾರೆ. ನಿಗದಿತ ಸಮಯಕ್ಕೆ ಬಸ್ಸುಗಳು ಬರದಿದ್ದಾಗ ಪ್ರಯಾಣಿಕರು ಅನಿವಾರ್ಯವಾಗಿ ದುಬಾರಿ ಹಣ ತೆತ್ತು ಆಟೋದಲ್ಲಿ ತಮ್ಮ ಕಾರ್ಯಸ್ಥಳಗಳಿಗೆ ತಲುಪಬೇಕಾಗುತ್ತಿದೆ. ಸ್ಥಗಿತವಾಗಿರುವ ಎಲ್ಲಾ ನಗರ ಸಾರಿಗೆ ಬಸ್ಸುಗಳನ್ನು ಕೂಡಲೇ ಮರುಕಾರ್ಯಾಚರಣೆಗೊಳಿಸಬೇಕು. ಸಂಖ್ಯೆ 161ಕ್ಕೆ ನಿಲ್ದಾಣದ ಕೋಡ್‌ನ್ನು ಎಸ್.ಎಂ.ಎಸ್ ಮಾಡುವ ಮೂಲಕ ಪ್ರಯಾಣಿಕರು ಬಸ್ಸುಗಳ ಆಗಮನದ ಬಗ್ಗೆ ಮಾಹಿತಿ ಪಡೆದುಕೊಳ್ಳುವ ವ್ಯವಸ್ಥೆಯನ್ನು ಮರುಜಾರಿಗೊಳಿಸಬೇಕು.

ಇತ್ತೀಚೆಗೆ ಮೈಸೂರು ನಗರ ಸಾರಿಗೆ ಸೌಲಭ್ಯವನ್ನು ಹೊರ ವರ್ತುಲ ರಸ್ತೆಗಳಿಗೂ ವಿಸ್ತರಿಸಿರುವುದು ಸಂತಸದ ಸಂಗತಿ. ಆದರೆ ಪ್ರಯಾಣಿಕರಿಗೆ ನಗರ ಸಾರಿಗೆ ಬಸ್ ನಿಲ್ದಾಣದಲ್ಲಿ ಮತ್ತು ತಂಗುದಾಣಗಳಲ್ಲಿ ಬಸ್ಸುಗಳ ಆಗಮನದ ಬಗ್ಗೆ ಮಾಹಿತಿಯಿರುವುದಿಲ್ಲ. ಆದಕಾರಣ ಬಸ್ಸುಗಳ ಆಗಮನದ ಬಗ್ಗೆ ಮಾಹಿತಿ ಐ.ಟಿ.ಎಸ್ (INTELLIGENT TRANSPORT SYSTEM) ಫಲಕವನ್ನು ಎಲ್ಲ ನಿಲ್ದಾಣಗಳಲ್ಲೂ ಮರುಚಾಲನೆಗೊಳಿಸಬೇಕು.

ಎರಡನೆಯದಾಗಿ ನಗರದಲ್ಲಿ ಪ್ರಯಾಣಿಕರ ತಂಗುದಾಣಗಳನ್ನು ಸಮರ್ಪಕವಾಗಿ ನಿರ್ವಹಿಸುತ್ತಿಲ್ಲ. ತಂಗುದಾಣಗಳಿಗೆ ಬೆಳಕಿನ ಸೌಲಭ್ಯವಿರುವುದಿಲ್ಲ. ಅಗ್ರಹಾರ, ಸಿದ್ದಪ್ಪ ವೃತ್ತ, ಕೃಷ್ಣರಾಜೇಂದ್ರ ಆಸ್ಪತ್ರೆ, ರೈಲು ನಿಲ್ದಾಣ, ದಾಸಪ್ಪ ವೃತ್ತ, ಯಾದವಗಿರಿಯ ಮೈಸೂರು ಆಕಾಶವಾಣಿ ಕೇಂದ್ರದ ಪಕ್ಕದಲ್ಲಿರುವ ಅಂಚೆ ಕಚೇರಿಯ ಎಡಭಾಗ ಮತ್ತು ಎದುರಿನಲ್ಲಿರುವ ತಂಗುದಾಣ ಹಾಗೂ ಮೈಸೂರು ನಗರದ ಇನ್ನೂ ಹಲವು ತಂಗುದಾಣಗಳಿಗೆ ಬೆಳಕಿನ ಸೌಲಭ್ಯವಿರುವುದಿಲ್ಲ. ಹೀಗಾಗಿ ಮಹಿಳಾ ಪ್ರಯಾಣಿಕರನ್ನೊಳಗೊಂಡಂತೆ ಬಹಳಷ್ಟು ಸಂಖ್ಯೆಯ ಪ್ರಯಾಣಿಕರು ಕತ್ತಲಿನಲ್ಲಿಯೇ ಭಯದಿಂದ ಬಸ್ಸಿಗಾಗಿ ಕಾಯುವಂತಾಗಿದೆ.

ಮೈಸೂರು ನಗರ ಸಾರಿಗೆ ಬಸ್ ನಿಲ್ದಾಣದ ಗ್ರಾಮಾಂತರ ನಿಲ್ದಾಣದ ಜಲ್ಲಿಕಲ್ಲುಗಳು ಎದ್ದುಬಂದಿದ್ದು, ಪ್ರಯಾಣಿಕರು ಬಸ್ಸಿನಿಂದ ಇಳಿದು ನಡೆದುಕೊಂಡು ಹೋಗುವುದು ಕಷ್ಟಕರವಾಗಿದೆ. ಮಳೆ ಬಂದರಂತೂ ಪ್ರಯಾಣಿಕರ ಪಾಡು ಹೇಳತೀರದು. ತುರ್ತಾಗಿ ಇಲ್ಲಿ ರಸ್ತೆ ದುರಸ್ತಿ ಮಾಡಿ ಡಾಂಬರೀಕರಣಗೊಳಿಸಬೇಕು. ಸಂಸದರು ಆದಷ್ಟು ಶೀಘ್ರ ಇತ್ತ ಗಮನಹರಿಸಿ ಮೇಲ್ಕಂಡ ಸಮಸ್ಯೆಗಳನ್ನು ನಿವಾರಿಸಲು ಕ್ರಮ ಕೈಗೊಳ್ಳಬೇಕೆಂದು ಸಾರ್ವಜನಿಕ ಕಳಕಳಿಯಿಂದ ಕೋರುತ್ತೇನೆ.

–ಪರಶಿವಮೂರ್ತಿ, ಜೆ.ಪಿ.ನಗರ, ಮೈಸೂರು.

■ ಹಾರ್ಡ್ವಿಕ್ ಶಾಲೆಗೆ ದೀಪಾಲಂಕಾರ ಮಾಡಿ

ಮಾನ್ಯರೆ,



ಮೈಸೂರಿನ ಹಲವಾರು ಪಾರಂಪರಿಕ ಕಟ್ಟಡಗಳಲ್ಲಿ ಝಾನ್ಸಿ ರಾಣಿ ಲಕ್ಷ್ಮೀಬಾಯಿ ಮುಖ್ಯ ರಸ್ತೆಯಲ್ಲಿರುವ ಒಂದೂವರೆ ಶತಮಾನ (170 ವರ್ಷ) ಕಂಡಿರುವ ಸುಪ್ರಸಿದ್ಧ ಹಾರ್ಡ್ವಿಕ್ ಪ್ರೌಢಶಾಲೆಯು ಒಂದು. ಚೌಕಾಕಾರ ಆವರಣದ ಈ ಕಟ್ಟಡ ನಿರಾಭರಣ ಸುಂದರ ಪಾರಂಪರಿಕ ಪ್ರತೀಕ. ಮದ್ರಾಸ್ ತಾರಸಿಯ ಮೂರು ಅಂತಸ್ತುಗಳ ಈ ಕಟ್ಟಡಕ್ಕೆ ಕಮಾನಿನ ದ್ವಾರರ ಸ್ವಾಗತಿಸುತ್ತದೆ. ಈ ಬಾರಿಯ ದಸರಾ ದೀಪಾಲಂಕಾರದಲ್ಲಿ ಈ ಶಾಲೆಗೆ ದೀಪಾಲಂಕಾರ ವ್ಯವಸ್ಥೆ ಮಾಡುವುದರ ಮೂಲಕ ಈ ಶಾಲೆಯ ಅಂದವನ್ನು ಇನ್ನಷ್ಟು ಹೆಚ್ಚಿಸಬೇಕೆಂದು ಈ ಶಾಲೆಯ ಲಕ್ಷಾಂತರ ಹಳೆಯ ವಿದ್ಯಾರ್ಥಿಗಳ ಪರವಾಗಿ ಮನವಿ.

–ಅಹಲ್ಯ ಸಿ. ನಾ.ಚಂದ್ರೇಗೌಡ, ಜನತಾ ನಗರ, ಮೈಸೂರು

■ ರಸ್ತೆಯಲ್ಲೇ ಹುಟ್ಟು ಹಬ್ಬ ಆಚರಣೆಗೆ ಕಡಿವಾಣವಿರಲಿ!

ಮಾನ್ಯರೆ,

ಇತ್ತೀಚೆಗೆ ಯುವಕರಲ್ಲಿ ಒಂದು ಪಿಡಗು ಹೆಚ್ಚಾಗುತ್ತಿದೆ. ಅದೆಂದರೆ ತಮ್ಮ ಹುಟ್ಟುಹಬ್ಬವನ್ನು ನಡುಬೀದಿಯಲ್ಲಿ ಅಬ್ಬರದಿಂದ ಆಚರಿಸಿಕೊಳ್ಳುವುದು. ಇದರಿಂದ ಸಾರ್ವಜನಿಕರಿಗೆ, ವಾಹನ ಸವಾರರಿಗೆ ಅಕ್ಕಪಕ್ಕದ ಮನೆಯ ನಿವಾಸಿಗಳಿಗೆ ಕಿರಿಕಿರಿ ಉಂಟಾಗುತ್ತಿದೆ. ಇದಕ್ಕೆ ಪೊಲೀಸರು ಕಡಿವಾಣ ಹಾಕಬೇಕಿದೆ. ನಗರ ಪೊಲೀಸ್ ಆಯುಕ್ತರು ಎಲ್ಲಾ ಪೊಲೀಸ್ ಠಾಣೆಗಳಿಗೆ ಕಟ್ಟುನಿಟ್ಟಿನ ಸೂಚನೆಯನ್ನು ನೀಡಿ ಈ ರೀತಿ ರಸ್ತೆಯಲ್ಲೇ ಹುಟ್ಟು ಹಬ್ಬ ಆಚರಣೆ ಮಾಡುವುದನ್ನು ತಡೆಗಟ್ಟಿ, ಸಾರ್ವಜನಿಕ ನೆಮ್ಮದಿಗೆ ಭಂಗವಾಗದ ಹಾಗೆ ನೋಡಿಕೊಳ್ಳಬೇಕಿದೆ.

–ಕೊ.ಸು.ನಸಿಂಹ ಮೂರ್ತಿ, ಹಿರಿಯ ನಾಗರಿಕ, ಚಾಮರಾಜಪುರಂ, ಮೈಸೂರು

■ ನಾಗರಿಕ ಸಮಾಜ ತಲೆತಗ್ಗಿಸುವ ದುಷ್ಕೃತ್ಯ

ಮಾನ್ಯರೆ,

ರಾಜ್ಯ ಹಾಗೂ ರಾಷ್ಟ್ರದ ನಾನಾ ಕಡೆ ಅತ್ಯಾಚಾರದಂತಹ ಅಮಾನವೀಯ ಕೃತ್ಯಗಳು ದಿನೇ ದಿನೆ ಹೆಚ್ಚಾಗುತ್ತಿರುವುದು ಕಳವಳಕಾರಿ ಸಂಗತಿಯಾಗಿದೆ. ಕೊಲ್ಕತ್ತಾ ವೈದ್ಯೆ ಹಾಗೂ ಕಾರ್ಕಳ ಯುವತಿ ಮೇಲೆ ನಡೆದಿರುವ ಗ್ಯಾಂಗ್ ರೇಪ್ ಪ್ರಕರಣಗಳು ನಾಗರಿಕ ಸಮಾಜ ತಲೆ ತಗ್ಗಿಸುವಂತೆ ಮಾಡಿದೆ. ನಮ್ಮ ಸಮಾಜದಲ್ಲಿ ಈ ರೀತಿ ಅತ್ಯಾಚಾರವೆಸಗಿದ ಪ್ರಕರಣಗಳನ್ನು ಗಮನಿಸಿದಾಗ, ಮನುಷ್ಯ ಯಾಕೆ ಹೀಗೆ ಮಾನವೀಯತೆಯನ್ನು ಮರೆತು ಮೃಗೀಯ ವರ್ತನೆಯಲ್ಲಿ ತೊಡಗುತ್ತಿದ್ದಾನೆ ಎಂಬುದು ತಿಳಿಯದಾಗಿದೆ. ಮಾನವ ತನ್ನ ಪ್ರೀತಿ, ಮಮತೆ, ವಾತ್ಸಲ್ಯ ಹಾಗೂ ಸ್ನೇಹ ಸಂಬಂಧಕ್ಕಿಂತ ಕ್ಷಣಿಕ ಲೈಂಗಿಕ ಸುಖಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಟ್ಟು ಮೌಲ್ಯಗಳನ್ನು, ಸಂಬಂಧಗಳನ್ನು ಗಾಳಿಗೆ ತೂರಿ ಈ ರೀತಿಯ ಪಾಪ ಕೃತ್ಯಗಳಲ್ಲಿ ತೊಡಗಿಸಿಕೊಳ್ಳುವುದು ತರವಲ್ಲ. ಅಲ್ಲದೇ ಕ್ಷಣಿಕ ಸುಖಕ್ಕಾಗಿ ಮನುಷ್ಯ ಧರ್ಮವನ್ನು ಮರೆಯುವುದು ಶೋಭೆ ತರುವಂತಹದಲ್ಲ.

–ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ವಿಶ್ವವಂದಿತ ವಿಘ್ನೇಶ್ವರ

ಬನ್ನೂರು ಕೆ.ರಾಜು
ಸಾಹಿತಿ–ಪತ್ರಕರ್ತ



“ ಪುಟ್ಟ ಪುಟ್ಟ ಮಕ್ಕಳಿಂದ ಆರಂಭಿಸಿ, ಪುಟಿದೇಳುವ ಯುವಜನರಿಂದ ಹಿಡಿದು ಪುಣ್ಯಕ್ಷೇತ್ರಗಳತ್ತ ಮುಖ ಮಾಡಿರುವ ಹಿರಿಯ ಜೀವಿಗಳ ತನಕ ಗಣಪತಿ ಎಂದರೆ ಅತ್ಯಂತ ಅಚ್ಚುಮೆಚ್ಚು. ಅನನ್ಯಭಕ್ತಿ. ಗಣೇಶ ಚತುರ್ಥಿಯಲ್ಲಂತೂ ಇವರೆಲ್ಲರ ಸಂಭ್ರಮಕ್ಕೆ ಪಾರವೇ ಇಲ್ಲ. ಮನೆ ಮನೆಗಳಲ್ಲಿ, ಬೀದಿ ಬೀದಿಗಳಲ್ಲಿ, ಗಲ್ಲಿ ಗಲ್ಲಿಗಳಲ್ಲಿ ಚಪ್ಪರ ಹಾಕಿ ಮಂಟಪ ಕಟ್ಟಿ ಗಣಪತಿ ಕೂರಿಸಿ ಪೂಜಿಸಿ ಸಂತಸಪಡುವವರಿಗೇನೂ ಕಮ್ಮಿಯಿಲ್ಲ. ಸರ್ವ ಸಂಕಷ್ಟಗಳ ಸಂಹಾರಕ, ಸಕಲ ವಿಘ್ನಗಳ ನಿವಾರಕ, ಜಗದೋದ್ಧಾರಕ ಗಣೇಶನನ್ನು ಭಕ್ತಿಯಿಂದ ಪೂಜಿಸಿ ಸಂತುಷ್ಟಭಾವದಿಂದ ಪುನೀತರಾಗುವ ಪರಮ ಪವಿತ್ರ ದಿನ ಗಣೇಶ ಚತುರ್ಥಿ ಹಬ್ಬ.

“ಶುಕ್ಲಾಂ ಬರಧರಂ ವಿಷ್ಣುಂ
ಶಶಿವರ್ಣಂ ಚತುರ್ಭುಜಂ।
ಪ್ರಸನ್ನ ವದನಂ ಧ್ಯಾಯೇತ್
ಸರ್ವ ವಿಘ್ನೋಪ ಶಾಂತಯೇ॥
ಅಗಜಾನನ ಪದ್ಮಾರ್ಕಂ
ಗಜಾನನಂ ಅಹರ್ನಿಶಂ।
ಅನೇಕದಂತಂ ಭಕ್ತಾನಾಂ
ಏಕದಂತಂ ಉಪಾಸ್ಮಹೇ॥”

ವಿಶ್ವವಂದಿತ, ವಿಶ್ವಪೂಜಿತ ಶ್ರೀ ಗಣೇಶನಿಗೆ ಅಸಂಖ್ಯ ನಾಮಾಂಕಿತಗಳು. ಗಣೇಶನ ಹೆಸರುಗಳ ವಿಸ್ತಾರದಂತೆಯೇ ಆತನ ಮಹಿಮೆಯೂ ಅಪಾರವೇ. ಗಣೇಶನ ವೈಶಿಷ್ಟ್ಯವೇ ಅಂತಾದ್ದು. ಆದರೆ, ಯಾವ ನಾಮಾಂಕಿತದಿಂದ ಸ್ಮರಿಸಿದರೂ, ಪೂಜಿಸಿದರೂ ಭಕ್ತರಿಗೊಲಿಯುವ ಭಕ್ತವತ್ಸಲ ಈ ಗಣೇಶ. ಹಾಗಾಗಿ ದೇವ–ದೇವತೆಗಳಲ್ಲೆಲ್ಲಾ ಗಣೇಶನಿಗೆ ಒಂದು ವಿಶಿಷ್ಟ ಸ್ಥಾನ. ಅವನಿಗೇ ಮೊದಲ ಮನ್ನಣೆ. ಅಗ್ರಪೂಜೆಯ ಮಹಾರಾಧನೆ. ನಮ್ಮ ಹಿಂದೂ ಸಂಪ್ರದಾಯದಲ್ಲಿ ಯಾವುದೇ ಕಾರ್ಯ ಆರಂಭಿಸಬೇಕೆಂದರೂ, ದೇವರ ಉತ್ಸವಾದಿ ಕಾರ್ಯ ಪೂಜೆಗಳನ್ನು ಮಾಡಬೇಕೆಂದರೂ ಮೊದಲು ಪೂಜೆಗೈವುದು ಗಣಪತಿಗೇ. ಗಣನಾಥನು ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಕನೆಂದು ವೇದಗಳು, ಉಪನಿಷತ್ತುಗಳೇ ಸಾರಿವೆ. ಇಡೀ ಜಗತ್ತಿಗೆ ಆಧಾರ, ಸಕಲ ಪ್ರಮಥಗಣಗಳಿಗೆ, ದೇವಗಣಗಳಿಗೆ, ಪ್ರಾಣಿಗಣಗಳಿಗೆ ಮನುಷ್ಯಗಣಗಳಿಗೆ ಅಧಿಪತಿ ಯಾಗಿ, ಪ್ರೇರಕ ಶಕ್ತಿಯಾಗಿ ವಿಶೇಷ ಪೂಜೆಗಳಿಗೆ ಗಣಪತಿ ಪಾತ್ರನಾಗಿದ್ದಾನೆ. ಯಾವುದೇ ಶುಭಕಾರ್ಯಗಳ ಪ್ರಾರಂಭಕ್ಕೆ ಸಕಲಗಣಗಳ ಅಧಿಪತಿಯಾದ ವಿಘ್ನ ವಿನಾಶಕ ಗಣೇಶನ ಅನುಮತಿ–ಅನುಗ್ರಹ ಬಹುಮುಖ್ಯ.

ಗಣಪತಿಯು ಮೂಲಾಧಾರ ಚಕ್ರದ ದೇವತೆಯಾಗಿದ್ದು, ಷಟ್ಚಕ್ರದೊಳಗಿನ ಮೂಲಾಧಾರ ಚಕ್ರವು ಪ್ರಥಮ ಕ್ರಮಾಂಕವನ್ನು ಹೊಂದಿದೆ. ಈ ಚಕ್ರವು ಜಾಗೃತಗೊಂಡ ನಂತರ ಆಧ್ಯಾತ್ಮಿಕ ಉನ್ನತಿಯು ಆರಂಭವಾಗುತ್ತದೆ. ಪ್ರಾಚೀನ ಕಾಲದಲ್ಲಿ ಏನೇ ಬರೆಯಬೇಕೆಂದರೂ 'ಓಂ ಶ್ರೀ ಗಣೇಶಾಯ ನಮಃ' ಎಂದು ಬರೆದು ಆರಂಭಿಸುತ್ತಿದ್ದರು. ಈಗಲೂ ನಾವಿದನ್ನು ಅಲ್ಲಲ್ಲಿ ನೋಡಬಹುದಾಗಿದೆ. ಕಾರಣ ಎಲ್ಲಕ್ಕೂ ಮೊದಲು ಗಣಪತಿಯ ಕೃಪೆ ಬೇಕೆಂಬುದು ಮತ್ತು ಗಣಪತಿ ಬುದ್ಧಿದಾತನಾಗಿರುವುದು.

ವ್ಯಾಸ ಮಹರ್ಷಿಗಳು ಕೂಡ ಗಣಪತಿಯ ಅಸಾಮಾನ್ಯ ಬುದ್ಧಿವಂತಿಕೆಯನ್ನು ಅರಿತು 'ಮಹಾಭಾರತ'ವನ್ನು ಬರೆಯಲು ಗಣಪತಿಯನ್ನು ಆಯ್ಕೆ ಮಾಡಿಕೊಂಡಿದ್ದರು. ಅದನ್ನು ಬರೆಯಲು ಗಣಪತಿ ತನ್ನ ಒಂದು ದಂತವನ್ನು ತಾನೇ ಮುರಿದು ಅದನ್ನೇ ಲೇಖನಿಯನ್ನಾಗಿ ಮಾಡಿಕೊಂಡಿದ್ದನಂತೆ. ಇದರಿಂದಲೇ ಅವನು 'ಏಕದಂತ' ನಾದನೆಂದು ಹೇಳುತ್ತಾರೆ. ಇನ್ನೊಂದೆಡೆ ತನ್ನನ್ನು ಅಪಮಾನಿಸಿದ ಚಂದ್ರನನ್ನು ಶಪಿಸಲು ಗಣಪತಿ ತನ್ನ ದಂತವೊಂದನ್ನು ಮುರಿದುಕೊಂಡನೆಂದೂ ಹೇಳುವುದುಂಟು. ಹಾಗೆಯೇ ಮತ್ತೊಂದೆಡೆ ಶಿವನಿಂದ ವರವಾಗಿ ಪಡೆದಿದ್ದ ಪರಶುರಾಮನು ಪ್ರಯೋಗಿಸಿದ ಕೊಡಲಿಯಿಂದ ಗಣಪತಿಯ ದಂತವೊಂದು ತುಂಡಾಯಿತೆಂದೂ ಹೇಳುತ್ತಾರೆ. ಅದು ತನ್ನ ತಂದೆಯು ಪರಶುರಾಮನಿಗೆ ಕೊಟ್ಟಿದ್ದ ಆಯುಧವನ್ನು ಗೌರವಿಸುವ ಸಲುವಾಗಿ ಹೀಗಾಯಿತಂತೆ. ಒಟ್ಟಿನಲ್ಲಿ ಗಣಪತಿಯ ಏಕದಂತದ ಹಿಂದೆ ಇಂತಹ ಹಲವಾರು ಸ್ವಾರಸ್ಯಕರ ಕಥೆಗಳಿವೆ. ಅಷ್ಟೇ ಅಲ್ಲ ಗಣಪತಿಯ ಬಗ್ಗೆಯೇ ನಾನಾ ಬಗೆಯ ಕಥೆಗಳು, ದೃಷ್ಟಾಂತಗಳಿವೆ. ಇಂಥ ಗಣಪತಿಯು ವಿದ್ಯಾಧಿಪತಿಯಾಗಿದ್ದು ನಾಲ್ಕು ವೇದಗಳೊಂದಿಗೆ ಇತರ ಉಪವೇದ ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ ಛಂದಸ್ಸು, ಪೂರ್ವ ಮತ್ತು ಉತ್ತರ ಮೀಮಾಂಸೆ, ನ್ಯಾಯ ಪುರಾಣ, ಧರ್ಮಶಾಸ್ತ್ರ, ನೀತಿಶಾಸ್ತ್ರ ಮೊದಲಾದ ಹದಿನೆಂಟು ವಿದ್ಯೆ ಮತ್ತು ಅರವತ್ತ ನಾಲ್ಕು ಕಲೆಗಳ ಅಧಿಪತ್ಯವನ್ನು ಹೊಂದಿರುವನು.

“ವಂದೇ ವಂದಾರು
ಮಿಂದು ಭೂಷಣ ನಂದನಂ।
ಅಮಂದಾನಂದನಂದೋಹ
ಬಂಧುರಂ ಸಿಂಧುರಾನನಮ್॥”

ಪೂಜಿಸುವವರಿಗೆ ಕಲ್ಪವೃಕ್ಷ. ಚಂದ್ರಶೇಖರ ತನಯ ಅನಂತವಾದ ಆನಂದ ಸ್ವರೂಪಿಯಾದ ಗಣಪತಿಗೆ ವಂದಿಸುತ್ತಿದ್ದೇನೆಂಬುದು ಈ ಶ್ಲೋಕದ ಭಾವಾರ್ಥ. ಹೀಗೆ ವಂದಿಸಿ ಪೂಜಿಸುವುದರಿಂದ ಶಿವಪುತ್ರ, ಕರಿಮುಖ ವಿನಾಯಕ ಬೇಡಿದ್ದನ್ನು ಕರುಣಿಸುತ್ತಾನೆಂಬ ನಂಬಿಕೆ ಭಕ್ತ ಜನಗಳದ್ದು.

ಪುಟ್ಟ ಪುಟ್ಟ ಮಕ್ಕಳಿಂದ ಆರಂಭಿಸಿ, ಪುಟಿದೇಳುವ ಯುವಜನರಿಂದ ಹಿಡಿದು ಪುಣ್ಯಕ್ಷೇತ್ರಗಳತ್ತ ಮುಖ ಮಾಡಿರುವ ಹಿರಿಯ ಜೀವಿಗಳ ತನಕ ಗಣಪತಿ ಎಂದರೆ ಅತ್ಯಂತ ಅಚ್ಚುಮೆಚ್ಚು. ಅನನ್ಯಭಕ್ತಿ. ಗಣೇಶ ಚತುರ್ಥಿಯಲ್ಲಂತೂ ಇವರೆಲ್ಲರ ಸಂಭ್ರಮಕ್ಕೆ ಪಾರವೇ ಇಲ್ಲ. ಮನೆ ಮನೆಗಳಲ್ಲಿ, ಬೀದಿ ಬೀದಿಗಳಲ್ಲಿ, ಗಲ್ಲಿ ಗಲ್ಲಿಗಳಲ್ಲಿ ಚಪ್ಪರ ಹಾಕಿ ಮಂಟಪ ಕಟ್ಟಿ ಗಣಪತಿ ಕೂರಿಸಿ ಪೂಜಿಸಿ ಸಂತಸಪಡುವವರಿಗೇನೂ ಕಮ್ಮಿಯಿಲ್ಲ. ಸರ್ವ ಸಂಕಷ್ಟಗಳ ಸಂಹಾರಕ, ಸಕಲ ವಿಘ್ನಗಳ ನಿವಾರಕ, ಜಗದೋದ್ಧಾರಕ ಗಣೇಶನನ್ನು ಭಕ್ತಿಯಿಂದ ಪೂಜಿಸಿ ಸಂತುಷ್ಟಭಾವದಿಂದ ಪುನೀತರಾಗುವ ಪರಮ ಪವಿತ್ರ ದಿನ ಗಣೇಶ ಚತುರ್ಥಿ ಹಬ್ಬ. ಆಸ್ತಿಕರ ಪಾಲಿಗಂತೂ ಇದೊಂದು ಮಹಾಪುಣ್ಯ ದಿನವೇ ಸರಿ. ಇದು ಬರೀ ಹಿಂದೂ ಧರ್ಮೀಯರಿಗಷ್ಟೇ ಅಲ್ಲದೆ ಸರ್ವಧರ್ಮೀಯರ ಭಾವೈಕ್ಯತೆಯ ಹಬ್ಬವೂ ಹೌದು. ಗಣೇಶ ಚತುರ್ಥಿಯ ಆಚರಣೆಯಲ್ಲಿ ಇಂಥ ಸಾರ್ಥಕತೆ ಇದೆ. ಹಾಗಾಗಿ ಹಿಂದು, ಮುಸ್ಲಿಂ, ಕ್ರೈಸ್ತರೆಂಬ ಭೇದ–ಭಾವ ತೊರೆದು ಎಲ್ಲರೂ ಕೂಡಿ ಸಂಭ್ರಮಿಸುವ ಮಹಾಹಬ್ಬವಿದು. ಸ್ವಾತಂತ್ರ್ಯ ಚಳವಳಿಯ ಸಂದರ್ಭದಲ್ಲಿ ರಾಷ್ಟ್ರವನ್ನು ಒಗ್ಗೂಡಿಸಲು ಬಾಲಗಂಗಾಧರ ತಿಲಕರು ದೇಶಾದ್ಯಂತ ಗಣೇಶನ ಹಬ್ಬವನ್ನು ಆಚರಿಸಲು ಕರೆಕೊಟ್ಟಿದ್ದರು. ಸಾರ್ವಜನಿಕವಾಗಿ ಗಣೇಶೋತ್ಸವವನ್ನು ನಡೆಸಲು ಮೊದಲಿಗೆ ನಾಂದಿ ಹಾಡಿದವರೇ ತಿಲಕರು. ಆಗ ಗಣೇಶೋತ್ಸವ ಎಂಬುದು ರಾಷ್ಟ್ರದಾದ್ಯಂತ ಎಲ್ಲರಿಗೂ ಸ್ಫೂರ್ತಿಯ ಚಿಲುಮೆಯಾಗಿತ್ತು. ಗಣೇಶ ಚತುರ್ಥಿಯ ಹಬ್ಬಕ್ಕೆ ಅಂತಹ ಮಹತ್ವವುಂಟು. ಹಾಗೆಯೇ ಗಣಪತಿ ಹಬ್ಬದ ನಿಮಿತ್ತ ಜರುಗುವ ಗಣೇಶೋತ್ಸವಗಳಲ್ಲಿ ಸಾರ್ವಜನಿಕವಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುವಷ್ಟು ಬೇರಾವುದೇ ಹಬ್ಬ ಹರಿದಿನ ಉತ್ಸವಗಳಲ್ಲಿ ಕಾಣಲಾಗದು. ಸಾರ್ವಜನಿಕವಾಗಿ ವಾರಗಟ್ಟಲೆ, ತಿಂಗಳು ಗಟ್ಟಲೆ ಗಣಪತಿಯನ್ನು ಕೂರಿಸಿ ಪೂಜಿಸುವುದರಿಂದ ಈ ದಿನಗಳಲ್ಲಿ ಪ್ರತಿದಿನವು ಕಲಾಸಂಸ್ಕೃತಿಯ ಸುಗ್ಗಿಯೇ ಸೃಷ್ಟಿಯಾಗಿರುತ್ತದೆ. ಒಂದು ರೀತಿ ಗಣೇಶನ ಹಬ್ಬವೆಂಬುದು ಸಾಂಸ್ಕೃತಿಕ ಮತ್ತು ಧಾರ್ಮಿಕ ಜಢತ್ವಕ್ಕೊಂದು ದಿವ್ಯೌಷಧಿ ಎನ್ನಬಹುದು.

ಭಾದ್ರಪದಶುದ್ಧ ಚತುರ್ಥಿಯಂದು ಗಣೇಶ ಚತುರ್ಥಿಯನ್ನು ಆಚರಿಸಲಾಗುತ್ತದೆ. ಗಣಪತಿಯ ಅನುಗ್ರಹವೊಂದಿದ್ದರೆ ಸರ್ವ ಕಾರ್ಯಗಳಲ್ಲೂ ಯಶಸ್ಸು ಕೈಗೂಡುತ್ತದೆಂಬ ನಂಬಿಕೆ ಎಲ್ಲರದ್ದೂ ಆಗಿದೆ. ಆದ್ದರಿಂದ **'ವಕ್ರತುಂಡ ಮಹಾಕಾಯ ಕೋಟಿಸೂರ್ಯ ಸಮಪ್ರಭಾ ನಿರ್ವಿಘ್ನಂ ಕುರುಮೇ ದೇವ ಸರ್ವಕಾರ್ಯೇಷು ಸರ್ವದಾ'** ಶ್ಲೋಕ ಗಣಪತಿ ಆರಾಧನೆಯಲ್ಲಿ ಅತ್ಯಂತ ವಿಶೇಷತೆ ಪಡೆದುಕೊಂಡಿದೆ. **'ಗಣೇಶಸ್ಯ ಜನ್ಮೋತ್ಸವ ಭಾದ್ರಪದ ಮಾಸೇ ಶುಕ್ಲಪಕ್ಷೇ ಚತುರ್ಥಿ ತಿಥೌಭವತಿ'**

ಗಣೇಶ ಚತುರ್ಥಿ ನಮ್ಮ ದೇಶದಲ್ಲಷ್ಟೇ ಅಲ್ಲ, ವಿದೇಶಗಳಲ್ಲೂ ಆಚರಣೆಯಲ್ಲಿದೆ. ಮಹಾರಾಷ್ಟ್ರದಲ್ಲಿ ಗಣಪತಿಯ ಪ್ರಭಾವವಿದ್ದು ಪಶ್ಚಿಮ ಮಹಾರಾಷ್ಟ್ರದ ಅಷ್ಟವಿನಾಯಕಮಂದಿರ, ಮುಂಬಯಿ ನಗರದಿಂದ 75 ಕಿ.ಮೀ. ದೂರವಿರುವ ಟಿಟ್ವಾಲದಲ್ಲಿನ ಮಹಾಗಣಪತಿ ದೇವಾಲಯ, ಪುಣೆ ಸಮೀಪ ಚಚ್ವಾಡದಲ್ಲಿನ ಮಂಗಳಮೂರ್ತಿ ಗಣಪತಿ ದೇವಸ್ಥಾನ, ನಾಸಿಕ್‌ನ ಶ್ರೀ ಮೋದಕೇಶ್ವರ ಮಂದಿರ, ನಾಗಪುರದ ಶ್ರೀ ಗಣೇಶ ದೇಗುಲಗಳು ಗಮನಾರ್ಹವೆನಿಸಿವೆ. ಹೊರದೇಶಗಳಲ್ಲೂ ಸಾಕಷ್ಟು ಪ್ರಾಚೀನ ಗಣಪತಿ ದೇಗುಲಗಳಿವೆ. ಚೀನಾದ ಕುಂಗ್ ಶಿಯಾಂಗ್ ಎಂಬಲ್ಲಿ ಪ್ರಾಚೀನ ಕಾಲದ ಒಂದು ಗಣಪತಿ ಮೂರ್ತಿ ದೊರೆತಿದ್ದು ಅದು ಅಲ್ಲಿ ವಿಶೇಷ ಮಹತ್ವವನ್ನು ಪಡೆದುಕೊಂಡು ಪೂಜನೀಯವಾಗಿದೆ. ಆಫ್ಘಾನಿಸ್ತಾನ, ಇರಾನ್, ಪರ್ಶಿಯಾ, ನೇಪಾಳ, ಮಲೇಷಿಯಾ, ಟಿಬೆಟ್, ಮಂಗೋಲಿಯಾ, ಬರ್ಮಾ, ಚೀನಾ, ಶ್ರೀಲಂಕಾ, ಥೈಲ್ಯಾಂಡ್, ವಿಯಟ್ನಾಂ, ಕಾಂಬೋಡಿಯಾ, ಜಾವಾ ಮುಂತಾದ ದೇಶಗಳಲ್ಲೂ ಗಣಪತಿ ತನ್ನದೇ ಆದ ಅಧಿಪತ್ಯವನ್ನು ಹೊಂದಿದ್ದು ಅಲ್ಲೆಲ್ಲಾ ತನ್ನ ಮಹಾ ಭಕ್ತವೃಂದವನ್ನು ಪಡೆದು ಪ್ರಭಾವಿ ದೇವನೆನಿಸಿದ್ದಾನೆ.

“ಓಂ ಗಣಾಧಿಪಾಯ ನಮಃ।
ದೂರ್ವಾಯುಗ್ಮಂ ಪೂಜಾಯಾಮಿ
ಓಂ ಪುತ್ರಾಯ ನಮಃ।
ದೂರ್ವಾಯುಗ್ಮಂ ಪೂಜಾಯಾಮಿ”

ಈ ರೀತಿಯಾಗಿ ಮೂಷಿಕವಾಹನ ಗಣೇಶನನ್ನು 21 ಜೊತೆ ಗರಿಕೆ ಹುಲ್ಲುಗಳಿಂದ ಪೂಜಿಸುವುದು ವಾಡಿಕೆ. ಗಣಪತಿಗೆ ಅತ್ಯಂತ ಪ್ರಿಯವಾದುದು ದೂರ್ವಾ ಅರ್ಥಾತ್ ಗರಿಕೆ ಹುಲ್ಲು. ಭಕ್ತಿಯಿಂದ ಪೂಜಿಸಿದರೆ ಸಾಕು ಗಣಪತಿ ಒಲಿದು ವರ ನೀಡುತ್ತಾನೆ. ಸಂಕಷ್ಟಗಳೆಲ್ಲವನ್ನೂ ಕಳೆದು ಬಿಡುತ್ತಾನೆ. ಅದಕ್ಕೇ ಅವನನ್ನು ವರಸಿದ್ಧಿ ವಿನಾಯಕನೆನ್ನುವುದು. ಇಂಥ ವಿಘ್ನೇಶ್ವರ ಸರ್ವರಿಗೂ ಸನ್ಮಂಗಳವನ್ನುಂಟು ಮಾಡಲೆಂಬುದೇ ಗಣೇಶ ಚತುರ್ಥಿ ಹಬ್ಬದ ಆಚರಣೆಯಲ್ಲಿ ಎಲ್ಲರ ಆಶಯ.

ಗೌರಿ–ಗಣೇಶ ಹಬ್ಬ ಸಾಮರಸ್ಯದ ಸಂಕೇತ

ಪೌರಕಾರ್ಮಿಕರಿಗೆ ಬಾಗಿನ ಸಮರ್ಪಣೆ



ಜೀವಧಾರ ರಕ್ತ ನಿಧಿ ಕೇಂದ್ರದಲ್ಲಿ ಸ್ವಚ್ಛತಾ ಸೇನಾನಿಗಳಾದ ಪೌರಕಾರ್ಮಿಕರಿಗೆ ಸ್ವರ್ಣ ಗೌರಿ ಗಣೇಶ ಹಬ್ಬದ ಪ್ರಯುಕ್ತ ಬಾಗಿನ ವಿತರಿಸಲಾಯಿತು.

ಮೈಸೂರು, ಸೆ.6(ಜಿಎ)–ಹಿಂದೂ ಧರ್ಮದ ಪವಿತ್ರ ಹಬ್ಬಗಳಲ್ಲಿ ಒಂದಾದ ಗೌರಿ–ಗಣೇಶನ ಹಬ್ಬವು ಸಾಮರಸ್ಯದ ಸಂಕೇತವಾಗಿದ್ದು, ಈ ಹಬ್ಬವನ್ನು ಶ್ರದ್ಧಾ–ಭಕ್ತಿಯಿಂದ ಶಾಂತಿಯುತವಾಗಿ ಆಚರಿಸಬೇಕು ಎಂದು ಶ್ರೀ ದುರ್ಗಾ ಫೌಂಡೇಶನ್ ಅಧ್ಯಕ್ಷೆ ರೇಖಾ ಶ್ರೀನಿವಾಸ್ ಕರೆ ನೀಡಿದರು.

ಮೈಸೂರಿನ ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿರುವ ಜೀವಧಾರ ರಕ್ತ ನಿಧಿ ಕೇಂದ್ರದಲ್ಲಿ ಸ್ವಚ್ಛತಾ ಸೇನಾನಿಗಳಾದ ಪೌರಕಾರ್ಮಿಕರಿಗೆ ಸ್ವರ್ಣ ಗೌರಿ ಗಣೇಶ ಹಬ್ಬದ ಪ್ರಯುಕ್ತ ಬಾಗಿನ ಸಮರ್ಪಣೆ ಮಾಡಿ ಮಾತನಾಡಿದ ಅವರು, ಯಾವುದೇ ಒಳ್ಳೆಯ ಕೆಲಸ ಪ್ರಾರಂಭಿಸುವ ಮೊದಲು ವಿಘ್ನ ನಿವಾರಕ ಗಣೇಶನ ಪೂಜಿಸುವುದು ಹಿಂದೂ ಧರ್ಮಿಯರ ಪದ್ಧತಿ. ಇಂತಹ ಪವಿತ್ರ ಪೂಜಾ ಸ್ಥಾನ ಪಡೆದುಕೊಂಡಿರುವ ಗಣಪತಿಯನ್ನು ಪ್ರತಿಷ್ಠಾಪಿಸಿ ದೇಶದ ಆಚಾರ–ವಿಚಾರ, ಸಂಸ್ಕೃತಿ ಮುಂದುವರಿಸುತ್ತಿರುವುದು ಸಂತಸ ತಂದಿದೆ ಎಂದರು. ಬಿಜೆಪಿ ಮಹಿಳಾ ಮೋರ್ಚಾ ನಗರಾಧ್ಯಕ್ಷೆ ರೇಣುಕ ರಾಜ್ ಮಾತನಾಡಿ, ಬಾಲಗಂಗಾಧರ ತಿಲಕ್ ಅವರು ಆಗಿನ ಸಂದರ್ಭದಲ್ಲಿ ಭಾರತ ದೇಶಕ್ಕೆ ಸ್ವಾತಂತ್ರ್ಯ ಹೋರಾಟಕ್ಕೆ ಭಾರತೀಯರನ್ನು ಸಂಘಟಿಸುವ ಉದ್ದೇಶದಿಂದ ಸಾರ್ವ ಜನಿಕ ಗಣೇಶೋತ್ಸವಕ್ಕೆ ಚಾಲನೆ ನೀಡಿದ್ದರು. ಆದರೆ ಪ್ರಸ್ತುತವಾಗಿ ಹಿಂದೂ ಧರ್ಮದ ಬಗ್ಗೆ ಜಾಗೃತಿ ಮೂಡಿ ಸಲು ಸಾರ್ವಜನಿಕ ಗಣೇಶೋತ್ಸವ ಅವಶ್ಯಕವಾಗಿದ್ದು, ನಮ್ಮ ಸಂಸ್ಕೃತಿ ರಕ್ಷಣೆ ಮಾಡುವುದು ಮತ್ತು ಹಿಂದೂ ಸಮಾಜ ನಿರ್ಮಾಣ ಮಾಡಲು ಇಂತಹ ಹಬ್ಬ ಸಹಕಾರಿ ಎಂದರು.

ಕಾರ್ಯಕ್ರಮದಲ್ಲಿ 50ಕ್ಕೂ ಹೆಚ್ಚು ಸ್ವಚ್ಛತಾ ಸೇನಾನಿಗಳಿಗೆ ಬಾಗಿನ ವಿತರಿಸಲಾಯಿತು. ನಟಿ ರೇಣುಕಾ, ಅಶ್ವಿನಿ ಗೌಡ, ಉಮೇಶ್, ರಶ್ಮಿ, ವಿಶ್ವ ಹಿಂದೂ ಪರಿಷತ್ ವಿಭಾಗ ಸಂಯೋಜಕಿ ಸವಿತಾ ಘಾಟ್ಕೆ, ಸೂರಜ್, ಸದಾಶಿವ್, ಸುರೇಶ್ ಮತ್ತಿತರರು ಉಪಸ್ಥಿತರಿದ್ದರು.

ಡಿಸೆಂಬರ್ ಅಂತ್ಯಕ್ಕೆ ಚಾಮುಂಡಿಬೆಟ್ಟದ ನಂದಿ ರಸ್ತೆ ದುರಸ್ಥಿ ಕಾಮಗಾರಿ ಪೂರ್ಣ

ಮೈಸೂರು, ಸೆ. 6 (ಆರ್‌ಕೆ)– ದಸರಾ ವೇಳೆಗೆ ವಾಹನ ಸಂಚಾರಕ್ಕೆ ಮುಕ್ತಗೊಳಿಸಲು ಉದ್ದೇಶಿಸಿದ್ದ ಚಾಮುಂಡಿಬೆಟ್ಟದ ನಂದಿ ಪ್ರತಿಮೆಗೆ ಹೋಗುವ ರಸ್ತೆಯ ದುರಸ್ಥಿ ಕಾಮಗಾರಿ ಡಿಸೆಂಬರ್ ಅಂತ್ಯಕ್ಕೆ ಪೂರ್ಣಗೊಳ್ಳಲಿದೆ ಎಂದು ಲೋಕೋಪಯೋಗಿ ಇಲಾಖೆ ಎಕ್ಸಿಕ್ಯೂಟಿವ್ ಇಂಜಿನಿಯರ್ ರಾಜು ತಿಳಿಸಿದ್ದಾರೆ.

ಅತಿಯಾಗಿ ಸುರಿದ ಮಳೆಯಿಂದಾಗಿ ಈ ರಸ್ತೆಯಲ್ಲಿ ಭೂಕುಸಿತ ಉಂಟಾಗಿತ್ತು. ನವೀನ ತಂತ್ರಜ್ಞಾನ ಬಳಸಿ, ದುರಸ್ಥಿ ಕಾಮಗಾರಿ ಆರಂಭಿಸಲಾಗಿತ್ತು. ತಳಮಟ್ಟದ ಸುಭದ್ರ ನೆಲೆಯಲ್ಲಿ ಕಾಂಕ್ರೀಟ್ ತಡೆಗೋಡೆ ನಿರ್ಮಿಸಿ, ಸಮಸ್ಯೆಗೆ ಖಾಯಂ ಪರಿಹಾರ ಕಂಡುಕೊಳ್ಳಲು ಲೋಕೋಪಯೋಗಿ ಇಲಾಖೆ 10 ಕೋಟಿ ರೂ. ಅಂದಾಜು ವೆಚ್ಚದ ಕಾಮಗಾರಿಯನ್ನು ಕೈಗೆತ್ತಿಕೊಂಡಿತ್ತು.

ಈ ನಡುವೆ ಗುತ್ತಿಗೆದಾರನಿಗೆ ಸಮರ್ಪಕ ರೀತಿ ಅನುದಾನ ಬಿಡುಗಡೆ ಮಾಡದಿರುವುದು, ಮತ್ತೆ ಭಾರೀ ಮಳೆ ಹಿನ್ನೆಲೆಯಲ್ಲಿ ನಿಗದಿತ ಅವಧಿಯಲ್ಲಿ ಕೆಲಸ ಪೂರ್ಣಗೊಳಿಸಲಾಗಿರಲಿಲ್ಲ. ಇದೀಗ ಸಮಸ್ಯೆ ಪರಿಹಾರವಾಗಿದ್ದು, ಈಗ ಗುತ್ತಿಗೆದಾರ ಕಾಮಗಾರಿಯನ್ನು ತೀವ್ರಗೊಳಿಸಿರುವುದರಿಂದ 2024ರ ಡಿಸೆಂಬರ್ ಅಂತ್ಯಕ್ಕೆ ಪೂರ್ಣಗೊಳ್ಳುವ ನಿರೀಕ್ಷೆ ಇದೆ. ಹಾಗಾಗಿ 2025ರ ಜನವರಿಯಿಂದ ನಂದಿ ರಸ್ತೆಯನ್ನು ವಾಹನ ಸಂಚಾರಕ್ಕೆ ಮುಕ್ತಗೊಳಿಸಲಾಗುವುದು ಎಂದು ರಾಜು ತಿಳಿಸಿದ್ದಾರೆ.

ಕಳೆದ ಎರಡೂವರೆ ವರ್ಷಗಳಿಂದ ರಸ್ತೆ ಬಂದ್ ಆಗಿರುವುದರಿಂದ ನಂದಿ ಪ್ರತಿಮೆ ನೋಡಲು ಹೋಗುವವರಿಗೆ ಸಮರ್ಪಕ ಮಾರ್ಗ ಲಭ್ಯವಾಗದೆ ತೊಂದರೆಯಾಗಿತ್ತು. ಆದರೆ, ಉತ್ತನಹಳ್ಳಿ ಕಡೆಯಿಂದ ನಂದಿ ಪ್ರತಿಮೆಗೆ ಸಂಪರ್ಕ ಕಲ್ಪಿಸುವ ರಸ್ತೆಯನ್ನು ಅಭಿವೃದ್ಧಿಪಡಿಸಿರುವುದರಿಂದ ಪ್ರವಾಸಿಗರಿಗೆ ಅಷ್ಟೇನೂ ಸಮಸ್ಯೆ ಉಂಟಾಗಿಲ್ಲ ಎಂದು ರಾಜು ತಿಳಿಸಿದ್ದಾರೆ.

21 ದಿನಗಳ ಕಾಲ ದಸರಾ ದೀಪಾಲಂಕಾರ

ಆರಂಭದಿಂದ ಕೊನೆವರೆಗೂ ದೀಪಾಲಂಕಾರದ ಅಂದ ಉಳಿಯಬೇಕು

ಸೆಸ್ಕ್ ಅಧ್ಯಕ್ಷ ರಮೇಶ್ ಬಂಡಿಸಿದ್ದೇಗೌಡ

ಮೈಸೂರು,ಸೆ.6(ಪಿಎಂ)– ದಸರಾದಲ್ಲಿ 21 ದಿನಗಳವರೆಗೆ ವಿದ್ಯುತ್ ದೀಪಾ ಲಂಕಾರ ಇರಬೇಕೆಂದು ಈಗಾಗಲೇ ಮುಖ್ಯಮಂತ್ರಿಗಳು ಉನ್ನತ ಮಟ್ಟದ ಸಭೆಯಲ್ಲಿ ಸೂಚಿಸಿದ್ದು, ಆರಂಭದಿಂದ ಕೊನೆವರೆಗೂ ದೀಪಾಲಂ ಕಾರದ ಅಂದ ಉಳಿಯುವಂತೆ ನೋಡಿಕೊಳ್ಳ ಬೇಕಿದೆ ಎಂದು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ (ಸೆಸ್ಕ್)ದ ಅಧ್ಯಕ್ಷ ರಮೇಶ್ ಬಂಡಿಸಿದ್ದೇಗೌಡ ಹೇಳಿದರು.

ಮೈಸೂರಿನ ವಿಜಯನಗರ 2ನೇ ಹಂತದಲ್ಲಿರುವ ನಿಗಮದ ಪ್ರಧಾನ ಕಚೇರಿಯಲ್ಲಿ ಗುರುವಾರ ನಡೆದ ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘದ ಪದಾಧಿಕಾರಿಗಳೊಂದಿಗಿನ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ನಾಡಹಬ್ಬ ದಸರಾ ನಮ್ಮ ಮನೆ ಹಬ್ಬವೆಂಬ ಮನಸ್ಥಿತಿಯೊಂದಿಗೆ ದೀಪಾಲಂಕಾರ ಮಾಡಿ ದಸರಾ ಉತ್ಸವದ ಅಂದ ಹೆಚ್ಚಿಸಬೇಕು. ಈ ಬಾರಿ ದಸರಾ ವಿದ್ಯುತ್ ದೀಪಾಲಂಕಾರ 21 ದಿನಗಳ ಕಾಲ ಇರಲಿದ್ದು, ಹೀಗಾಗಿ ಹೆಚ್ಚು ಮುತುವರ್ಜಿಯಿಂದ ಇದನ್ನು ನಿರ್ವಹಿಸಬೇಕಿದೆ ಎಂದರು.



ಸೆಸ್ಕ್ ಅಧ್ಯಕ್ಷ ರಮೇಶ್ ಬಂಡಿಸಿದ್ದೇಗೌಡ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಈ ವೇಳೆ ಸೆಸ್ಕ್ ಎಂಡಿ ಜಿ.ಶೀಲಾ, ತಾಂತ್ರಿಕ ನಿರ್ದೇಶಕ ಮುನಿಗೋಪಾಲ್‌ರಾಜು ಇದ್ದಾರೆ

ದಸರಾ ಆಚರಣೆ ಮತ್ತು ದೀಪಾಲಂಕಾರ ನಮ್ಮ ಬದ್ಧತೆ ಎಂಬ ಮನಸ್ಥಿತಿಯೊಂದಿಗೆ ಎಲ್ಲರೂ ಒಂದಾಗಿ ಆಚರಣೆ ಮಾಡಬೇಕಿದೆ. ಆ ಮೂಲಕ ದಸರಾ ವಿದ್ಯುತ್ ದೀಪಾಲಂಕಾರದ ಅಂದ ಹೆಚ್ಚಿಸಬೇಕಿದೆ. ಈ ನಿಟ್ಟಿನಲ್ಲಿ ಯಾವುದೇ ಭಿನ್ನಾಭಿಪ್ರಾಯಗಳಿಲ್ಲದೆ, ಎಲ್ಲರೂ ಒಂದಾಗಿ ದಸರಾ ಆಚರಿಸೋಣ. ಗುತ್ತಿಗೆದಾರರ ಯಾವುದೇ ಸಮಸ್ಯೆಗಳಿದ್ದರೂ ಎಲ್ಲವನ್ನೂ ಬಗೆಹರಿಸಲಾಗುವುದು ಎಂದು ಭರವಸೆ ನೀಡಿದರು.

ಬಹುತೇಕರು ದಸರಾ ಜಂಬೂಸವಾರಿ ಮೆರವಣಿಗೆ ಮುಗಿದ ನಂತರದಲ್ಲಿ ದೀಪಾಲಂಕಾರ ವೀಕ್ಷಣೆಗಾಗಿ ಬರುತ್ತಾರೆ. ಹೀಗಾಗಿ ಕಡೆಯ 8ರಿಂದ 10 ದಿನಗಳು ದೀಪಾಲಂಕಾರ ನಿರ್ವಹಣೆ ಮಾಡುವುದು ಸವಾಲಾಗಲಿದೆ. ಈ ಬಗ್ಗೆ ಹೆಚ್ಚು ನಿಗಾ ವಹಿಸಬೇಕಿದೆ ಎಂದರು.

> ದಸರಾ ದೀಪಾಲಂಕಾರ ಅದ್ದೂರಿಯಾಗಿರಲು ಗುತ್ತಿಗೆದಾರರು ಸಹಕರಿಸಬೇಕು. ಈ ಬಾರಿ ವಿಭಿನ್ನ ರೀತಿಯಲ್ಲಿ ದೀಪಾಲಂಕಾರ ಮಾಡಲು ಚಿಂತನೆ ನಡೆದಿದೆ. 21 ದಿನಗಳವರೆಗೂ ದೀಪಾಲಂಕಾರ ಉಳಿಯುವಂತೆ ಮಾಡುವ ಜೊತೆಗೆ ಗುಣಮಟ್ಟ ಮತ್ತು ಸುರಕ್ಷತೆಗೂ ಆದ್ಯತೆ ನೀಡಬೇಕಿದೆ.
> -ಜಿ.ಶೀಲಾ, ವ್ಯವಸ್ಥಾಪಕ ನಿರ್ದೇಶಕರು, ಸೆಸ್ಕ್

ದಸರಾ ಮುನ್ನವೇ ಪರಿಪೂರ್ಣ ಲೈಟಿಂಗ್: ಸೆಸ್ಕ್ ತಾಂತ್ರಿಕ ನಿರ್ದೇಶಕ ಮುನಿಗೋಪಾಲ್ ರಾಜು ಮಾತನಾಡಿ, ಕಳೆದ ನಾಲ್ಕೈದು ವರ್ಷಗಳಲ್ಲಿ ದಸರಾ ದೀಪಾಲಂಕಾರದ ಆಕರ್ಷಣೆ ಹೆಚ್ಚಾಗಿದೆ. ಅಂತೆಯೇ ಈ ಬಾರಿಯೂ ದೀಪಾಲಂಕಾರಕ್ಕೆ ವಿಶೇಷ ಮೆರಗು ನೀಡುವ ನಿಟ್ಟಿನಲ್ಲಿ ಚಿಂತನೆ ನಡೆದಿದ್ದು, ನಿರೀಕ್ಷೆ ಸಹ ಹೆಚ್ಚಿದೆ. ದೀಪಾಲಂಕಾರದಲ್ಲಿ ಹೊಸತನದ ಜೊತೆಗೆ ಗುಣಮಟ್ಟ, ಸುರಕ್ಷತೆಗೂ ಆದ್ಯತೆ ನೀಡಬೇಕಿದೆ. ಆದ್ದರಿಂದ ಗುಣಮಟ್ಟದ ದೀಪಗಳನ್ನು ಬಳಸುವ ಹಾಗೂ ಉತ್ತಮ ಕೆಲಸ ಮಾಡುವ ಅಗತ್ಯವಿದೆ. 21 ದಿನಗಳವರೆಗೂ ದೀಪಾಲಂಕಾರದ ಸೂಕ್ತ ನಿರ್ವಹಣೆ ಮಾಡಬೇಕಿದ್ದು, ದಸರಾ ಆರಂಭದ 3–4 ದಿನಗಳ ಮೊದಲೇ ಪರಿಪೂರ್ಣವಾದ ಲೈಟಿಂಗ್ ಮಾಡಿ, ಟ್ರಯಲ್ ನೋಡಬೇಕಿದೆ ಎಂದು ತಿಳಿಸಿದರು.

ಇದೇ ವೇಳೆ ಸಭೆಯಲ್ಲಿ ಮಾತನಾಡಿದ ವಿದ್ಯುತ್ ಗುತ್ತಿಗೆದಾರರ ಸಂಘದ ಪದಾಧಿಕಾರಿಗಳು, ತಮ್ಮ ಕೆಲವೊಂದು ಬೇಡಿಕೆಗಳನ್ನು ಮುಂದಿಟ್ಟರು. ಅಲ್ಲದೆ ಈ ಬಾರಿ ಯಾವುದೇ ಸಮಸ್ಯೆ ಆಗದಂತೆ ಕ್ರಮವಹಿಸಬೇಕೆಂದು ಕೋರಿದರು. ಸಭೆಯಲ್ಲಿ ವಿದ್ಯುತ್ ಗುತ್ತಿಗೆದಾರರ ಸಂಘದ ರಾಜ್ಯಾಧ್ಯಕ್ಷ ಆರ್.ರಮೇಶ್, ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕಿ ಜಿ.ಶೀಲಾ, ಅಧೀಕ್ಷಕ ಇಂಜಿನಿಯರ್ ಸುನೀಲ್‌ಕುಮಾರ್ ಸೇರಿದಂತೆ ಇನ್ನಿತರ ಅಧಿಕಾರಿಗಳು ಹಾಗೂ ಗುತ್ತಿಗೆದಾರರ ಸಂಘದ ಪದಾಧಿಕಾರಿಗಳು ಇದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 7 ಶನಿವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 143 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಶುಭಾಶಯಗಳು



ನಾಡಿನ ಸಮಸ್ತರಿಗೂ
ಗೌರಿ–ಗಣೇಶ ಹಬ್ಬದ
ಶುಭಾಶಯಗಳು

ಬಿಡುವು

ಗೌರಿ–ಗಣೇಶ ಹಬ್ಬದ ಪ್ರಯುಕ್ತ ಇಂದು ನಮ್ಮ ಕಾರ್ಯಾಲಯಕ್ಕೆ ರಜೆ ಇರುವುದರಿಂದ 8–9–2024ರ ಭಾನುವಾರದ 'ಮೈಸೂರು ಮಿತ್ರ' ಸಂಚಿಕೆ ಪ್ರಕಟವಾಗುವುದಿಲ್ಲ. –ಸಂ.

ಮಾಜಿ ಆಯುಕ್ತ ದಿನೇಶ್‌ಕುಮಾರ್ ಪವಾಡ; ದಿಕ್ಕುದೆಸೆ ಇಲ್ಲದ ಅರ್ಜಿಗೆ

7 ದಿನದಲ್ಲಿ 23,881 ಚದರಡಿ ಮುಡಾ ನಿವೇಶನ ಮಂಜೂರು

● ಮುಡಾ ಆಸ್ತಿ ಕಂಡ ಕಂಡವರ ಪಾಲಾಗಿರುವುದು ಮುಡಾ ಕಾನೂನು ಶಾಖೆಯ ಟಿಪ್ಪಣಿಯಿಂದಲೇ ಬಯಲು ● ನಿಯಮಾವಳಿ ಗಾಳಿಗೆ ತೂರಿ ಗುಮಾಸ್ತನ ಕೆಲಸವನ್ನೂ ತಾವೇ ಮಾಡಿ ತರಾತುರಿಯಲ್ಲಿ ನಿವೇಶನ ಮಂಜೂರು ಮಾಡಿದ ಔಚಿತ್ಯವೇನು? ● ಸಾಮಾನ್ಯವಾಗಿ ಮುಡಾ ಕೌಂಟರ್‌ನಲ್ಲಿ ಅರ್ಜಿ ಸಲ್ಲಿಸಿದರೆ ಅದು ಸಂಬಂಧಿಸಿದ ವಿಭಾಗ ತಲುಪಲು ಅದೆಷ್ಟೋ ದಿನ ಬೇಕು ● ಅರ್ಜಿದಾರ ಹುಟ್ಟುವ ಒಂದು ವರ್ಷ ಮುನ್ನವೇ ಭೂಮಿ ಖರೀದಿಸಿದ ಮತ್ತೊಂದು ಮಹಾ ಪವಾಡ ದರ್ಶನ!

ಎಸ್.ಟಿ.ರವಿಕುಮಾರ್

ಮೈಸೂರು, ಸೆ. 6– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) 50:50ರ ಅನುಪಾತದಡಿ ನಿವೇಶನಗಳ ಹಂಚಿಕೆ ಹಗರಣ ಸಂಬಂಧ ಅವಾಂತರ ನತುಗೊಂಡಿರುವ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಹಿಂದಿನ ಆಯುಕ್ತ ಜಿ.ಟಿ.ದಿನೇಶ್ ಕುಮಾರ್ ಎಸಗಿರುವ ಮತ್ತೊಂದು ಮಹಾ ಪವಾಡ ಮುಡಾ ಕಾನೂನು ಶಾಖೆ ಟಿಪ್ಪಣಿಯಿಂದ ಬಯಲಾಗಿದೆ.

ಮುಡಾಗೆ ಯಾವುದೇ ವಿಚಾರವಾಗಿ ಅರ್ಜಿ ಸಲ್ಲಿಸಿದರೂ ಸದರಿ ಅರ್ಜಿಯ ಸ್ವೀಕೃತಿ ಪತ್ರದಲ್ಲೇ ವಿಲೇವಾರಿಗೆ 21 ದಿನಗಳ ಕಾಲ ಮಿತಿ ಉಲ್ಲೇಖಿಸಲಾಗಿರುತ್ತದೆ. ಈ ಪ್ರಕರಣದಲ್ಲಿ ಸ್ವೀಕೃತಿ ಶಾಖೆಯಲ್ಲಿ ಅರ್ಜಿ ಸ್ವೀಕೃತವಾಗಿರುವ ಬಗ್ಗೆ ಯಾವುದೇ ಮಾಹಿತಿ ಸಂಖ್ಯೆ ನಮೂದಾಗಿಲ್ಲ. ಅಂದರೆ ಸದರಿ ಅರ್ಜಿ ನಿಯಮಬದ್ಧವಾಗಿ ಮುಡಾಗೆ ಸಲ್ಲಿಕೆಯಾಗಿಯೇ ಇಲ್ಲ. ನಿಯಮದಂತೆ ಸಲ್ಲಿಸಿದ ಅರ್ಜಿ ವಿಲೇವಾರಿಗೆ 21 ದಿನ ಕಾಲ ಮಿತಿ ಇದ್ದರೆ ಈ ಅರ್ಜಿಯನ್ನು ಕೇವಲ ಒಂದೇ ದಿನದಲ್ಲಿ ಮಂಡಿಸುವ ಮೂಲಕ ದಿನೇಶ್‌ಕುಮಾರ್ ಪವಾಡವನ್ನೇ ಸೃಷ್ಟಿಸಿರುವುದು ದಾಖಲೆಗಳಿಂದ ತಿಳಿದುಬಂದಿದೆ. ಅದು ಮಾತ್ರವಲ್ಲ. ಅರ್ಜಿ ಸಲ್ಲಿಕೆಯಾದ ಕೇವಲ 7 ದಿನಗಳಲ್ಲಿ 50:50ರ ಅನುಪಾತದಡಿ 23881 ಚದರಡಿ ನಿವೇಶನ ಮಂಜೂರಾತಿಗೆ ಆದೇಶ ಮಾಡುವ ಮೂಲಕ ಮುಡಾದಲ್ಲಿ ■ 6ನೇ ಪುಟಕ್ಕೆ



ಜಿ.ಟಿ.ದಿನೇಶ್‌ಕುಮಾರ್



ಮುಡಾ ಕಚೇರಿ

ಹುಟ್ಟುವ ಮುನ್ನವೇ ಅರ್ಜಿದಾರನ ಹೆಸರಲ್ಲಿ ಭೂಮಿ ನೋಂದಣಿ!

50:50ರ ಅನುಪಾತದಡಿಯಲ್ಲಿ ದಿನೇಶ್‌ಕುಮಾರ್ ಮಂಜೂರು ಮಾಡಿರುವ ಈ ನಿವೇಶನದ ವಿಷಯದಲ್ಲಿ ಯಾರೂ ನಂಬಲಾರದಂತಹ ಮಹಾ ಪವಾಡ ನಡೆದಿರುವುದು ಕಾನೂನು ಶಾಖೆ ಟಿಪ್ಪಣಿಯಲ್ಲಿ ನಮೂದಾಗಿದೆ. ಅದೇನೆಂದರೆ ಅರ್ಜಿದಾರ ಯೂಸುಫ್ ಹೆಸರಿಗೆ ಜಮೀನು ನೋಂದಣಿಯಾಗಿರುವುದು 1934ರ ಏಪ್ರಿಲ್ 16ರಲ್ಲಿ. ಆದರೆ, ನಿವೇಶನ ಪಡೆದಿರುವ ಯೂಸುಫ್ ಆಧಾರ್ ದಾಖಲೆ ಪ್ರಕಾರ ಅವರು ಜನಿಸಿರುವುದು 1935ರ ಏಪ್ರಿಲ್ 8ರಂದು. ಅಂದರೆ ಯೂಸುಫ್ ಹುಟ್ಟುವುದಕ್ಕೂ ಒಂದು ವರ್ಷ ಮುಂಚಿತವಾಗಿಯೇ ಅವರ ಹೆಸರಿಗೆ ಜಮೀನು ಮಂಜೂರು ಆಗಿರುವ ಪವಾಡ ಕಾನೂನು ಶಾಖೆಯ ಟಿಪ್ಪಣಿಯಿಂದ ತಿಳಿದುಬಂದಿದೆ. ಸ. ನಂ. 85/1 ಕ್ರಮಪತ್ರ ನೋಂದಣಿಯಾಗಿಲ್ಲವಾದರೂ ಇತರೆ ಸ. ನಂ.ಗಳಡಿ ನೋಂದಣಿಯಾಗಿರುವ ■ 6ನೇ ಪುಟಕ್ಕೆ

ಸಿಇಟಿ, ನೀಟ್– ನಾಳೆಯಿಂದ 2ನೇ ಸುತ್ತಿನ ಸೀಟು ಹಂಚಿಕೆ

ಬೆಂಗಳೂರು: ವೈದ್ಯಕೀಯ, ಇಂಜಿನಿಯರಿಂಗ್ ಸೇರಿದಂತೆ ಇತರ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಎರಡನೇ ಸುತ್ತಿನ ಸೀಟು ಹಂಚಿಕೆ ಪ್ರಕ್ರಿಯೆಯನ್ನು ಸೆ.8ರಿಂದ ಆರಂಭಿಸಲಾಗುವುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಹೆಚ್. ಪ್ರಸನ್ನ ತಿಳಿಸಿದ್ದಾರೆ. ಅಂದು ಬೆಳಿಗ್ಗೆ 11ಕ್ಕೆ ಹಂಚಿಕೆಗೆ ಲಭ್ಯ ಇರುವ ಸೀಟುಗಳ ವಿವರವನ್ನು ಪ್ರಕಟಿಸಲಾಗುತ್ತದೆ.

ಮಧ್ಯಾಹ್ನ 2ರಿಂದ ಸೆ.11ರವರೆಗೆ 'ಆಯ್ಕೆ' (Options)ಗಳನ್ನು ಬದಲಿಸಿಕೊಳ್ಳಲು ಅವಕಾಶ ಇರುತ್ತದೆ. ರಾಷ್ಟ್ರೀಯ ಮಟ್ಟದ ನೀಟ್ ಫಲಿತಾಂಶ ನೋಡಿಕೊಂಡು ಎರಡನೇ ಸುತ್ತಿನ ಫಲಿತಾಂಶ ದಿನಾಂಕವನ್ನು ನಂತರ ತಿಳಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.

ನೀಟ್‌ಗೆ ಸಂಬಂಧಿಸಿದಂತೆ ಎರಡನೇ ಸುತ್ತಿನ ಸೀಟು ಹಂಚಿಕೆ ಫಲಿತಾಂಶ ಪ್ರಕಟಣೆ ನಂತರ ಅಭ್ಯರ್ಥಿಗಳಿಗೆ ಯಾವುದೇ ಛಾಯ್ಸ್‌ಗಳನ್ನು ಆಯ್ಕೆ ಮಾಡಲು ಅವಕಾಶ ಇರುವುದಿಲ್ಲ. ಈ ಹಂತದಲ್ಲಿ ಹಂಚಿಕೆಯಾದ ಸೀಟಿಗೆ ಪ್ರವೇಶ ಪಡೆಯುವುದು ■ 6ನೇ ಪುಟಕ್ಕೆ

ವೈದ್ಯೆಯ ಮೇಲಿನದು ಸಾಮೂಹಿಕ ಅತ್ಯಾಚಾರವಲ್ಲ: ಸಿಬಿಐ ಸ್ಪಷ್ಟನೆ

ಕೋಲ್ಕತಾ: ಪಶ್ಚಿಮ ಬಂಗಾಳದ ಆರ್ ಜಿ ಕರ್ ಆಸ್ಪತ್ರೆಯಲ್ಲಿ ನಡೆದ ವೈದ್ಯೆಯ ಮೇಲಿನ ಅತ್ಯಾಚಾರ, ಕೊಲೆ ಪ್ರಕರಣದಲ್ಲಿ ಸಾಮೂಹಿಕ ಅತ್ಯಾಚಾರ ಆರೋಪವನ್ನು ಸಿಬಿಐ ತಳ್ಳಿ ಹಾಕಿದೆ.

ಪ್ರಕರಣದ ತನಿಖೆ ನಡೆಸುತ್ತಿರುವ ಕೇಂದ್ರೀಯ ತನಿಖಾ ದಳವು ವೈದ್ಯೆಯ ಸಾವಿನಲ್ಲಿ ಸಾಮೂಹಿಕ ಅತ್ಯಾಚಾರ ಆರೋಪ ತಳ್ಳಿಹಾಕಿದೆ. ಲಭ್ಯವಿರುವ ಪುರಾವೆಗಳ ಆಧಾರದಲ್ಲಿ ಸಂಜಯ್ ರಾಯ್‌ನನ್ನು ಮಾತ್ರ ಪೊಲೀಸರು ಬಂಧಿಸಿದ್ದಾರೆ. ಆತ ಮಾತ್ರ ಆರ್‌ಜಿ ಕರ್ ಆಸ್ಪತ್ರೆಯಲ್ಲಿ ನಡೆದ ಭೀಕರ ಅತ್ಯಾಚಾರ ಮತ್ತು ಕೊಲೆಯಲ್ಲಿ ಭಾಗಿಯಾಗಿದ್ದಾನೆ ಎಂದು ಸಿಬಿಐ ಮೂಲಗಳು ತಿಳಿಸಿವೆ. ಈ ಪ್ರಕರಣದ ತನಿಖೆಯು 'ಅಂತಿಮ ಹಂತ'ದಲ್ಲಿದೆ ಎಂದು ಮೂಲಗಳು ತಿಳಿಸಿದ್ದು, ಶೀಘ್ರದಲ್ಲೇ ತಮ್ಮ ವರದಿ ಮತ್ತು ಚಾರ್ಜ್ ಶೀಟ್ ದಾಖಲಿಸಲು ಸಿಬಿಐ ಸಿದ್ಧತೆ ನಡೆಸಿದೆ ಎನ್ನಲಾಗಿದೆ.

ಎತ್ತಿನಹೊಳೆ ಮೊದಲ ಹಂತದ ಯೋಜನೆ ಉದ್ಘಾಟನೆ

● ನಿಮ್ಮನ್ನು ಬಕ್ರಾ ಮಾಡಲು ಯತ್ನಿಸುವವರ ವಿಚಾರದಲ್ಲಿ ಹುಷಾರಾಗಿರಿ; ಜನತೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಕೆ ● ಈ ಯೋಜನೆ ಕಾಮಗಾರಿ ಆರಂಭಿಸಿದವರೂ ನಾವೇ; ಈಗ ಮೊದಲ ಹಂತಕ್ಕೆ ಚಾಲನೆ ನೀಡಿದ್ದೇವೆ; 2027ಕ್ಕೆ ಎರಡನೇ ಹಂತವನ್ನು ನಾವೇ ಉದ್ಘಾಟಿಸುತ್ತೇವೆ ● 7 ಜಿಲ್ಲೆಯ 29 ತಾಲೂಕಿನ ಜನರ ಬದುಕು ಬದಲಿಸುವ ಯೋಜನೆ



ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಮೊದಲ ಹಂತದ ಯೋಜನೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಶುಕ್ರವಾರ ಉದ್ಘಾಟಿಸಿದರು.

ಬೆಂಗಳೂರು, ಸೆ.6(ಕೆಎಂಶಿ)–ಬಯಲು ನಾಡಿನ 7 ಜಿಲ್ಲೆಯ 29 ತಾಲೂಕಿನ ಜನರ ಬಹುದಿನಗಳ ಕನಸು ಎತ್ತಿನ ಹೊಳೆ ಯೋಜನೆಯ ಮೊದಲ ಹಂತದ ಉದ್ಘಾಟನೆಯೊಂದಿಗೆ ನನಸಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದು ಚಾಲನೆ ನೀಡಿದ್ದಾರೆ.

ಈ ವೇಳೆ ಮಾತನಾಡಿದ ಅವರು, ಕಣ್ಣೆದುರಿಗಿರುವ ಸತ್ಯವನ್ನು ಸುಳ್ಳು ಎಂದು ಬಿಂಬಿಸಿ ನಿಮ್ಮನ್ನು ಬಕ್ರಾ ಮಾಡಲು ಯತ್ನಿಸುತ್ತಿರುವವರ ಬಗ್ಗೆ ಹುಷಾರಾಗಿರಿ ಎಂದು ಜನತೆಯನ್ನು ಎಚ್ಚರಿಸಿದ್ದಾರೆ. ನಮ್ಮದು ನುಡಿದಂತೆ ನಡೆಯುವ ಸರ್ಕಾರ, ಹಿಂದೆ ■ 6ನೇ ಪುಟಕ್ಕೆ

ಎತ್ತಿನ ಹೊಳೆ ಯೋಜನೆಯ ಉದ್ದೇಶಿತ ನೀರು ಅಂತಿಮ ಘಟ್ಟ ತಲುಪಲು ಇನ್ನು ಹತ್ತು ವರ್ಷ ಬೇಕು!

ಬೆಂಗಳೂರು, ಸೆ. 6(ಕೆಎಂಶಿ)–ಪಶ್ಚಿಮಘಟ್ಟದಿಂದ ಹಳೇ ಮೈಸೂರಿನ ಬರ ಪೀಡಿತ ಪ್ರದೇಶಗಳಿಗೆ ಕುಡಿಯುವ ನೀರು ಹರಿಸುವ ಎತ್ತಿನಹೊಳೆ ಯೋಜನೆಗೆ ಇಂದು ಚಾಲನೆ ದೊರೆತಿದ್ದರೂ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ತುಮಕೂರಿಗೆ ನೀರು ತಲುಪುವುದು ಸದ್ಯಕ್ಕೆ ಕನಸಿನ ಮಾತು.


ಈ ಭಾಗದ ಏಳು ಜಿಲ್ಲೆಗಳಿಗೆ ಕುಡಿಯುವ ನೀರು ಹರಿಸುವ ಉದ್ದೇಶದಿಂದ ಕಳೆದ 10 ವರ್ಷಗಳ ಹಿಂದೆ ಶಂಕುಸ್ಥಾಪನೆ ನೆರವೇರಿಸಿ, ಇಂದು ಮೊದಲನೇ ಹಂತಕ್ಕೆ ಚಾಲನೆ ದೊರೆತರೂ ಮೂಲ ಉದ್ದೇಶ ಈಡೇರಿಲ್ಲ. ಪಶ್ಚಿಮಘಟ್ಟದ ಮೇಲ್ಭಾಗದಲ್ಲಿ ಹರಿಯುವ ಎತ್ತಿನಹೊಳೆ, ಕಾಡುಮನೆ ಹೊಳೆ, ವಂಗದಹಳ್ಳ ಹಾಗೂ ಕೇರಿಹೊಳೆ ಹಳ್ಳಗಳಿಗೆ ಅಡ್ಡಲಾಗಿ 8 ವಿಯರ್‌ಗಳನ್ನು ನಿರ್ಮಿಸಿ ಈ ಹಳ್ಳಗಳ ಪ್ರವಾಹದಿಂದ ದೊರೆಯಬಹುದಾದ ■ 6ನೇ ಪುಟಕ್ಕೆ

ಏಕ ಕಾಲದಲ್ಲಿ ಬೆಂಬಲ ಬೆಲೆಯಡಿ ಹೆಸರು ಕಾಳು, ಸೂರ್ಯಕಾಂತಿ, ಸೋಯಾಬಿನ್, ಉದ್ದಿನ ಕಾಳು ಖರೀದಿ

ಬೆಂಗಳೂರು, ಸೆ.6(ಕೆಎಂಶಿ)– ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಏಕಕಾಲದಲ್ಲಿ ನಾಲ್ಕು ಬೆಳೆಗಳನ್ನು ಬೆಂಬಲ ಬೆಲೆ ಯೋಜನೆಯಡಿ ಖರೀದಿ ಮಾಡಲಾಗುತ್ತಿದೆ ಎಂದು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ್ ಇಂದಿಲ್ಲಿ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹೆಸರುಕಾಳು, ಸೂರ್ಯಕಾಂತಿ, ಸೋಯಾಬಿನ್ ಮತ್ತು ಉದ್ದಿನ ಕಾಳನ್ನು ಬೆಂಬಲ ಬೆಲೆ ಯೋಜನೆ ಅಡಿ ಖರೀದಿ ಮಾಡಲಾಗುತ್ತಿದೆ ಎಂದರು. ಎಪಿಎಂಸಿ ಕಾಯ್ದೆ ಮರುಸ್ಥಾಪನೆಯಿಂದ ರೈತರಿಗೆ ಹೆಚ್ಚು ಅನುಕೂಲವಾಗಿದ್ದು ಇದರಿಂದ ಏಕಕಾಲಕ್ಕೆ ನಾಲ್ಕು ಬೆಳೆಗಳ ಖರೀದಿಗೆ ಸಹಕಾರಿಯಾಗಿದೆ. ಸೋಯಾಬಿನ್ ಮತ್ತು ಉದ್ದಿನಕಾಳು ಖರೀದಿ ಪ್ರಕ್ರಿಯೆ ಆರಂಭಿಸಲು ಆದೇಶ ಹೊರಡಿಸಲಾಗಿದೆ.

ಈಗಾಗಲೇ ಹೆಸರುಕಾಳು ಮತ್ತು ಸೂರ್ಯಕಾಂತಿಯನ್ನು ಬೆಂಬಲ ಬೆಲೆಯಲ್ಲಿ ಖರೀದಿ ಮಾಡಲು ರಾಜ್ಯ ಸರ್ಕಾರ ಖರೀದಿ ಸಂಸ್ಥೆಗಳನ್ನು ನೇಮಕ ಮಾಡಿದೆ. ಪ್ರತಿ ರೈತರಿಂದ ಗರಿಷ್ಠ 15 ಕ್ವಿಂಟಾಲ್ ಸೂರ್ಯಕಾಂತಿ ಮತ್ತು 10 ಕ್ವಿಂಟಾಲ್ ಹೆಸರು ಕಾಳು ಖರೀದಿ ಮಾಡಲಿದೆ. ಎಫ್‌ಎಕ್ಯೂ ಗುಣಮಟ್ಟದ ಸೋಯಾಬಿನ್ ಕ್ವಿಂಟಾಲ್‌ಗೆ 4,892 ರೂ. ಹಾಗೂ ಉದ್ದಿನ ಕಾಳಿಗೆ ಕ್ವಿಂಟಾಲ್‌ಗೆ 7,400 ರೂ. ಬೆಂಬಲ ಬೆಲೆ ನಿಗದಿಪಡಿಸಲಾಗಿದೆ, ಬೆಂಬಲ ಬೆಲೆಯಲ್ಲಿ ಸುಮಾರು 10 ಲಕ್ಷ ಕ್ವಿಂಟಾಲ್ ಸೋಯಾಬಿನ್ ಮತ್ತು 2 ಲಕ್ಷ ಕ್ವಿಂಟಾಲ್ ಉದ್ದಿನ ಕಾಳು ಖರೀದಿ ಮಾಡಲಾಗುವುದು.



ಶಿವಾನಂದ ಪಾಟೀಲ್

2024–25ನೇ ಸಾಲಿನಲ್ಲಿ 4.10 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ 4.72 ಲಕ್ಷ ಮೆಟ್ರಿಕ್ ಟನ್ ಸೋಯಾಬಿನ್ ಹಾಗೂ 0.77 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ 0.40 ಲಕ್ಷ ಮೆಟ್ರಿಕ್ ಟನ್ ಉದ್ದಿನಕಾಳು ಇಳುವರಿ ನಿರೀಕ್ಷೆ ಮಾಡಲಾಗಿತ್ತು. ಎಫ್.ಎ.ಕ್ಯೂ ಗುಣಮಟ್ಟದ ಹೆಸರುಕಾಳಿಗೆ ಪ್ರತಿ ಕ್ವಿಂಟಾಲ್‌ಗೆ 8,682 ರೂ. ಹಾಗೂ ಸೂರ್ಯಕಾಂತಿಗೆ ಕ್ವಿಂಟಾಲ್‌ಗೆ 7,280 ರೂ. ನಿಗದಿಪಡಿಸಲಾಗಿದೆ. ಹೆಸರುಕಾಳು ಖರೀದಿಗೆ 172 ಖರೀದಿ ಕೇಂದ್ರ ಗುರುತಿಸಲಾಗಿದೆ, 1982 ರೈತರು ನೋಂದಣಿ ಮಾಡಿಸಿಕೊಂಡಿದ್ದು, ಸೂರ್ಯಕಾಂತಿ ಖರೀದಿಗೆ 19 ಖರೀದಿ ಕೇಂದ್ರ ಗುರುತಿಸಲಾಗಿದೆ, 461 ರೈತರು ನೋಂದಣಿ ಮಾಡಿಸಿಕೊಂಡಿದ್ದಾರೆ. ಕೊಬ್ಬರಿ ಖರೀದಿಯಲ್ಲೂ ಈ ಬಾರಿ ಪ್ರಮುಖ ಪಾತ್ರ ವಹಿಸಲಾಗಿದ್ದು, ಇದೇ ಮೊದಲ ಬಾರಿಗೆ ಮಿಲ್ಲಿಂಗ್ ಕೊಬ್ಬರಿಯನ್ನು ■ 6ನೇ ಪುಟಕ್ಕೆ

ಜಂಬೂಸವಾರಿ ಮಾರ್ಗದಲ್ಲಿ ಕಳೆ ಕಟ್ಟಿದ ಗಜಪಡೆಯ ತಾಲೀಮು

● 14ರಲ್ಲಿ 12 ಆನೆಗಳು ತಾಲೀಮಿನಲ್ಲಿ ಭಾಗಿ ● ಅರಮನೆ ಅಂಗಳದಲ್ಲೇ ಕಂಜನ್, ವರಲಕ್ಷ್ಮೀಗೆ ರೆಸ್ಟ್ ● ಸಾಲು–ಸಾಲು ಆನೆ ಕಂಡು ಸಂಭ್ರಮಿಸಿದ ಮೈಸೂರಿಗರು

ಮೈಸೂರು, ಸೆ.6(ಎಂಟಿವೈ)– ದಸರಾ ಗಜಪಡೆಗೆ ಎರಡನೇ ತಂಡದ ಆನೆಗಳು ಸೇರ್ಪಡೆಗೊಂಡಿದ್ದು ಅರಮನೆಯಿಂದ ಜಂಬೂಸವಾರಿ ಮಾರ್ಗದಲ್ಲಿ ದಸರಾ ಆನೆಗಳು ನಡೆಸುವ ತಾಲೀಮು ಕಳೆಕಟ್ಟಿದ್ದು, ಶುಕ್ರವಾರ 12 ಆನೆಗಳು ಪಾಲ್ಗೊಂಡು ಜನಾಕರ್ಷಿಸಿದವು.

ಪ್ರಸಕ್ತ ಸಾಲಿನ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು 14 ಆನೆಯನ್ನು ಆಯ್ಕೆ ಮಾಡಲಾಗಿದ್ದು, ಎರಡು ತಂಡಗಳಲ್ಲಿ ಆಗಮಿಸಿ ಈಗಾಗಲೇ ಅರಮನೆ ಆವರಣದಲ್ಲಿ ಬೀಡು ಬಿಟ್ಟಿರುವ ಆನೆಗಳ ಪೂರ್ಣ ಪ್ರಮಾಣದ ತಾಲೀಮು ಸೆ.15ರಿಂದ ಆರಂಭವಾಗಲಿದೆ. ಈಗಾಗಲೇ ಎರಡನೇ ಹಂತದ ತಾಲೀಮು ಆರಂಭಿಸಲಾಗಿದ್ದು, ಈ ವಾರದಲ್ಲಿ ಮರದ ಅಂಬಾರಿ ಹೊರಿಸಿ ತಾಲೀಮು ನಡೆಸಲು ಉದ್ದೇಶಿಸಲಾಗಿದೆ. ಇಂದು ಬೆಳಗ್ಗೆ ಕ್ಯಾಪ್ಟನ್ ಅಭಿಮನ್ಯು ನೇತೃತ್ವದಲ್ಲಿ ಭೀಮ, ಏಕಲವ್ಯ, ಲಕ್ಷ್ಮಿ, ರೋಹಿತ್, ಗೋಪಿ, ಧನಂಜಯ, ಸುಗ್ರೀವ, ಮಹೇಂದ್ರ, ಪ್ರಶಾಂತ, ದೊಡ್ಡಹರವೆ ಶಿಬಿರದ ಲಕ್ಷ್ಮೀ ಹಾಗೂ ಹಿರಣ್ಯ ಆನೆಗಳು ಅರಮನೆಯ ಬಲರಾಮ ದ್ವಾರದಿಂದ ಹೊರಬಂದು ಚಾಮರಾಜ ವೃತ್ತ, ಕೆ.ಆರ್.ವೃತ್ತ, ಸಯ್ಯಾಜಿರಾವ್ ರಸ್ತೆಯಲ್ಲಿ ಸಾಗಿದವು. ಇಲ್ಲಿಯವರೆಗೂ 12 ಆನೆಗಳು ಸಾಲಾಗಿ ಹೆಜ್ಜೆ ಹಾಕಿದವು. ತೂಕ ಪರೀಕ್ಷೆಗಾಗಿ ಧನ್ವಂತ್ರಿ ರಸ್ತೆಗೆ ಎರಡನೇ ತಂಡದ 5 ಆನೆಗಳು ತಿರುವು ಪಡೆದರೆ, ಉಳಿದ 7 ಆನೆಗಳು ಸರ್ಕಾರಿ ಆಯುರ್ವೇದ ಆಸ್ಪತ್ರೆ ಮೂಲಕ ಹಳೆ ಆರ್‌ಎಂಸಿ ವೃತ್ತದವರೆಗೂ ಸಾಗಿದವು. ಬಳಿಕ ಕೆಲ ಸಮಯ ವಿಶ್ರಾಂತಿ ಪಡೆದ ಬಳಿಕ ಆರ್‌ಎಂಸಿ ವೃತ್ತದಿಂದ ಅರಮನೆಯತ್ತ ಹೆಜ್ಜೆ ಹಾಕಿದವು.

ಅಷ್ಟರಲ್ಲಾಗಲೇ ತೂಕ ಪರೀಕ್ಷೆ ಬಳಿಕ ಎರಡನೇ ತಂಡದ 5 ಆನೆಗಳು ಜೆ.ಕೆ.ಮೈದಾನದ ಕಡೆಯಿಂದ ಇರ್ವಿನ್ ರಸ್ತೆ ಮೂಲಕ ಕೆ.ಆರ್.ಆಸ್ಪತ್ರೆ ಮುಂಭಾಗ ಆಗಮಿಸಿದವು. ಬಳಿಕ ಮೊದಲ ತಂಡದ ಆನೆಯೊಂದಿಗೆ ಎರಡನೇ ತಂಡದ ಗಜಪಡೆ ಸೇರಿ ■ 6ನೇ ಪುಟಕ್ಕೆ



ಮೈಸೂರಿನ ಕೆ.ಆರ್.ವೃತ್ತದಲ್ಲಿ ತಾಲೀಮಿನಲ್ಲಿ ಸಾಗುತ್ತಿರುವ ದಸರಾ ಗಜಪಡೆಯ 12 ಆನೆಗಳು. /ಚಿತ್ರ: ಎಂ.ಎಸ್.ಲಕ್ಷ್ಮೀನಾರಾಯಣ ಯಾದವ್

ಬೈಕಿಗೆ ಲಾರಿ ಡಿಕ್ಕಿ: ಮೂವರು ಸಾವು

ಬೆಂಗಳೂರು–ಮೈಸೂರು ಹೆದ್ದಾರಿ ಸರ್ವಿಸ್ ರಸ್ತೆಯಲ್ಲಿ ದುರಂತ



ರಾಮನಗರ,ಸೆ.6(ಮೋಹನ್‌ರಾಜ್)– ಲಾರಿಯೊಂದು ಬೈಕಿಗೆ ಡಿಕ್ಕಿ ಹೊಡೆದ ಪರಿಣಾಮ ಮೂವರು ಕಾರ್ಮಿಕರು ಸಾವನ್ನಪ್ಪಿ, ಓರ್ವ ಗಂಭೀರವಾಗಿ ಗಾಯಗೊಂಡಿರುವ ದುರ್ಘಟನೆ ತಾಲೂಕಿನ ಮಾಯಗಾನಹಳ್ಳಿ ಬಳಿಯ ಬೆಂಗಳೂರು– ಮೈಸೂರು ರಾಷ್ಟ್ರೀಯ ಹೆದ್ದಾರಿಯ ಸರ್ವಿಸ್ ರಸ್ತೆಯಲ್ಲಿ ಶುಕ್ರವಾರ ಬೆಳಿಗ್ಗೆ ಸಂಭವಿಸಿದೆ.

ಕಟ್ಟಡ ನಿರ್ಮಾಣ ಕಾರ್ಮಿಕರಾದ ಗುರುಮೂರ್ತಿ (39), ಷೇಕ್ ಹಫೀಸ್ (45) ಹಾಗೂ ವೆಂಕಟೇಶ್ (50) ಮೃತರು. ಗಾಯಾಳು ಹನುಮಂತ ಅವರನ್ನು ರಾಮನಗರ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ.

ಈ ನಾಲ್ವರು ಕಾರ್ಮಿಕರು ಒಂದೇ ಬೈಕಿನಲ್ಲಿ ಕೆಲಸದ ನಿಮಿತ್ತ ರಾಮನಗರದಿಂದ ಬಿಡದಿ ಕಡೆಗೆ ಹೋಗುತ್ತಿದ್ದರು. ಮಾಯಗಾನಹಳ್ಳಿ ಬಳಿ ಎದುರಿಗೆ ವೇಗವಾಗಿ ಬಂದ ಲಾರಿ ಬೈಕಿಗೆ ಡಿಕ್ಕಿ ಹೊಡೆದಿದೆ. ಇಬ್ಬರು ಸ್ಥಳದಲ್ಲಿಯೇ ಸಾವನ್ನಪ್ಪಿದರೆ, ಓರ್ವ ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯೆ ಕೊನೆಯುಸಿರೆಳೆದಿದ್ದಾರೆ. ಶವಗಳನ್ನು ಮರಣೋತ್ತರ ಪರೀಕ್ಷೆಗಾಗಿ ಜಿಲ್ಲಾಸ್ಪತ್ರೆಗೆ ಸಾಗಿಸಲಾಗಿದೆ.

ಘಟನಾ ಸ್ಥಳಕ್ಕೆ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಟಿ.ವಿ.ಸುರೇಶ್ ಸೇರಿದಂತೆ ಪೊಲೀಸ್ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಘಟನೆ ಸಂಬಂಧ ರಾಮನಗರ ಸಂಚಾರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಶ್ರೀರಂಗಪಟ್ಟಣ ದಸರಾಕ್ಕೆ ಕಲಾವಿದರಿಂದ ಅರ್ಜಿ ಆಹ್ವಾನ

ಮಂಡ್ಯ,ಸೆ.6– ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕಿನ ಶ್ರೀರಂಗಪಟ್ಟಣ ದಸರಾ ಕಾರ್ಯಕ್ರಮವನ್ನು ಅ.4 ರಿಂದ ಹಮ್ಮಿಕೊಳ್ಳಲಾಗಿದ್ದು, ಈ ಕಾರ್ಯಕ್ರಮಕ್ಕೆ ಕಲಾವಿದರಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ಅರ್ಜಿಯನ್ನು ಸೆ.20 ರೊಳಗೆ ತಮ್ಮ ಕಲಾಪ್ರಕಾರ ಮಾಹಿತಿಯೊಂದಿಗೆ ಬ್ಯಾಂಕ್ ಖಾತೆ ಜೆರಾಕ್ಸ್ ಪ್ರತಿ ಸಹಿತ ಮಂಡ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಗೆ ಸಲ್ಲಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ದೂ. ಸಂ: 08232–223197 ಅನ್ನು ಸಂಪರ್ಕಿಸಬಹುದು ಎಂದು ಮಂಡ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಳವಳ್ಳಿಯ ಕೊನೆ ಭಾಗದ ನಾಲೆಗಳಿಗೆ ನೀರು ಬಿಡದಿದ್ದರೆ ಜಲಪಾತೋತ್ಸವಕ್ಕೆ ಕಪ್ಪುಬಾವುಟ ಪ್ರದರ್ಶನ



ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿರುವ ಮಾಜಿ ಶಾಸಕ ಡಾ.ಕೆ.ಅನ್ನದಾನಿ.

ಮಂಡ್ಯ,ಸೆ.6– ಕೆಆರ್‌ಎಸ್ ಅಣೆಕಟ್ಟೆ ಭರ್ತಿಯಾಗಿ ಜಿಲ್ಲೆಯ ವಿವಿಧ ನಾಲೆಗಳು, ಕೆರೆಗಳಿಗೆ ನೀರು ಹರಿಯುತ್ತಿದ್ದರೂ ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕಿನ ಕೊನೇ ಭಾಗದ ನಾಲೆಗಳಿಗೆ ಮತ್ತು ಕೆರೆಗಳಿಗೆ ನೀರು ಒದಗಿಸಿಲ್ಲ. ಆದರೂ ಸಹ ಗಗನಚುಕ್ಕಿ ಜಲಪಾತೋತ್ಸವ ಮಾಡಲು ಹೊರಟಿದ್ದು, ನಾಲೆಗಳಿಗೆ ನೀರು ಬಿಡದೆ ಜಲಪಾತೋತ್ಸವ ಮಾಡಿದರೆ ಆ ಸಂದರ್ಭದಲ್ಲಿ ಕಪ್ಪು ಬಾವುಟ ಪ್ರದರ್ಶಿಸಿ ಪ್ರತಿಭಟನೆ ನಡೆಸಲಾಗುವುದು ಎಂದು ಮಾಜಿ ಶಾಸಕ ಡಾ.ಕೆ.ಅನ್ನದಾನಿ ಎಚ್ಚರಿಕೆ ನೀಡಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆಆರ್‌ಎಸ್ ಭರ್ತಿಯಾಗಿ ತಿಂಗಳುಗಳೇ ಕಳೆದಿವೆ. ಆಗ ಜಲಪಾತೋತ್ಸವ ಮಾಡದೇ ಮಳೆ ನಿಂತು ನಾಲೆಗಳು ಮತ್ತು ಕೆರೆಗಳು ಖಾಲಿಯಾಗಿರುವ ಸಂದರ್ಭದಲ್ಲಿ ಕೃತಕವಾಗಿ ಜಲಪಾತಕ್ಕೆ ನೀರು ಹರಿಸಿ ಉತ್ಸವ ಮಾಡುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು.

ಪಕ್ಕದ ಭರಚುಕ್ಕಿಯಲ್ಲಿ ನೈಸರ್ಗಿಕ ನೀರನ್ನು ಉಪಯೋಗಿಸಿಕೊಂಡು ಕಳೆದ 15 ದಿನಗಳಿಂದ ಹಿಂದೆಯೇ ಜಲಪಾತೋತ್ಸವ ಮಾಡಲಾಗಿದೆ ಆದರೆ ಮಂಡ್ಯದಲ್ಲಿ ಮಾತ್ರ ಕೆಆರ್‌ಎಸ್ ಜಲಾಶಯದಿಂದ ನೀರನ್ನು ತಮಿಳುನಾಡಿಗೆ ಹರಿಸುವ ಮೂಲಕ ಉತ್ಸವ ನಡೆಸಲು ಹುನ್ನಾರ ನಡೆಸಿದ್ದಾರೆ. ಗಗನ ಚುಕ್ಕಿಗೆ ಅಣೆಕಟ್ಟೆ ಮುಖಾಂತರ ನೀರು ಬಂದರೆ ಅದು ಮಳವಳ್ಳಿಗೆ ಪ್ರಯೋಜನವಾಗುವುದಿಲ್ಲ. ನೇರವಾಗಿ ಮುತ್ತತ್ತಿ ಮೂಲಕ ತಮಿಳುನಾಡು ತಲುಪಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಗಗನಚುಕ್ಕಿ ಜಲಪಾತೋತ್ಸವ ನಡೆಸುವುದು ತಪ್ಪಲ್ಲ. ಜಲಪಾತೋತ್ಸವವನ್ನು ಎಚ್.ಡಿ.ಕುಮಾರಸ್ವಾಮಿ ಸರ್ಕಾರದಲ್ಲಿ ನಾನು ಪ್ರಾರಂಭ ಮಾಡಿದ್ದೆ. ಮಳವಳ್ಳಿಯಲ್ಲಿ ಪ್ರವಾಸೋದ್ಯಮಕ್ಕೆ ಹೆಚ್ಚಿನ ಒತ್ತು ಕೊಡಬೇಕೆಂಬುದು ನನ್ನ ಉದ್ದೇಶವೂ ಕೂಡ. ಆದರೆ ರೈತರಿಗೆ ನೀರು ಕೊಡದೆ ಜಲಪಾತೋತ್ಸವ ಮಾಡುವುದು ಎಷ್ಟು ಸರಿ ಎಂದರು.

ನಾಲಾ ಆಧುನೀಕರಣ ಜಿಲ್ಲೆಯಲ್ಲಿ ಸಮರ್ಪಕವಾಗಿ ನಡೆದಿಲ್ಲ. ಸಣ್ಣಪುಟ್ಟ ನಾಲೆಗಳನ್ನು ಅಭಿವೃದ್ಧಿಪಡಿಸಿದರೆ ನೀರು ಕಡೇ ಭಾಗಕ್ಕೆ ಉತ್ತಮವಾಗಿ ತಲುಪುತ್ತದೆ. ಈ ಬಗ್ಗೆ ಶಾಸಕರು ನಾಲಾ ಪರಿಶೀಲನೆ ಮಾಡುವುದನ್ನು ಬಿಟ್ಟು ಹಗಲು ರಾತ್ರಿ ಶ್ರಮವಹಿಸಿ ತಾಲೂಕಿನ ಜನರಿಗೆ ನೀರು ಕೊಡಬೇಕು. ಕೆಆರ್‌ಎಸ್ ಅಣೆಕಟ್ಟೆ 124.80 ಅಡಿ ಭರ್ತಿಯಾಗಿದ್ದರೂ ಕಾವೇರಿ ನೀರನ್ನೇ ನಂಬಿಕೊಂಡಿರುವ ಮಳವಳ್ಳಿ ಜನ ಕೇವಲ ಶೇ.30ರಷ್ಟು ಕೃಷಿ ಬೆಳೆ ಬೆಳೆದಿದ್ದಾರೆ ಎಂದರೆ ನಿಜಕ್ಕೂ ಬೇಸರದ ಸಂಗತಿ ಎಂದು ವಿಷಾದ ವ್ಯಕ್ತಪಡಿಸಿದರು.

ಮಳವಳ್ಳಿ ಕಡೇ ಭಾಗದ ರೈತರು ಕಳೆದ ಎರಡು ವರ್ಷಗಳಿಂದ ನಾಟಿಯನ್ನೇ ಮಾಡಿಲ್ಲ. ಭತ್ತ ಕಬ್ಬನ್ನು ಬೆಳೆದಿಲ್ಲ. ಸಮರ್ಪಕವಾಗಿ ಮಳೆಯೂ ಆಗುತ್ತಿಲ್ಲ. ನೀರಿಲ್ಲದ ಪರಿಸ್ಥಿತಿಯಲ್ಲಿ ಜನ ಹೇಗೆ ಬದುಕಬೇಕು. ಇಂಥ ಸಂದರ್ಭದಲ್ಲಿ ನಮಗೆ ಜಲಪಾತೋತ್ಸವ ಬೇಕೇ? ಎಂದು ಪ್ರಶ್ನಿಸಿದರು.

ಜೊತೆಗೆ ಬೆಳೆ ಕಳೆದುಕೊಂಡಿರುವ ರೈತರಿಗೆ ಪರಿಹಾರವೂ ಸಿಕ್ಕಿಲ್ಲ. ಮುಂದಿನ ಒಂದು ವಾರದಲ್ಲಿ ಕೆರೆಕಟ್ಟೆಗಳಿಗೆ ನೀರು ತುಂಬಿಸಿ ನಂತರ ಜಲಪಾತೋತ್ಸವಕ್ಕೆ ಚಾಲನೆ ನೀಡಬೇಕು. ಒಂದು ವೇಳೆ ನೀರು ಬಿಡದಿದ್ದರೆ ಜಲಪಾತೋತ್ಸವ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಘೇರಾವ್ ಹಾಕಿ ಕಪ್ಪುಬಾವುಟ ಪ್ರದರ್ಶನ ಮಾಡಿ ಪ್ರತಿಭಟನೆ ನಡೆಸಲಾಗುವುದು. ಹೋರಾಟವನ್ನು ಹತ್ತಿಕ್ಕಿದರೆ ನಾವು ತಲೆಕೆಡಿಸಿಕೊಳ್ಳುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ಪರಂಗಿ ಮರದಲ್ಲಿ ಮೂಡಿಬಂದ ಗಣಪತಿ ಆಕಾರದ ಪರಂಗಿಹಣ್ಣು



ಗಣಪತಿ ಆಕಾರದಲ್ಲಿರುವ ಪರಂಗಿ ಹಣ್ಣು ತೋರಿಸುತ್ತಿರುವ ಮಹಿಳೆ

ಭಾರತೀನಗರ, ಸೆ.6–ಪರಂಗಿ ಮರದಲ್ಲಿ ಮೂಡಿಬಂದ ಗಣಪತಿ ಆಕಾರದ ಪರಂಗಿಹಣ್ಣು ಇಲ್ಲಿಗೆ ಸಮೀಪದ ಚಿಕ್ಕ ರಸಿನಕೆರೆ ಯಜಮಾನ್ ಶಿವಲಿಂಗೇಗೌಡರ ಮನೆಯಲ್ಲಿ ದೊರೆತಿದೆ.

ಶಿವಲಿಂಗೇಗೌಡರ ಮನೆಯ ಮುಂಭಾಗ ಬೆಳೆಯಲಾಗಿದ್ದ ಪರಂಗಿ ಮರದಲ್ಲಿ ಪರಂಗಿ ಹಣ್ಣುಗಳು ಬಿಡುತ್ತಿದ್ದವು. ಆದರೆ ಗಣಪತಿ ಹಬ್ಬದ ಎರಡು ದಿನಗಳ ಹಿಂದೆ ಪರಂಗಿ ಮರದಲ್ಲಿ ಗಣಪತಿ ಆಕಾರದ ಪರಂಗಿ ಹಣ್ಣು ಬಿಟ್ಟಿರುವುದು ಎಲ್ಲರಿಗೂ ಅಚ್ಚರಿ ಮೂಡಿಸಿತು. ಇದನ್ನು ಶಿವಲಿಂಗೇಗೌಡ ಅವರ ಪತ್ನಿ ಸ್ಥಳೀಯರಿಗೆ ಪ್ರದರ್ಶಿಸಿದರು.

ತೊಟ್ಟಿಲು ಗಂಗೆ ಗೌರಿ ಮೆರವಣಿಗೆ



ಕಿಕ್ಕೇರಿಯಲ್ಲಿ ಗೌರಿಹಬ್ಬದ ಅಂಗವಾಗಿ ಶುಕ್ರವಾರ ತೊಟ್ಟಿಲು ಗಂಗೆ ಗೌರಿಅಮ್ಮನವರ ಮೆರವಣಿಗೆ ವಿಜೃಂಭಣೆಯಿಂದ ನಡೆಯಿತು.

ಕಿಕ್ಕೇರಿ, ಸೆ.6– ಹೋಬಳಿಯಾದ್ಯಂತ ಗಂಗೆ–ಗೌರಿ ಹಬ್ಬವನ್ನು ಶ್ರದ್ಧಾಭಕ್ತಿಯಿಂದ ಶುಕ್ರವಾರ ಆಚರಿಸಲಾಯಿತು.

ಕಳೆದೆರಡು ವರ್ಷಗಳಿಂದ ಮಳೆ ಇಲ್ಲದೆ ಬೆಳೆ ಕಾಣದೆ ಕಂಗಾಲಾಗಿದ್ದ ರೈತಾಪಿ ಜನತೆ ಮಳೆ ಬಿದ್ದ ಸಂಭ್ರಮದಲ್ಲಿ ಹಬ್ಬವನ್ನು ಸಡಗರದಿಂದ ಆಚರಣೆ ಮಾಡಲು ಮುಂದಾದರು. ಮನೆ ಮನೆಗಳಲ್ಲಿ ಗೌರಿ ಮೂರ್ತಿ, ಮರಳು ಗೌರಮ್ಮನನ್ನು ಪ್ರತಿಷ್ಠಾಪಿಸಿ ಪೂಜಿಸಿದರು.

ಪಟ್ಟಣದ ಬಳೆಗಾರ ವಂಶದ ಬಸೆಟ್ಟಿ ಅಯ್ಯನವರ ನಾಗೇಂದ್ರ ಸಾಂಪ್ರದಾಯಿಕ ಪೂಜೆ ಸಲ್ಲಿಸಲು ಪವಿತ್ರ ಗಂಗೆಯ ಪೂಜೆ ನೆರವೇರಿಸಿದರು. ಗಂಗೆಯಲ್ಲಿ ಮುಳುಗಿ ಕೈಗೆ ಸಿಕ್ಕ ಪವಿತ್ರ ವಸ್ತುವನ್ನು ಹಳದಿ ವಸ್ತ್ರದಲ್ಲಿ ಕಟ್ಟಿಕೊಂಡು ತಂದು ಮನೆಯಲ್ಲಿ ಗಂಗೆಗೌರಿ ಪೀಠದಲ್ಲಿ ಪ್ರತಿಷ್ಠಾಪಿಸಿ ವಿವಿಧ ಪರಿಮಳ ಪುಷ್ಪಗಳಿಂದ ಶೃಂಗರಿಸಿದರು. ವಿವಿಧ ಹಣ್ಣುಹಂಪಲುಗಳನ್ನು ಇಟ್ಟು ನೈವೇದ್ಯ ಅರ್ಪಿಸಿದರು. ಮಹಿಳೆಯರು ಗಂಗೆ–ಗೌರಿ ಪ್ರತಿಷ್ಠಾಪನೆ ಸ್ಥಳಕ್ಕೆ ತೆರಳಿ ಬಾಗಿನ ಅರ್ಪಿಸಿ ಮುಡಿತುಂಬಿ ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥಿಸಿದರು.

ದೇವಿಯ ಜೋಡಿ ತೊಟ್ಟಿಲುಗಳ ಮೆರವಣಿಗೆ ಬಸವಣ್ಣನ ಗುಡಿ, ರಥಬೀದಿ, ಹೊಸಬೀದಿ, ಬ್ರಹ್ಮೇಶ್ವರ ದೇಗುಲ, ಯೋಗ ನರಸಿಂಹ ಸ್ವಾಮಿ ಬೀದಿಯಲ್ಲಿ ಸಾಗಿತು.

ನಿಮ್ಮನೆ ಬಾಗಿಲಿಗೆ ಸರ್ಕಾರ ಕಾರ್ಯಕ್ರಮ ಯಶಸ್ವಿ



ಪಾಂಡವಪುರ, ಸೆ:6– ರೈತರು, ಸಾರ್ವಜನಿಕರು ಕೆಲಸ ಕಾರ್ಯಗಳಿಗೆ ಪಟ್ಟಣದಲ್ಲಿ ಸರಕಾರಿ ಕಚೇರಿಗಳಿಗೆ ಅಲೆದಾಡುವುದನ್ನು ತಪ್ಪಿಸಲು ಗ್ರಾಪಂ ಮಟ್ಟದಲ್ಲಿಯೇ ಸರಕಾರಿ ಸೇವೆಗಳು ನಿಮ್ಮ ಮನೆ ಬಾಗಿಲಿಗೆ ಕಾರ್ಯಕ್ರಮ ನಡೆಸಿ ಅನುಕೂಲ ಮಾಡಿಕೊಡಲಾಗುತ್ತಿದೆ ಎಂದು ಶಾಸಕ ದರ್ಶನ್ ಪುಟ್ಟಣ್ಣಯ್ಯ ತಿಳಿಸಿದರು.

ತಾಲೂಕಿನ ಬನ್ನಂಗಾಡಿ ಗ್ರಾಮದಲ್ಲಿ ಶಾಸಕ ದರ್ಶನ್ ಪುಟ್ಟಣ್ಣಯ್ಯ ನೇತೃತ್ವದಲ್ಲಿ 12 ದಿನಗಳ ಕಾಲ ನಡೆದ ಸರಕಾರಿ ಸೇವೆಗಳು ನಿಮ್ಮನೆ ಬಾಗಿಲಿಗೆ ಎಂಬ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದರು.

ಜನತೆಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ವಿನೂತನ ಕಾರ್ಯಕ್ರಮ ನಡೆಸಿ ಯಶಸ್ವಿಯಾಗಿದ್ದೇವೆ. ನಾವು ಮೊದಲು ಕೆನ್ನಾಳು ಗ್ರಾಪಂನ ಕಾರ್ಯಕ್ರಮ ನಡೆಸಿದಾಗ ಸಂಪೂರ್ಣವಾಗಿ ತಿಳಿದುಕೊಳ್ಳಲು ಸಾಧ್ಯವಾಗಲಿಲ್ಲ. ಇದೀಗ ಗ್ರಾಮಗಳಲ್ಲಿರುವ ಜನರ ಸಮಸ್ಯೆಗಳ ಬಗ್ಗೆ ಸಾಧ್ಯವಾದಷ್ಟು ಅರಿತುಕೊಂಡು ಸಮಸ್ಯೆಗೆ ಸ್ಪಂದಿಸಿ ಕೆಲಸ ಮಾಡುತ್ತಿದ್ದೇವೆ ಎಂದರು.

ಬನ್ನಂಗಾಡಿ ಗ್ರಾಮದಲ್ಲಿ ನಡೆದ ಕಾರ್ಯಕ್ರಮಕ್ಕೆ ಉತ್ತಮ ಸ್ಪಂದನೆ ಸಿಕ್ಕಿದೆ. ಜನರು ನೀಡಿದ ಹಲವಾರು ಅರ್ಜಿಗಳಿಗೆ ಸ್ಥಳದಲ್ಲಿಯೇ ಪರಿಹಾರ ನೀಡುವ ಕೆಲಸ ಮಾಡಿದ್ದೇವೆ. ಇನ್ನಷ್ಟು ಅರ್ಜಿಗಳಿಗೆ ಒಂದು ವಾರದೊಳಗೆ ಇತ್ಯರ್ಥಪಡಿಸುವುದಾಗಿ ಸಂಬಂಧಿಸಿದ ಅಧಿಕಾರಿಗಳು ತಿಳಿಸಿದ್ದಾರೆ. ಅಧಿಕಾರಿಗಳು ಬೆಳಿಗ್ಗೆಯಿಂದ ಸಂಜೆಯವರೆಗೂ ಸ್ಥಳದಲ್ಲಿ ಇದ್ದರು ಸಮಸ್ಯೆ ಬಗೆಹರಿಸುವ ಕೆಲಸ ಮಾಡಿರುವುದಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತೇನೆ ಎಂದು ತಿಳಿಸಿದರು.

ಸರಕಾರಿ ಜಾಗಗಳನ್ನು ಅಧಿಕಾರಿಗಳು ಗುರುತಿಸಿ ಒತ್ತುವರಿ ತೆರವುಗೊಳಿಸಿದ್ದಾರೆ. ಗ್ರಾಮಸ್ಥರು ಒಗ್ಗಟ್ಟಿನಿಂದ ಗ್ರಾಮಗಳ ಸರಕಾರಿ ಭೂಮಿಯನ್ನು ಒತ್ತುವರಿ ಮಾಡಲು ಅವಕಾಶ ನೀಡದೆ ಸಂರಕ್ಷಣೆ ಮಾಡಿಕೊಳ್ಳಬೇಕು, ಕೃಷಿ ಇಲಾಖೆಯಿಂದ ಅಧಿಕಾರಿಗಳು ಮನೆಮನೆಗೆ ತೆರಳಿ ರೈತರಿಗೆ ಬೆಳೆ ಪರಿವರ್ತನೆ, ಗೊಬ್ಬರ ಬಳಕೆ ಹಾಗೂ ನೀರು ಸದ್ಬಳಕೆ ಬಗ್ಗೆ ಜಾಗೃತಿ ಮೂಡಿಸಿದ್ದಾರೆ. ಅದರಂತೆ ರೈತರು ಕೃಷಿ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ತಹಶೀಲ್ದಾರ್ ಸುತೋಷ್ ಮಾತನಾಡಿ, ಕೆನ್ನಾಳು ಗ್ರಾಪಂಗಿಂತ ಬನ್ನಂಗಾಡಿ ಗ್ರಾಮದಲ್ಲಿ ಜನತೆಯಿಂದ ಉತ್ತಮ ಸ್ಪಂದನೆ ದೊರೆತಿದೆ. ಕಂದಾಯ ಇಲಾಖೆಗೆ 421 ಅರ್ಜಿಗಳು ಬಂದಿದ್ದವು, ಅದರಲ್ಲಿ ನಾವು 321 ಅರ್ಜಿಗಳನ್ನು ಸ್ಥಳದಲ್ಲಿಯೇ ಇತ್ಯರ್ಥಪಡಿಸುವ ಕೆಲಸ ಮಾಡಿದ್ದೇವೆ ಎಂದರು.

ಅರ್ಜಿಗಳ ವಿವರ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತ್ ರಾಜ್ ಇಲಾಖೆಗೆ 511 ಅರ್ಜಿ ಸ್ವೀಕಾರ, 56 ಅರ್ಜಿಗಳಿಗೆ ಪರಿಹಾರ ನೀಡಲಾಗಿದೆ. 455 ಅರ್ಜಿಗಳು ಪ್ರಗತಿಯಲ್ಲಿವೆ. ತಹಶೀಲ್ದಾರ್ ಕಂದಾಯ ಇಲಾಖೆಗೆ 388 ಅರ್ಜಿಗಳು ಸ್ವೀಕಾರಗೊಂಡವು, 329 ಅರ್ಜಿಗಳಿಗೆ ಪರಿಹಾರ ನೀಡಲಾಗಿದೆ, 59 ಅರ್ಜಿಗಳು ಪ್ರಗತಿಯಲ್ಲಿವೆ ಸೇರಿದಂತೆ ವಿವಿಧ ಇಲಾಖೆಗಳಿಗೆ ಸಲ್ಲಿಕೆಯಾದ ಹಲವು ಅರ್ಜಿಗಳಿಗೆ ಸ್ಥಳದಲ್ಲಿಯೇ ಪರಿಹಾರ ನೀಡಲಾಗಿದೆ

ಸಮಾರಂಭದಲ್ಲಿ ತಾಪಂ ಇಓ ಲೋಕೇಶ್‌ಮೂರ್ತಿ, ಗ್ರಾಪಂ ಅಧ್ಯಕ್ಷ ಪ್ರಭಾಕರ್, ಸದಸ್ಯ ತಮ್ಮೇಗೌಡ, ಸಿಡಿಸಿ ಉಪಾಧ್ಯಕ್ಷ ಶ್ರೀನಿವಾಸ್, ಮುಖಂಡರಾದ ಕುರುಬರ ಸಂಘದ ಜಿಲ್ಲಾ ಉಪಾಧ್ಯಕ್ಷ ಬಿ.ಕೆ.ರೇವಣ್ಣ, ದಯನಂದ್, ಶಂಕರೇಗೌಡ ಬಿ.ಜಿಸ್ವಾಮಿ, ಕೆಹುಬೇರ, ಸಿಡಿಪಿಓ ಪೂರ್ಣಿಮಾ, ಶಿರಸ್ತೇಧಾರ್ ಲಕ್ಷ್ಮೀಕಾಂತ್, ಸೆಸ್ಕ್ ಎಇಇ ಪುಟ್ಟಸ್ವಾಮಿ. ಸುರೇಂದ್ರ ಪಿಡಿಓ ಲಕ್ಷ್ಮೀಗೌಡ, ಎನ್.ಪ್ರಸನ್ನ, ಕೃಷಿ ಎಡಿ ಮಂಜುನಾಥ್ ಸೇರಿದಂತೆ ಹಲವರು ಇದ್ದರು.

ಗಂಜಾಂ ಕಾವೇರಿ ಸಂಗಮದಲ್ಲಿ ಗಣೇಶ ವಿಸರ್ಜನೆ ಮಾಡುವಂತಿಲ್ಲ

ಶ್ರೀರಂಗಪಟ್ಟಣ, ಸೆ.6– ಪಟ್ಟಣ ಪೊಲೀಸ್ ಠಾಣಾ ವ್ಯಾಪ್ತಿಯ ಗಂಜಾಂ ಕಾವೇರಿ ಸಂಗಮದಲ್ಲಿ ಗಣೇಶ ಮೂರ್ತಿಯನ್ನು ವಿಸರ್ಜಿಸದಂತೆ ತಾಲೂಕು ದಂಡಾಧಿಕಾರಿ ಪರುಶುರಾಮ ಸತ್ತಿಗೇರಿ ನಿರ್ಬಂದಿಸಿ ನಿಷೇದಾಜ್ಞೆ ಜಾರಿ ಮಾಡಿದ್ದಾರೆ. ಶ್ರೀರಂಗಟಪ್ಟಣ ಟೌನ್ ಪೊಲೀಸ್ ವರದಿಯಂತೆ, ಗಂಜಾಂನ ಸಂಗಮ ಸ್ಥಳವು ತುಂಬಾ ಅಪಾಯಕಾರಿ ಸ್ಥಳವಾಗಿದ್ದು, ಮೈಸೂರು ಹಾಗೂ ಸುತ್ತಮುತ್ತಲಿನಿಂದ ಗೌರಿ ಗಣೇಶ ಮೂರ್ತಿಗಳನ್ನು ವಿಸರ್ಜಿಸಲು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವುದು ಕಂಡು ಬಂದಿರುತ್ತದೆ. ಅತಿಯಾದ ಸುಳಿಗಳು ಇರುವುದರಿಂದ ಗಣೇಶಮೂರ್ತಿಗಳನ್ನು ವಿಸರ್ಜನೆಗೆ ಸುರಕ್ಷಿತ ಸ್ಥಳವಾಗಿರುವುದಿಲ್ಲ ಎಂದರು.

ಈ ಹಿಂದೆ ಅನೇಕ ಸಾವು ನೋವುಗಳ ಪ್ರಕರಣಗಳು ದಾಖಲಾಗಿರುವುದರಿಂದ ಹಾಗೂ ದಡದಲ್ಲಿ ಪಾಚಿಕಟ್ಟಿರುವುದರಿಂದ ಸುರಕ್ಷತೆ ಇರುವುದಿಲ್ಲ. ಜೊತೆಗೆ ರಾತ್ರಿ ವೇಳೆಯಲ್ಲಿ ಗಣೇಶಮೂರ್ತಿಗಳನ್ನು ವಿಸರ್ಜನೆ ಮಾಡುವುದರಿಂದ ಸಾವು ನೋವು ಸಂಭವಿಸುವ ಸಾಧ್ಯತೆ ಇರುತ್ತದೆ. ಹಾಗಾಗಿ ಸಾರ್ವಜನಿಕರ ಪ್ರಾಣ ರಕ್ಷಣೆ ದೃಷ್ಟಿಯಿಂದ ಸೆ7ರ ಬೆಳಿಗ್ಗೆ 6 ಗಂಟೆಯಿಂದ ಸೆ29 ರ ಸಂಜೆ 6 ವರೆಗೆ ಸಂಪೂರ್ಣವಾಗಿ ನಿರ್ಬಂದಿಸಿ ನಿಷೇದಾಜ್ಞೆ ಜಾರಿಗೊಳಿಸಿದ್ದಾರೆ.

ಐದನೇ ಪುಟದಿಂದ

ಮುಡಾ ನಿವೇಶನ ಮಂಜೂರು

ಇಷ್ಟು ತ್ವರಿತವಾಗಿ ಕೆಲಸ ಕಾರ್ಯಗಳು ನಡೆಯುತ್ತಿವೆಯೇ? ಎಂದು ಮೂಗಿನ ಮೇಲೆ ಬೆರಳಿಟ್ಟು ಪ್ರಶ್ನಿಸಿಕೊಳ್ಳುವಂತೆ ಮಾಡಿದೆ.

ಯಾವುದೋ ರಾಜಕಾರಣಿಯೋ ಅಥವಾ ಅತ್ಯಂತ ಪ್ರಭಾವಿ ವ್ಯಕ್ತಿಯೋ ಸಲ್ಲಿಸಿದ ಅರ್ಜಿಯನ್ನು ಪ್ರಭಾವಕ್ಕೆ ಮಣಿದು ದಿನೇಶ್‌ಕುಮಾರ್ ಅತ್ಯಂತ ತ್ವರಿತವಾಗಿ ವಿಲೇವಾರಿ ಮಾಡಿದ್ದಾರೆ ಎಂದು ನೀವು ಭಾವಿಸಿದರೆ ಅದು ತಪ್ಪು. ಅರ್ಜಿದಾರ ಪ್ರಭಾವಿ ವ್ಯಕ್ತಿಯೂ ಅಲ್ಲ, ರಾಜಕಾರಣಿಯೂ ಅಲ್ಲ. ದಿನೇಶ್‌ಕುಮಾರ್ **ಹಿತಾಸಕ್ತಿಯ** ಫಲವಾಗಿ ಇದು ಸಾಧ್ಯ ಎಂಬುದು ಕಾನೂನು ಶಾಖೆಯ ಟಿಪ್ಪಣಿ ಸಾರಿ ಸಾರಿ ಹೇಳುತ್ತದೆ.

ವಿವರ: ಮೈಸೂರಿನ ರಾಜೇಂದ್ರನಗರ ನಿವಾಸಿ ಸೈಯ್ಯದ್ ಜಾಫರ್ ಎಂಬುವರ ಮಗ ಸೈಯ್ಯದ್ ಯೂಸುಫ್ ಎಂಬುವರು 2023ರ ಫೆಬ್ರವರಿ 28ರಂದು ತಮಗೆ ಸೇರಿದ ಮೈಸೂರು ತಾಲೂಕು ಕಸಬಾ ಹೋಬಳಿ ಈರನಗೆರೆ ಗ್ರಾಮದ ಸರ್ವೆ ನಂಬರ್ 85/1ರಲ್ಲಿನ 2.06 ಎಕರೆ ಜಮೀನನ್ನು ಮುಡಾ ಭೂಸ್ವಾಧೀನಪಡಿಸಿಕೊಳ್ಳದೇ ಬಡಾವಣೆಯಾಗಿ ಉಪಯೋಗಿಸಿಕೊಂಡಿದೆ. ಆದ್ದರಿಂದ ತಮ್ಮ ಜಮೀನಿಗೆ ಪರಿಹಾರವಾಗಿ 50:50ರ ಅನುಪಾತದಡಿ ನಿವೇಶನ ನೀಡುವಂತೆ ಕೋರಿದ್ದಾರೆ. ಸೈಯ್ಯದ್ ಯೂಸುಫ್, ಈ ಅರ್ಜಿಯನ್ನು ಮುಡಾದ ಸ್ವೀಕೃತಿ ಶಾಖೆಯಲ್ಲಿ ಸಲ್ಲಿಸಿರುವುದಕ್ಕೆ ಯಾವುದೇ ಪುರಾವೆ ಇಲ್ಲ. ಕಾರಣ, ಈ ಅರ್ಜಿಯಲ್ಲಿ ಸ್ವೀಕೃತಿ ಸಂಖ್ಯೆಯೇ ಇಲ್ಲ. ಹೀಗಾಗಿ ಸ್ವೀಕೃತಿ ಶಾಖೆಯಲ್ಲಿ ಅರ್ಜಿ ದಾಖಲಾಗಿಲ್ಲ ಆ ನಂತರ ಈ ಅರ್ಜಿಯು ಭೂಸ್ವಾಧೀನ ಶಾಖೆಗೆ ತಲುಪಿದ ಬಗ್ಗೆಯೂ ಯಾವುದೇ ಪುರಾವೆ ಇಲ್ಲ. ಕಾರಣ ಅರ್ಜಿಯಲ್ಲಿ ಭೂಸ್ವಾಧೀನ ಶಾಖೆಯ ವಿಷಯವಾಗಿ ಸಂಖ್ಯೆಯೇ ನಮೂದಾಗಿಲ್ಲ ಎಂಬುದು ಕಾನೂನು ಶಾಖೆಯ ಟಿಪ್ಪಣಿಯಿಂದ ತಿಳಿದುಬಂದಿದೆ.

ಈ ಅರ್ಜಿ ಅದು ಹೇಗೆ ಆಯುಕ್ತರಾಗಿದ್ದ ದಿನೇಶ್‌ಕುಮಾರ್ ಕೈ ಸೇರಿತು ಎಂಬುದಕ್ಕೆ ಅವರೇ ಉತ್ತರಿಸಬೇಕಿದೆ. ಅಂತೂ–ಇಂತು ಅರ್ಜಿಯಂತೂ ಆಯುಕ್ತರ ಕೈ ತಲುಪಿದೆ. ಆಯುಕ್ತರು ಮರುದಿನವೇ ಈ ಅರ್ಜಿಗೆ ಸ್ಪಂದಿಸಿ ಕಡತವನ್ನು ಮಂಡಿಸಿದ್ದಾರೆ. ಈ ಕಡತ ಮುಡಾದ ವಿವಿಧ ಶಾಖೆಗಳನ್ನು ಎಕ್ಸ್‌ಪ್ರೆಸ್ ವೇಗದಲ್ಲಿ ದಾಟಿ, ಅರ್ಜಿ ಸಲ್ಲಿಕೆಯಾದ 7ನೇ ದಿನ, 2023ರ ಮಾರ್ಚ್ 7ರಂದು ದಿನೇಶ್‌ಕುಮಾರ್ ಅಧಿಕೃತ ಜ್ಞಾಪನದ ಮೇರೆಗೆ ಈರನಗೆರೆಯಲ್ಲಿ ಭೂಸ್ವಾಧೀನಪಡಿಸಿಕೊಳ್ಳದೇ ಮುಡಾ ಬಳಸಿಕೊಂಡಿರುವ ಜಮೀನಿಗೆ ಪರಿಹಾರವಾಗಿ 23,881 ಚದರ ಅಡಿ ಅಭಿವೃದ್ಧಿಪಡಿಸಿದ ನಿವೇಶನ ಮಂಜೂರು ಮಾಡಿ ಆದೇಶ ಹೊರಡಿಸಿದ್ದಾರೆ. ಮುಡಾದ ಸ್ವೀಕೃತಿ ಶಾಖೆಯಲ್ಲಿ ದಾಖಲು ಮಾಡಿಕೊಳ್ಳದೇ ಹಾಗೂ ಭೂಸ್ವಾಧೀನ ಶಾಖೆಯಲ್ಲಿಯೂ ಯಾವುದೇ ವಿಷಯ ವಹಿಯ ಸಂಖ್ಯೆಯನ್ನೂ ನಮೂದಿಸದೇ ಕೇವಲ 7 ದಿನಗಳಲ್ಲೇ 50:50ರ ಅನುಪಾತದಲ್ಲಿ ಒಟ್ಟು 23,881 ಚದರ ಅಡಿ ಅಭಿವೃದ್ಧಿಪಡಿಸಿದ ನಿವೇಶನಗಳನ್ನು ಮಂಜೂರು ಮಾಡಿ ಆದೇಶ ಹೊರಡಿಸಿರುವುದು ಅನುಮಾನಾಸ್ಪದವಾಗಿದೆ ಎಂದು ಕಾನೂನು ಶಾಖೆಯ ಟಿಪ್ಪಣಿ ಶಂಕೆ ವ್ಯಕ್ತಪಡಿಸಿದೆ.

ಎಕ್ಸ್‌ಪ್ರೆಸ್ ವೇಗದಲ್ಲಿ ನಿವೇಶನ ಮಂಜೂರು ಮಾಡಿದ ದಿನೇಶ್‌ಕುಮಾರ್, ಅರ್ಜಿಯಲ್ಲಿ ತಿಳಿಸಿರುವ ಈರನಗೆರೆ ಸರ್ವೆ ನಂಬರ್ 85/1ರಲ್ಲಿನ 2.06 ಎಕರೆ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳದೇ ಬಡಾವಣೆ ನಿರ್ಮಾಣ ಮಾಡಿರುವುದು ನಿಜವೇ ಆಗಿದ್ದರೆ, ಆ ಬಡಾವಣೆ ಯಾವುದು? ಯಾವ ಸಾಲಿನಲ್ಲಿ ಬಡಾವಣೆಯನ್ನು ಅಭಿವೃದ್ಧಿಪಡಿಸಲಾಗಿದೆ ಹಾಗೂ ಸದರಿ ಸರ್ವೆ ನಂಬರ್‌ನ ಭೂಮಿಯನ್ನು ಯಾವ ಕಾರಣಕ್ಕಾಗಿ ಮುಡಾ ಭೂಸ್ವಾದೀನಪಡಿಸಿಕೊಂಡಿಲ್ಲ ಎಂಬುದರ ಬಗ್ಗೆ ಯಾವುದೇ ರೀತಿಯ ಪರಿಶೀಲನಾ ವರದಿ ಕಡತದಲ್ಲಿ ಇಲ್ಲ. ಅಂದಿನ ಆಯುಕ್ತರು ಪರಿಶೀಲನಾ ವರದಿ ಪಡೆಯುವ ಪ್ರಯತ್ನವನ್ನೇ ಮಾಡಿಲ್ಲ ಎಂಬ ಆರೋಪ ಕಾನೂನು ಶಾಖೆಯದು.

ಈರನಗೆರೆ ಸರ್ವೆ ನಂಬರ್ 85/1ರಲ್ಲಿನ 2.06 ಎಕರೆ ಜಮೀನಿಗೆ ಸೈಯ್ಯದ್ ಯೂಸುಫ್ ಹೆಸರಿನಲ್ಲಿ ಆರ್‌ಟಿಸಿ ಇದೆ. ಅದರಲ್ಲಿ ಈ ಭೂಮಿಯನ್ನು ಅವರು ಕ್ರಯಕ್ಕೆ ಪಡೆದಿರುವುದಾಗಿ ನಮೂದಿಸಲಾಗಿದೆ. ಆರ್‌ಟಿಸಿಯಲ್ಲಿ ಹೀಗೆ ನಮೂದಾಗಿದ್ದರೂ ಯೂಸುಫ್ ಅವರಿಗೆ ಸದರಿ ಸ.ನಂ.ನ ಜಮೀನು ಕ್ರಯವಾಗಿರುವುದು ಎಲ್ಲೂ ಕಂಡುಬರುತ್ತಿಲ್ಲ. ಹೀಗಾಗಿ ಆರ್‌ಟಿಸಿಯಲ್ಲಿ ಇವರ ಹೆಸರು ನಮೂದಾಗಿರುವುದು ಕೂಡ ಅನುಮಾನಾಸ್ಪದವಾಗಿರುತ್ತದೆ ಎಂದು ಕಾನೂನು ಶಾಖೆ ಟಿಪ್ಪಣಿಯಲ್ಲಿ ಉಲ್ಲೇಖಿಸಲಾಗಿದೆ.

ಸಾಮಾನ್ಯವಾಗಿ ಮುಡಾಗೆ ಸಲ್ಲಿಸುವ ಅರ್ಜಿ ಜೊತೆಗೆ ದಾಖಲೆಗಳನ್ನು ನೀಡುವಾಗ ಅವುಗಳು ಜೆರಾಕ್ಸ್ ಪ್ರತಿಗಳಾಗಿದ್ದರೆ ದೃಢೀಕರಿಸಬೇಕು. ಆದರೆ, ಈ ಜಮೀನಿಗೆ ಸಂಬಂಧಿಸಿದಂತೆ ಸಲ್ಲಿಕೆಯಾದ ಯಾವುದೇ ದಾಖಲೆಯು ದೃಢೀಕೃತ ಪ್ರತಿಯಲ್ಲ ಎಂದಿರುವ ಕಾನೂನು ಶಾಖೆ, ಕೇವಲ ಜೆರಾಕ್ಸ್ ಪ್ರತಿಗಳ ಆಧಾರದ ಮೇರೆಗೆ ಮೂಲ ಮಾಲೀಕರ ಬಗ್ಗೆ ಪರಿಶೀಲನೆಯನ್ನೂ ನಡೆಸದೇ ಏಕಾಏಕಿ ಕೇವಲ 7 ದಿನದಲ್ಲಿ 50:50ರ ಅನುಪಾತದಡಿ ನಿವೇಶನ ಮಂಜೂರಾತಿ ಆದೇಶ ಹೊರಡಿಸಿರುವುದನ್ನು ನೋಡಿದರೆ, ಅಂದಿನ ಆಯುಕ್ತ ದಿನೇಶ್‌ಕುಮಾರ್ ಯಾವುದೇ ನಿಯಮಾವಳಿಯನ್ನು ಪಾಲಿಸದೇ ನಿವೇಶನ ಮಂಜೂರಾತಿ ಆದೇಶ ಹೊರಡಿಸಿರುವುದು ಕಂಡುಬಂದಿದೆ ಎಂದು ಟಿಪ್ಪಣಿ ಹೇಳಿದೆ.

ಅರ್ಜಿಯಲ್ಲಿನ ಭೂಮಿ ತಾಳೆಯೇ ಆಗುತ್ತಿಲ್ಲ: ಲಭ್ಯವಿರುವ ಕ್ರಯಪತ್ರದ ಪ್ರತಿಯನ್ನು ಪರಿಶೀಲಿಸಿದಾಗ ಈರನಗೆರೆ ಸ. ನಂ. 85/1ರಲ್ಲಿನ 2.06 ಎಕರೆ ಜಮೀನು ಅರ್ಜಿದಾರ ಯೂಸುಫ್ ಅವರಿಗೆ ನೋಂದಣಿಯಾಗಿಲ್ಲ. ಆದರೆ, ಸರ್ವೆ ನಂಬರ್ 84/2ರಲ್ಲಿ 1.35 ಎಕರೆ, 87/1ರಲ್ಲಿ 0.22 ಎಕರೆ, 91/2ರಲ್ಲಿ 1.15 ಎಕರೆ, 92/2ರಲ್ಲಿ 1.18 ಎಕರೆ ಜಮೀನು ಸೈಯ್ಯದ್ ಜಾಫರ್ ಸಾಬ್ರ ಮಕ್ಕಳು ಸೈಯ್ಯದ್ ಯೂಸುಫ್ ಉರುಫ್ ಸಾಬ್ಜು ಮತ್ತು ಸೈಯ್ಯದ್ ಅಬ್ದುಲ್ ರಹೀಂ ಸಾಹೇಬರ ಮಕ್ಕಳು ಸೈಯ್ಯದ್ ಸಾಹೇಬ್ ಎಂಬುವರಿಗೆ ನೋಂದಣಿ ಆಗಿರುವುದು ಕಂಡುಬಂದಿದೆ. ಈ ಕ್ರಯಪತ್ರವು ಮುಡಾಗೆ ಯೂಸುಫ್ ಸಲ್ಲಿಸಿರುವ ಅರ್ಜಿಯಲ್ಲಿನ ಸ. ನಂ. 85/1ಕ್ಕೆ ಸಂಬಂಧಿಸಿದ್ದಲ್ಲ. ಆರ್‌ಟಿಸಿಯಲ್ಲಿ ನಮೂದಾಗಿರುವ ಪ್ರದೇಶಕ್ಕೆ ಈ ಜಮೀನು ತಾಳೆ ಆಗುತ್ತಿಲ್ಲ ಎಂದು ಟಿಪ್ಪಣಿಯಲ್ಲಿ ಹೇಳಲಾಗಿದೆ.

ಹೆಸರಲ್ಲಿ ಭೂಮಿ ನೋಂದಣಿ!

ಕ್ರಯಪತ್ರದಲ್ಲಿರುವ ಯೂಸುಫ್ ಬೇರೆಯವರಾಗಿದ್ದು, ಈಗ ದಿನೇಶ್‌ಕುಮಾರ್ ಅವರಿಂದ ಪರಿಹಾರವಾಗಿ ನಿವೇಶನ ಪಡೆದಿರುವ ಯೂಸುಫ್ ಬೇರೆಯವರು ಎಂಬುದು ಸ್ಪಷ್ಟವಾಗುತ್ತದೆ ಎಂದು ಟಿಪ್ಪಣಿ ತಿಳಿಸಿದೆ. ಒಟ್ಟಾರೆ ಸಂಪೂರ್ಣವಾಗಿ ಎಲ್ಲಾ ನಿಯಮಗಳನ್ನೂ ಉಲ್ಲಂಘಿಸಿ ಕಾನೂನುಬಾಹಿರವಾಗಿ 50:50ರ ಅನುಪಾತದ ಯೋಜನೆಯನ್ನು ದುರುಪಯೋಗಪಡಿಸಿಕೊಂಡಿರುವ ಮುಡಾ ಹಿಂದಿನ ಆಯುಕ್ತ ಜಿ.ಟಿ. ದಿನೇಶ್‌ಕುಮಾರ್, ಸದ್ಯಕ್ಕೆ ಮೈಸೂರಿನ ಜೆಪಿ ನಗರ 1ನೇ ಹಂತ ಇ ಬ್ಲಾಕ್ ಬಡಾವಣೆಯಲ್ಲಿರುವ ನಿವೇಶನ ಸಂಖ್ಯೆ 555/1ಕ್ಕೆ ಒಳಪಟ್ಟ 6x9 ಮೀಟರ್ ಅಳತೆಯ ಬೆಲೆಬಾಳುವ ಮುಡಾ ಆಸ್ತಿಯ ದಾಖಲೆ ಲಭ್ಯವಾಗಿದೆ. ಹೀಗೆ ಕಂಡ ಕಂಡವರಿಗೆ ಮುಡಾ ಆಸ್ತಿಧಾರೆ ಎರೆಯುವ ಮೂಲಕ ಮುಡಾ ಲೂಟಿಗೆ ದಿನೇಶ್‌ಕುಮಾರ್ ದಾರಿ ಮಾಡಿಕೊಟ್ಟಿರುವುದು ದಾಖಲೆಗಳಿಂದ ತಿಳಿದುಬಂದಿದೆ.

2ನೇ ಸುತ್ತಿನ ಸೀಟು ಹಂಚಿಕೆ

ಕಡ್ಡಾಯವಾಗಿರುತ್ತದೆ. ಒಂದು ವೇಳೆ ಶುಲ್ಕ ಪಾವತಿಸಿ, ಕಾಲೇಜಿಗೆ ಪ್ರವೇಶ ಪಡೆಯದಿದ್ದರೆ ಅಂತಹವರು ಕಾನೂನು ಕ್ರಮ ಎದುರಿಸಬೇಕಾಗುತ್ತದೆ. ಹೀಗಾಗಿ ಅಭ್ಯರ್ಥಿಗಳು ಇಷ್ಟ ಇರುವ ಕಾಲೇಜುಗಳನ್ನು ಮಾತ್ರ ದಾಖಲಿಸಬೇಕು ಎಂದು ಅವರು ಸಲಹೆ ನೀಡಿದ್ದಾರೆ. ಯುಜಿ ಸಿಇಟಿಗೆ ಸಂಬಂಧಿಸಿದಂತೆ ಎರಡನೇ ಸುತ್ತಿನ ಸೀಟು ಹಂಚಿಕೆಯ ಫಲಿತಾಂಶದ ನಂತರ ಅಭ್ಯರ್ಥಿಗಳು ತಮಗೆ ಇಷ್ಟ ಇರುವ ಯಾವುದಾದರೊಂದು ಛಾಯ್ಸ್ ಆಯ್ಕೆ ಮಾಡಿಕೊಳ್ಳಬಹುದು. ಈ ಕುರಿತು ಸದ್ಯದಲ್ಲೇ ವಿವರಗಳನ್ನು ನೀಡಲಾಗುವುದು ಎಂದು ತಿಳಿಸಿದ್ದಾರೆ. ಮೂಲ ದಾಖಲೆ ಸಲ್ಲಿಕೆ: ಯುಜಿ ನೀಟ್‌ನ ಮೊದಲ ಸುತ್ತಿನಲ್ಲಿ ಖಾಸಗಿ ಕಾಲೇಜುಗಳಲ್ಲಿ ಸರ್ಕಾರಿ ಕೋಟಾದ ವೈದ್ಯಕೀಯ ಸೀಟು ಪಡೆದಿರುವ ಅಥವಾ ಖಾಸಗಿ ಕೋಟಾದ ಸೀಟುಗಳನ್ನು ಖಾಸಗಿ ಕಾಲೇಜುಗಳಲ್ಲಿ ಪಡೆದವರು ಮೂಲ ದಾಖಲೆಗಳನ್ನು ಸೆ.9ರಿಂದ 12ರವರೆಗೆ ಕೆಇಎಗೆ ಸಲ್ಲಿಸಬೇಕು ಎಂದು ಅವರು ಕೋರಿದ್ದಾರೆ. ಛಾಯ್ಸ್–2 ಆಯ್ಕೆ ಮಾಡಿ ಶುಲ್ಕ ಪಾವತಿಸಿರುವ ಅಭ್ಯರ್ಥಿಗಳು ಕೂಡ ಈ ದಿನಾಂಕಗಳಂದು ಮೂಲ ದಾಖಲೆ ಸಲ್ಲಿಸಬಹುದು ಎಂದು ಅವರು ಮಾಹಿತಿ ನೀಡಿದ್ದಾರೆ.

ಮೊದಲ ಹಂತದ ಯೋಜನೆ ಉದ್ಘಾಟನೆ

ಅಧಿಕಾರದಲ್ಲಿ ಇದ್ದಾಗ ಎತ್ತಿನಹೊಳೆ ಯೋಜನೆಗೆ ಅಡಿಪಾಯ ಹಾಕಿದ್ದು, ಈಗ ಮತ್ತೆ ಅಧಿಕಾರಕ್ಕೆ ಬಂದು ಬರಡು ಭೂಮಿಗೆ ನೀರು ಹರಿಸುವ ಕಾರ್ಯಕ್ಕೆ ಚಾಲನೆ ನೀಡಿದ್ದೇನೆ. ಅಪನಂಬಿಕೆ ಸೃಷ್ಟಿಸುವವರ ಮಾತುಗಳನ್ನು ಕೇಳಬೇಡಿ. ನಿಮ್ಮ ಕಣ್ಣೆದುರಿಗೆ ಇರುವುದನ್ನು ನಂಬಿ ಎಂದು ಕರೆ ನೀಡಿದ್ದಾರೆ. ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ 1ನೇ ಹಂತಕ್ಕೆ ಬೈಕೆರೆ ದೊಡ್ಡನಾಗರದಲ್ಲಿ ಚಾಲನೆ ನೀಡಿದರು. ಎತ್ತಿನಹೊಳೆ ಯೋಜನೆಯ ಎರಡನೇ ಹಂತ

2027ರ ವೇಳೆಗೆ ಪೂರ್ಣಗೊಳ್ಳಲಿದ್ದು, 7 ಜಿಲ್ಲೆಗಳ ಲಕ್ಷಾಂತರ ಮನೆಗಳಿಗೆ ಕುಡಿಯುವ ನೀರು ತಲುಪುವುದು ಶತಃಸಿದ್ಧ ಎಂದರು.

ಎತ್ತಿನಹೊಳೆ ಯೋಜನೆಗೆ ತಮ್ಮ ಕಾಲದಲ್ಲೇ ಭೂಮಿಪೂಜೆ ನಡೆದಿತ್ತು. ಮೊದಲ ಹಂತದ ಯೋಜನೆಯನ್ನೂ ನಾನೇ ಉದ್ಘಾಟಿಸಿದ್ದೇನೆ. ಎರಡನೇ ಹಂತದ ಯೋಜನೆಯನ್ನೂ ನಾನೇ ಉದ್ಘಾಟಿಸಿ ಯೋಜನೆಯನ್ನು ಪೂರ್ಣ ಮಾಡಿ ಕುಡಿಯುವ ನೀರನ್ನು ಕೊಟ್ಟೇ ಕೊಡುತ್ತೀವಿ, ಕೆರೆಗಳನ್ನು ತುಂಬಿಸುವುದೂ ಗ್ಯಾರಂಟಿ ಎಂದು ಹೇಳಿದ್ದಾರೆ. ಎತ್ತಿನಹೊಳೆ ಎರಡು ಹಂತದ ಯೋಜನೆಯಾಗಿದ್ದು ಮೊದಲ ಹಂತ ಇಂದು ಉದ್ಘಾಟನೆಯಾಗಿದೆ, ಎರಡನೇ ಹಂತ 2027ರ ವೇಳೆಗೆ ಮುಕ್ತಾಯಗೊಂಡು ಇಡೀ ಯೋಜನೆ ಯಶಸ್ವಿಯಾಗಿ ಜಾರಿಯಾಗಲಿದೆ. ಯೋಜನೆಯ ಅನುಕೂಲ ಲಕ್ಷಾಂತರ ಫಲಾನುಭವಿಗಳಿಗೆ ತಲುಪಲಿದೆ, 7 ಜಿಲ್ಲೆಗಳ ಜನತೆಯ ಮನೆಗಳಿಗೆ ಕುಡಿಯುವ ನೀರು ತಲುಪುತ್ತದೆ. ಇದರೊಂದಿಗೆ ಹತ್ತಾರು ಕೆರೆಗಳನ್ನೂ ತುಂಬಿಸಲಾಗುತ್ತದೆ. ಕುಡಿಯುವ ನೀರಿನ ವಿಚಾರದಲ್ಲಿ ರೈತರಿಗೆ ಅರಣ್ಯಾಧಿಕಾರಿಗಳು ಯಾವುದೇ ತೊಂದರೆ ಕೊಡಬಾರದು. ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ರಾಮನಗರ, ತುಮಕೂರು, ಹಾಸನ, ಚಿಕ್ಕಮಗಳೂರು ಜಿಲ್ಲೆಗಳ 29 ತಾಲೂಕುಗಳ ಜನರ ಬದುಕನ್ನೇ ಬದಲಾಯಿಸುವ ಈ ಮಹತ್ವಾಕಾಂಕ್ಷೆ ಯೋಜನೆ ಇದಾಗಿದೆ ಎಂದರು.

ಇನ್ನು ಹತ್ತು ವರ್ಷ ಬೇಕು!

24.01 ಟಿಎಂಸಿ ನೀರನ್ನು ಮುಂಗಾರು ಅವಧಿಯಲ್ಲಿ ಪೂರ್ವಭಾವಿಯಾಗಿ ತಿರುಗಿಸಿ, ರಾಜ್ಯದ ಬರಪೀಡಿತ ಏಳು ಜಿಲ್ಲೆಗಳಿಗೆ ಕುಡಿಯುವ ನೀರು ಪೂರೈಕೆ ಹಾಗೂ 527 ಕೆರೆಗಳಿಗೆ ನೀರು ತುಂಬಿಸುವ ಉದ್ದೇಶದಯೋಜನೆ ಇದಾಗಿದೆ.

ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ರಾಮನಗರ, ತುಮಕೂರು, ಹಾಸನ ಹಾಗೂ ಚಿಕ್ಕಮಗಳೂರು ಜಿಲ್ಲೆಗಳ ಹಳ್ಳಿಗಳು ಮತ್ತು ಕೆರೆಗಳಿಗೆ ನೀರು ಪೂರೈಸುವುದು ಎತ್ತಿನಹೊಳೆ ಯೋಜನೆಯ ಗುರಿಯಾಗಿದೆ.

ಮೊದಲ ಹಂತದಲ್ಲಿ ನೀರನ್ನು ತಡೆದು ಸದ್ಯಕ್ಕೆ ಚಿತ್ರದುರ್ಗದ ವಾಣಿವಿಲಾಸ ಸಾಗರಕ್ಕೆ ಹರಿಸುವುದಕ್ಕೆ ಚಾಲನೆ ನೀಡಲಾಗಿದೆ. ವಾಣಿವಿಲಾಸ ಸಾಗರದಿಂದ ಉಳಿದ ಜಿಲ್ಲೆಗಳಿಗೆ ನೀರು ಹರಿಸಲು ಯೋಜನೆಗಳನ್ನು ರೂಪಿಸಿಲ್ಲ, ಈಗ ಸದ್ಯಕ್ಕೆ ಚಿತ್ರದುರ್ಗ ಮತ್ತು ತುಮಕೂರಿನ ಕೆಲವು ತಾಲೂಕುಗಳಿಗೆ ಮಾತ್ರ ಇದರ ಪ್ರಯೋಜನ ದೊರೆಯಲಿದೆ. ದೊಡ್ಡಬಳ್ಳಾಪುರ ಸಮೀಪ ಅಣೆಕಟ್ಟೆ ನಿರ್ಮಿಸಿ ಎತ್ತಿನಹೊಳೆಯಿಂದ ನೀರನ್ನು ಇಲ್ಲಿಗೆ ಹರಿಸಿ ನಂತರ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ತುಮಕೂರಿನ ಕೆಲವು ಭಾಗಗಳಿಗೆ ನೀರು ಹರಿಸುವ ಯೋಜನೆ ರೂಪಿಸಲಾಗಿತ್ತು.

ಮೂಲ ಉದ್ದೇಶದಂತೆ ಇನ್ನೂ ಅಣೆಕಟ್ಟೆಯೇ ನಿರ್ಮಾಣವಾಗಿಲ್ಲ, ನೀರು ಹರಿಸುವ ಕೊಳವೆಯನ್ನು ತಂದು ಬಿಡಲಾಗಿದೆ ಅಷ್ಟೇ. ಇದೇ ಮಾದರಿಯಲ್ಲಿ ಇನ್ನೂ ಮೂರು–ನಾಲ್ಕು ಅಣೆಕಟ್ಟೆಗಳನ್ನು ನಿರ್ಮಿಸಿ ಅದರ ಮೂಲಕ ಈ ಜಿಲ್ಲೆಗಳಿಗೆ ಕುಡಿಯುವ ನೀರು ಪೂರೈಸುವುದು ಮತ್ತು ಕೆರೆಗಳನ್ನು ತುಂಬಿಸಬೇಕಿದೆ.

ಆದರೆ, ಅಣೆಕಟ್ಟೆ ನಿರ್ಮಾಣಕ್ಕೆ ಕೆಲವೆಡೆ ಇನ್ನೂ ಭೂಸ್ವಾಧೀನ ಕಾರ್ಯವೂ ನಡೆದಿಲ್ಲ, ಕೋಲಾರ, ಚಿಕ್ಕಬಳ್ಳಾಪುರ ಹಾಗೂ ತುಮಕೂರಿನ ಕೆಲವು ಭಾಗದ ಕುಡಿಯುವ ನೀರಿನ ದಾಹ ನೀಗಿಸುವ ಉದ್ದೇಶದಿಂದ 10 ವರ್ಷಗಳ ಹಿಂದೆ ಯೋಜನೆ ರೂಪಿಸಲಾಗಿತ್ತು.

ಒಂದು ದಶಕದ ಹಿಂದೆಯೇ ಕಾಮಗಾರಿ ಆರಂಭಗೊಂಡರೂ ಪರ್ಯಾಯವಾಗಿ ನೀರು ಸಂಗ್ರಹಿಸುವ ಅಣೆಕಟ್ಟೆಗಳ ನಿರ್ಮಾಣಕ್ಕೆ ಇದುವರೆಗೂ ಚಾಲನೆ ನೀಡಿಲ್ಲ. ಸದ್ಯಕ್ಕೆ ಏತ ಕಾಮಗಾರಿಗಳು ಮತ್ತು ವಿದ್ಯುತ್ ಪೂರೈಕೆ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ.

ಎತ್ತಿನಹೊಳೆಯಿಂದ 252.61 ಕಿಲೋಮೀಟರ್ ಕೊಳವೆಯಲ್ಲಿ ನೀರು ಹರಿಸಿ ಈ ಎಲ್ಲಾ ಜಿಲ್ಲೆಗಳಿಗೆ ತಲುಪಿಸಬೇಕು. ಆದರೆ ಇದುವರೆಗೂ 164.7 ಕಿಲೋ ಮೀಟರ್ ಕಾಲುವೆ ಕಾಮಗಾರಿ ಪೂರ್ಣ ಗೊಂಡಿದೆ, ಮಧುಗಿರಿ–ಪಾವಗಡ, ಟಿ.ಜಿ.ಹಳ್ಳಿ–ರಾಮನಗರ, ಗೌರಿಬಿದನೂರು ಫೀಡರ್ ಕಾಮಗಾರಿಗಳು ಪ್ರಗತಿಯಲ್ಲಿವೆ.

ಕೋಲಾರ, ಶ್ರೀನಿವಾಸಪುರ ಫೀಡರ್‌ಗಳ ಕಾಮಗಾರಿಯೇ ಆರಂಭಗೊಂಡಿಲ್ಲ, ಯಾವ ಉದ್ದೇಶದಿಂದ ಯೋಜನೆ ಕೈಗೆತ್ತಿಕೊಂಡರೋ ಆ ಯೋಜನೆ ಪೂರ್ಣಗೊಳ್ಳಲು ಇನ್ನೂ ಇಷ್ಟೇ ಸಮಯ ಮುಂದಕ್ಕೂ ಬೇಕಾಗಬಹುದು.

ಸೋಯಾಬಿನ್, ಉದ್ದಿನ ಕಾಳು ಖರೀದಿ

ಬೆಂಬಲ ಬೆಲೆಯಲ್ಲಿ ಖರೀದಿ ಮಾಡಲಾಗಿದೆ. ಎಪಿಎಂಸಿ ಯಾರ್ಡ್‌ಗಳಲ್ಲಿ 150 ಕೋಟಿ ರೂ. ವೆಚ್ಚದಲ್ಲಿ 14ರಿಂದ 15 ಶೀಥಲಗೃಹಗಳನ್ನು ನಿರ್ಮಾಣ ಮಾಡಲಾಗುವುದು, ರಾಜ್ಯದ ನಾಲ್ಕು ಕಂದಾಯ ವಿಭಾಗಗಳಲ್ಲಿ ವಿಭಾಗಾವಾರು ವಿಜಿಲೆನ್ಸ್ ಸೆಲ್‌ಗಳನ್ನು ರಚಿಸಲಾಗಿದೆ ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು.

ವಿಜಿಲೆನ್ಸ್ ರಚನೆ ಪರಿಣಾಮ ಎಪಿಎಂಸಿ ಆದಾಯ ಹೆಚ್ಚಾಗಿದೆ, ಈ ವರ್ಷ 380 ರೂ.ನಿಂದ 400 ಕೋಟಿ ರೂ. ಆದಾಯ ನಿರೀಕ್ಷೆ ಮಾಡಲಾಗಿದೆ, ಆರ್ಥಿಕ ವರ್ಷದ ಮೊದಲ 5 ತಿಂಗಳಲ್ಲಿ 133.15 ಕೋಟಿ ರೂ. ಆದಾಯ ಸಂಗ್ರಹವಾಗಿದೆ, ಕಳೆದ ವರ್ಷ ಇದೇ ಅವಧಿಯಲ್ಲಿ 77.42 ಕೋಟಿ ರೂ. ಆದಾಯ ಸಂಗ್ರಹವಾಗಿತ್ತು ಎಂದರು.

ವಿದ್ಯುತ್ ಸಬ್ಸಿಡಿ ಮಿತಿ ರದ್ದು: ರಾಜ್ಯ ಸರ್ಕಾರ ವಿದ್ಯುತ್ ಮಗ್ಗ ಮತ್ತು ಮಗ್ಗಪೂರ್ವ ಘಟಕಗಳ ವಿದ್ಯುತ್ ಸಬ್ಸಿಡಿ ಮಿತಿ ರದ್ದುಪಡಿಸಿದ್ದು, ಇದರಿಂದ ಪ್ರತಿ ನೇಕಾರರಿಗೆ ವಾರ್ಷಿಕ ಕನಿಷ್ಟ 40,000 ರೂ. ಉಳಿತಾಯವಾಗಲಿದೆ.

10.1 ಎಚ್‌ಪಿಯಿಂದ 20 ವರೆಗಿನ ವಿದ್ಯುತ್ ಮಗ್ಗ ಮತ್ತು ಮಗ್ಗಪೂರ್ವ ಘಟಕಗಳು ಬಳಕೆ ಮಾಡುವ ಪೂರ್ಣ ವಿದ್ಯುತ್‌ಗೆ ಸಬ್ಸಿಡಿ ನೀಡಲಿದ್ದು, ನೇಕಾರರು ಪ್ರತಿ ಯೂನಿಟ್‌ಗೆ 1.25 ರೂ. ಮಾತ್ರ ಪಾವತಿಸಬೇಕು, ಇದರಿಂದ 4000 ಘಟಕಗಳಿಗೆ ಅನುಕೂಲವಾಗಲಿದೆ. ಇದುವರೆಗೆ ಮಾಸಿಕ 500 ಯೂನಿಟ್‌ಗೆ ಮಾತ್ರ ಸಬ್ಸಿಡಿ ನೀಡಲಾಗುತ್ತಿತ್ತು, ಹೆಚ್ಚುವರಿ ಬಳಕೆಯ ವಿದ್ಯುತ್‌ಗೆ ನೇಕಾರರು ವಿದ್ಯುತ್ ಕಂಪನಿಗಳು ನಿಗದಿಪಡಿಸಿರುವ ದರದಲ್ಲಿ ಶುಲ್ಕ ಪಾವತಿಸಬೇಕಿತ್ತು, ಸರ್ಕಾರ ಸಬ್ಸಿಡಿ ಮಿತಿ ರದ್ದುಪಡಿಸಿದ ಪರಿಣಾಮ ಮಾಸಿಕ ಎಷ್ಟು ವಿದ್ಯುತ್ ಬಳಕೆ ಮಾಡಿದರೂ ಯೂನಿಟ್‌ಗೆ 1.25 ರೂ. ದರ ಮಾತ್ರ ವಿಧಿಸಲಾಗುವುದು ಎಂದು ವಿವರಿಸಿದರು. ಚುನಾವಣೆ ಸಮಯದಲ್ಲಿ ಕೊಟ್ಟ ಮಾತಿನಂತೆ 10 ಎಚ್‌ಪಿವರೆಗಿನ ಎಲ್ಲ ವಿದ್ಯುತ್ ಮಗ್ಗ ಮತ್ತು ಮಗ್ಗಪೂರ್ವ ಘಟಕಗಳಿಗೆ ಶೂನ್ಯದರದಲ್ಲಿ ವಿದ್ಯುತ್ ಪೂರೈಕೆ ಮಾಡಲಾಗುತ್ತಿದೆ. ನೇಕಾರರ ಬೇಡಿಕೆಗೆ ಸ್ಪಂದಿಸಿ 500 ಯೂನಿಟ್ ಮಿತಿ ರದ್ದುಪಡಿಸಲಾಗಿದೆ, ಇದರಿಂದ ಸರ್ಕಾರಕ್ಕೆ ವಾರ್ಷಿಕ 17 ಕೋಟಿ ರೂ. ಹೊರೆಯಾಗಲಿದೆ ಎಂದರು.

ಗಜಪಡೆಯ ತಾಲೀಮು

ಸಯ್ಯಾಜಿರಾವ್ ರಸ್ತೆ, ಕೆ.ಆರ್.ವೃತ್ತದ ಮೂಲಕ ಅರಮನೆಗೆ ವಾಪಸ್ಸಾದವು. 12 ಆನೆಗಳು ತಾಲೀಮಿನಲ್ಲಿ ಪಾಲ್ಗೊಂಡಿದ್ದರಿಂದ ಆನೆಗಳ ಸಾಲು ಬಲು ಉದ್ದವಾಗಿದ್ದ ಹಿನ್ನೆಲೆಯಲ್ಲಿ ಸಾರ್ವಜನಿಕರು, ವಾಹನ ಸವಾರರು ಆನೆಗಳನ್ನು ಕಂಡು ಸಂಭ್ರಮಿಸಿದರು. ಅಲ್ಲದೆ, ಮೊಬೈಲ್‌ಗಳಲ್ಲಿ ಫೋಟೋ, ವಿಡಿಯೋ ತೆಗೆದುಕೊಂಡರು. ತಾಲೀಮಿಗಾಗಿ ಆಗಮಿಸಿದ ದಸರಾ ಗಜಪಡೆಗೆ ಸಯ್ಯಾಜಿರಾವ್ ರಸ್ತೆಯಲ್ಲಿ ವ್ಯಾಪಾರಿಗಳು ಹೂವು–ಹಣ್ಣು ಸಮರ್ಪಿಸಿದರು. ಇಂದು ಕ್ಯಾಪ್ಟನ್ ಅಭಿಮನ್ಯು ತಾಲೀಮನ್ನು ಮುನ್ನಡೆಸಿತು. ಎಲ್ಲಾ ಆನೆಗಳಿಗೂ ಹೂವನ್ನು ಕೊಟ್ಟು ವ್ಯಾಪಾರಿಗಳು ಕೈ ಮುಗಿದರು.

ಪೌರಕಾರ್ಮಿಕರಿಗೆ ಸೀರೆ ಹಾಗೂ ಸಿಹಿ ವಿತರಣೆ...



ಬಿಜೆಪಿ ಮುಖಂಡರಾದ ಎಂ.ಕುಮಾರ್ (ಸಂಜೀವಿನಿ ಕುಮಾರ್) ಗೌರಿ–ಗಣೇಶ ಹಬ್ಬದ ಪ್ರಯುಕ್ತ ಸ್ವಚ್ಛತಾ ಕಾರ್ಯದಲ್ಲಿ ತೊಡಗಿರುವ 50ಕ್ಕೂ ಹೆಚ್ಚು ಮಹಿಳಾ ಮತ್ತು ಪುರುಷ ಪೌರಕಾರ್ಮಿಕರಿಗೆ ಸೀರೆ ಹಾಗೂ ಹೊಸ ಬಟ್ಟೆ, ಸಿಹಿ ವಿತರಿಸಿ ಶುಭಾಶಯ ಕೋರಿದರು. ಈ ವೇಳೆ ಆರೋಗ್ಯ ಪರಿವೀಕ್ಷಕರಾದ ನಾರಾಯಣ, ಜಯರಾಂ, ರಾಮೇಗೌಡ, ಪ್ರಧಾನ ಕಾರ್ಯದರ್ಶಿ ಎ.ಪಿ. ಮಹೇಂದ್ರ ಇದ್ದಾರೆ.

ಮುತ್ತೈದೆಯರಿಗೆ ಕುಂಕುಮ, ಬಳೆ, ಸೀರೆ ವಿತರಣೆ



ಮೈಸೂರು ತಾಲೂಕು ವರುಣ ಗ್ರಾಮದಲ್ಲಿ ಮನಿಯಮ್ಮ ದೇವಸ್ಥಾನದ ಉದ್ಘಾಟನಾ ಕಾರ್ಯಕ್ರಮದಲ್ಲಿ ಗೌರಿ ಹಬ್ಬದ ಪ್ರಯುಕ್ತ ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ಮುತ್ತೈದೆಯರಿಗೆ ಕುಂಕುಮ, ಬಳೆ, ಸೀರೆ ವಿತರಿಸಿದರು. ಈ ವೇಳೆ ಕೆಪಿಸಿಸಿ ಕಾರ್ಯದರ್ಶಿ ವರುಣ ಮಹೇಶ್, ಮೈಸೂರು ಕಾಂಗ್ರೆಸ್ ಜಿಲ್ಲಾಧ್ಯಕ್ಷ ಬಿ.ಜೆ. ವಿಜಯಕುಮಾರ್, ಗ್ರಾಮದ ಮುಖಂಡ ಮಹಾದೇವ ಇನ್ನಿತರರಿದ್ದರು

ಯಶ್ವಂತ್ ನಾಯಕ್‌ಗೆ ಮಾರ್ಷಲ್ ಆರ್ಟ್ ಆಟದಲ್ಲಿ ಚಿನ್ನದ ಪದಕ



ಬಾಗಲಕೋಟೆಯಲ್ಲಿ ನಡೆದ ಮಾರ್ಷಲ್ ಆರ್ಟ್ (ಕದನ ಕಲೆಗಳು) ಆಟದಲ್ಲಿ ಚಿನ್ನದ ಪದಕ ವಿಜೇತರಾದ ವೀರನಗೆರೆ ಆರ್. ಶ್ರೀನಿವಾಸ್ ಅವರ ಪುತ್ರ ಯಶ್ವಂತ್ ನಾಯಕ್ ಅವರನ್ನು ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕರಾದ ಕೆ.ಉಮಾಶಂಕರ್, ಪಡುವಾರಹಳ್ಳಿ ಎಂ.ರಾಮಕೃಷ್ಣ ಅಭಿನಂದಿಸಿದರು.

ಖದೀಮನ ಸೆರೆ: 1.5 ಲಕ್ಷ ರೂ. ಮೌಲ್ಯದ ಆಭರಣ ವಶ

ಮೈಸೂರು, ಸೆ. 6(ಆರ್‌ಕೆ)–ಮನೆ ಕಳ್ಳನನ್ನು ಬಂಧಿಸಿರುವ ಮೈಸೂರಿನ ಹೆಬ್ಬಾಳು ಠಾಣೆ ಪೊಲೀಸರು, 1.5 ಲಕ್ಷ ರೂ. ಮೌಲ್ಯದ 15 ಗ್ರಾಂ ಚಿನ್ನಾಭರಣ ಹಾಗೂ 1 ಕೆಜಿ ಬೆಳ್ಳಿ ಪದಾರ್ಥಗಳನ್ನು ವಶಪಡಿಸಿಕೊಂಡಿದ್ದಾರೆ.

ಮೂಲತಃ ಗುಂಡ್ಲುಪೇಟೆ ತಾಲೂಕಿನ ಕರಲವ ಮಾದಳ್ಳಿ ಗ್ರಾಮದವನಾಗಿದ್ದು, ಮೈಸೂರಿನ ಕುವೆಂಪುನಗರ ಎಂ ಬ್ಲಾಕ್, 7ನೇ ಕ್ರಾಸ್ ನಿವಾಸಿ ಡಿ.ಎಂ. ಮಾದೇಶ(40) ಬಂಧಿತ ಆರೋಪಿ. ಮೈಸೂರಿನ ಹೆಬ್ಬಾಳು 1ನೇ ಹಂತದ ಲಕ್ಷ್ಮೀಕಾಂತನಗರದ ರೇಣುಕಾ ಎಂಬುವರ ಮನೆಯ ಕಿಟಕಿ ಬಳಿ ಇಟ್ಟಿದ್ದ ಕೀಲಿಯಿಂದ ಬೀಗ ತೆಗೆದು 2024ರ ಆಗಸ್ಟ್ 30 ರಂದು ಚಿನ್ನಾಭರಣ ಮತ್ತು ಬೆಳ್ಳಿ ಪದಾರ್ಥಗಳನ್ನು ಕಳವು ಮಾಡಿದ್ದ. ಪ್ರಕರಣ ದಾಖಲಿಸಿಕೊಂಡಿದ್ದ ಹೆಬ್ಬಾಳು ಠಾಣೆ ಇನ್ಸ್‌ಪೆಕ್ಟರ್ ಎ.ಮಲ್ಲೇಶ, 2024ರ ಸೆ2ರಂದು ಮಾದೇಶನನ್ನು ಬಂಧಿಸಿ, ಕಳವಾಗಿದ್ದ ಮಾಲನ್ನು ವಶಪಡಿಸಿಕೊಂಡಿದ್ದಾರೆ.

ಡಿಸಿಪಿ ಎಸ್. ಜಾಹ್ನವಿ ಮಾರ್ಗದರ್ಶನದಂತೆ ವಿಜಯನಗರ ಉಪವಿಭಾಗದ ಎಸಿಪಿ ಎಸ್.ಜಿ.ಗಜೇಂದ್ರಪ್ರಸಾದ್ ನೇತೃತ್ವದಲ್ಲಿ ನಡೆದ ಪತ್ತೆ ಕಾರ್ಯದಲ್ಲಿ ಹೆಬ್ಬಾಳು ಠಾಣೆ ಇನ್ಸ್‌ಪೆಕ್ಟರ್ ಎ. ಮಲ್ಲೇಶ್, ಸಬ್ ಇನ್ಸ್‌ಪೆಕ್ಟರ್‌ಗಳಾದ ಕೀರ್ತಿ, ಪ್ರವೀಣ್, ಎಎಸ್‌ಐ ಆರ್.ಟಿ.ಗಣೇಶ್, ಸಿಬ್ಬಂದಿಗಳಾದ ಸ್ವಾಮಾರಾಧ್ಯ, ಸುಭಾನುಲ್ಲಾ, ಬಾಲಾಧಾರ, ತಿಲಕ್‌ಕುಮಾರ್, ಮೋಹನ್‌ಕುಮಾರ್, ಅಣ್ಣಪ್ಪ ದೇವಾಡಿಗಾ, ಕುಮಾರ್ ಪಾಲ್ಗೊಂಡಿದ್ದರು.

ಮೈಸೂರಲ್ಲಿ ಗೌರಿ–ಗಣೇಶರ ಫೋಟೋಶೂಟ್



ಮೈಸೂರು, ಸೆ.6(ಎಂಕೆ)– ಗೌರಿ–ಗಣೇಶನ ವಾಕಿಂಗ್–ಟಾಕಿಂಗ್... ಹಬ್ಬದ ಸಡಗರ–ಸಂಭ್ರಮದಲ್ಲಿರುವ ಮೈಸೂರಲ್ಲಿ ಗೌರಿ–ಗಣೇಶ ದರ್ಶನ ನೀಡುವ ಮೂಲಕ ಅಚ್ಚರಿ ಮೂಡಿಸಿದರು...!

ಈ ಪ್ರಪಂಚವೇ ಒಂದು ರಂಗಭೂಮಿ, ಆ ದೇವರೇ ಸೂತ್ರಧಾರ, ಆತನು ಆಡಿಸಿದಂತೆ ಆಡುವ ಪಾತ್ರಧಾರಿಗಳು ನಾವೆಲ್ಲಾ' ಎಂಬಂತೆ ಸೂತ್ರಧಾರರಾದ ಗೌರಿ–ಗಣೇಶ ಪಾತ್ರಧಾರಿಗಳಾಗಿದ್ದ ಮೈಸೂರಿನ ಶ್ರೀರಾಂಪುರದ ಚೈತ್ರ 'ಗೌರಿ'ಯಾಗಿ, ಹತ್ತನೇ ತರಗತಿ ವಿದ್ಯಾರ್ಥಿ ಪುಣ್ಯಶ್ರವಣ್ 'ಗಣೇಶ'ನಾಗಿ ಫೋಟೋಶೂಟ್ ನಡೆಸುವ ಮೂಲಕ ಸಾರ್ವಜನಿಕರ ಗಮನ ಸೆಳೆದರು.

ಗೌರಿ–ಗಣೇಶ ಹಬ್ಬದಲ್ಲಿ ಮಡುಗಟ್ಟಿರುವ ಮೈಸೂರಿನ ಪ್ರಮುಖ ಸ್ಥಳಗಳಾದ ದೇವರಾಜ ಮಾರುಕಟ್ಟೆ, ಚಿಕ್ಕಗಡಿಯಾರ ಸೇರಿದಂತೆ ಜನಸಂದಣಿ ಸ್ಥಳಗಳಲ್ಲಿ ಫೋಟೋಶೂಟ್ ನಡೆಸುವ ಮೂಲಕ ಸಾಕ್ಷಾತ್ ಗೌರಿ–ಗಣೇಶನಂತೆ ದರ್ಶನ ನೀಡಿದರಲ್ಲದೆ ದೇವರಾಜ ಮಾರುಕಟ್ಟೆಯೊಳಗೆ ಸಂಚರಿಸಿ ಹಣ್ಣುಗಳನ್ನು ಖರೀದಿ ಮಾಡುವ ಮೂಲಕ ಎಲ್ಲರ ಗಮನ ಸೆಳೆದರು.

ಮದುವೆ ಫೋಟೋಶೂಟ್‌ಗಳಿಗೆ ಸುದ್ದಿಯಾಗಿರುವ ಮೈಸೂರಿನ ಪ್ರಮುಖ ಸ್ಥಳಗಳಲ್ಲಿ ಗೌರಿ–ಗಣೇಶನ ಅವತಾರದಲ್ಲಿ ಮಿಂಚಿನ ಫೋಟೋಶೂಟ್ ನಡೆಸುವ ಮೂಲಕ ನೋಡುಗರ ಕಣ್ಮನ ಸೆಳೆದ ಇಬ್ಬರೂ ಪಾತ್ರದಾರಿಗಳು, ಜನತೆಯಲ್ಲಿ ಭಕ್ತಿ ಸುಧೆಯನ್ನು ಹರಿಸಿದರು. ಗೌರಿ–ಗಣೇಶ ಹಬ್ಬದ ಸಂದರ್ಭದಲ್ಲಿ ಗೌರಿ–ಗಣೇಶರಂತೆ ಫೋಟೋಶೂಟ್ ನಡೆಸಿದ್ದು ವಿಶೇಷವೆನಿಸಿದೆ ಎಂದು ಛಾಯಾಗ್ರಾಹಕ ವಿಕ್ರಂ ವಾಸುದೇವ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಗಣೇಶ ಮೂರ್ತಿ ವಿಸರ್ಜನೆಗೆ ಟ್ಯಾಂಕರ್ ವ್ಯವಸ್ಥೆ

ಸಂಜೆ 5 ರಿಂದ ರಾತ್ರಿ 11 ಗಂಟೆವರೆಗೆ ಸಮಯ ನಿಗದಿ; ಸಂಬಂಧಿಸಿದ ಅಧಿಕಾರಿಗಳ ಮಾಹಿತಿ ಪ್ರಕಟಣೆ

ಮೈಸೂರು, ಸೆ.6(ಬಿಎಲ್‌ಯು)– ಗೌರಿ–ಗಣೇಶ ವಿಗ್ರಹಗಳನ್ನು ವಿಸರ್ಜಿಸಲು ಮೈಸೂರು ನಗರದ 9 ವಲಯಗಳಲ್ಲಿ ಮೂರು ದಿನಗಳ ಕಾಲ ಟ್ಯಾಂಕರ್ ವ್ಯವಸ್ಥೆ ಮಾಡಲಾಗಿದೆ. ಪರಿಸರ ಸ್ನೇಹಿ ಗೌರಿ–ಗಣೇಶಮೂರ್ತಿಗಳನ್ನು ಪರಿಸರಕ್ಕೆ ಹಾನಿ ಆಗದಂತೆ ವಿಸರ್ಜಿಸಲು ನಗರ ಪಾಲಿಕೆ ವ್ಯವಸ್ಥೆ ಕೈಗೊಂಡಿದೆ.

ನಗರದ 9 ವಲಯಗಳ ಪ್ರಮುಖ ರಸ್ತೆ ಹಾಗೂ ವೃತ್ತಗಳಲ್ಲಿ ವಿಗ್ರಹ ವಿಸರ್ಜಿಸಲು ಟ್ಯಾಂಕರ್ ವ್ಯವಸ್ಥೆ ಮಾಡಲಾಗಿದೆ. ಸೆ.7, 9 ಮತ್ತು 11 ಈ ಮೂರು ದಿನಗಳ ಕಾಲ ಟ್ಯಾಂಕರ್‌ಗಳಲ್ಲಿ ಗೌರಿ–ಗಣೇಶ ವಿಗ್ರಹಗಳನ್ನು ಸಮೀಪದಲ್ಲೇ ವಿಸರ್ಜಿಸ ಬಹುದಾಗಿದೆ ಎಂದು ಹೇಳಿದ್ದಾರೆ. ಈ ಮೂರು ದಿನದಂದು ಸಂಜೆ 5 ರಿಂದ ರಾತ್ರಿ 11 ಗಂಟೆ ತನಕ ಟ್ಯಾಂಕರ್ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ತಿಳಿಸಿದ್ದಾರೆ. ಸಾರ್ವಜನಿಕರಿಗೆ ಹೆಚ್ಚಿನ ಮಾಹಿತಿ ಬೇಕಿದ್ದಲ್ಲಿ ನಗರ ಪಾಲಿಕೆಯ ಈ ಅಧಿಕಾರಿಗಳನ್ನು ಸಂಪರ್ಕಿಸಬಹುದು.

ಅಗ್ರಹಾರದ 101 ಗಣಪತಿ ದೇವಸ್ಥಾನ: ಆರೋಗ್ಯ ಪರಿವೀಕ್ಷಕಿ ಪಿ.ಪ್ರೀತಿ (9738327757), ವಾಹನದ ಸಂಖ್ಯೆ ಕೆಎ 09 ಸಿ–7262, ಚಾಲಕನ ಹೆಸರು ಗಿರೀಶ್ (9900658917)

ಭೂತಾಳೆ ಮೈದಾನ: ಆರೋಗ್ಯ ಪರಿವೀಕ್ಷಕ ಹೆಚ್.ಎಂ.ಶಿವಪ್ರಸಾದ್ (9964254808), ಶೋಭಾ (8792988437) ವಾಹನದ ಸಂಖ್ಯೆ ಕೆಎ 09 ಎಎ8714, ಚಾಲಕನ ಹೆಸರು ಪಳನಿ (9845252636) ಈ ಎರಡು ಸ್ಥಳಗಳಿಗೆ ಪರಿಸರ ಅಭಿಯಂತರರು ಜ್ಯೋತಿ (9916694234).

ಬಲ್ಲಾಳ್ ವೃತ್ತ: ಆರೋಗ್ಯ ಪರಿವೀಕ್ಷಕ ಜಿ.ಆರ್.ಶಶಿಕುಮಾರ್ (9008145906) ವಾಹನದ ಸಂಖ್ಯೆ ಕೆಎ09ಎಎ8707, ಚಾಲಕನ ಹೆಸರು ಆರ್.ಶಂಕರ್ (9481638206).

ವಿವೇಕಾನಂದ ವೃತ್ತ: ಆರೋಗ್ಯ ಪರಿವೀಕ್ಷಕಿ ಶೀಲಾ (9632900538), ಕೆ.ಅಶ್ವಥ್ (72599 23805) ವಾಹನದ ಸಂಖ್ಯೆ ಕೆಎ09ಎಎ 1226, ಚಾಲಕನ ಹೆಸರು ವಿಶ್ವನಾಥ್ (9686421668)



ಈ ಎರಡು ಸ್ಥಳಗಳಗೆ ಪರಿಸರ ಅಭಿಯಂತರರು ಮಹದೇವಮ್ಮ (7795380993)

ಅನಿಕೇತನ ರಸ್ತೆ, ಜ್ಞಾನಗಂಗಾ ಶಾಲೆ: ಆರೋಗ್ಯ ಪರಿವೀಕ್ಷಕ ಪ್ರಭಾಕರ್(9844040434) ಎಂ.ಕೆ. ಸೋಮಶೇಖರ್ (9844432551) ವಾಹನದ ಸಂಖ್ಯೆ ಕೆಎ09ಸಿ–7263, ಚಾಲಕನ ಹೆಸರು ಪಳನಿಸ್ವಾಮಿ (9141497077), ಮತ್ತೊಂದು ವಾಹನದ ಸಂಖ್ಯೆ ಕೆಎ09ಎಎ1229, ಚಾಲಕನ ಹೆಸರು ಪುರುಷೋತ್ತಮ (7676009328)

ವಲಯ ಕಚೇರಿ–3, ಶಾರದಾದೇವಿನಗರ: ಆರೋಗ್ಯ ಪರಿವೀಕ್ಷಕ ಪ್ರವೀಣ್ ಕುಮಾರ್ (9964874982), ರವಿಶಂಕರ್ (9449982238)

ಈ ಎರಡು ಸ್ಥಳಗಳಿಗೆ ಪರಿಸರ ಅಭಿಯಂತರರು ಕೃಷ್ಣಮೂರ್ತಿ (9742484892).

ಮಾತೃಮಂಡಳಿ ವೃತ್ತ : ಆರೋಗ್ಯ ಪರಿವೀಕ್ಷಕ ಪ್ರಕಾಶ್ (9986420871, 8123826396), ವಾಹನದ ಸಂಖ್ಯೆ ಕೆಎ09ಎಎ8708, ಚಾಲಕನ ಹೆಸರು ಎಸ್.ಆನಂದ (7411506050).

ಎಂ.ಜಿ. ಕೊಪ್ಪಲು, ಸಂಗಮ ವೃತ್ತ: ಆರೋಗ್ಯ ಪರಿವೀಕ್ಷಕ ಹರೀಶ್‌ಕುಮಾರ್ (7676010098), ವಾಹನದ ಸಂಖ್ಯೆ ಕೆಎ09ಸಿ3863, ಚಾಲಕನ ಹೆಸರು ವಾಜಿದ್ ಪಾಷ (9845088901) ಈ ಎರಡು ಸ್ಥಳಗಳಿಗೆ ಪರಿಸರ ಅಭಿಯಂತರರು ಶ್ರೀದೇವಿ (8147240348).

ವಲಯ ಕಚೇರಿ–5, ಬಸವನಗುಡಿ ವೃತ್ತ: ಆರೋಗ್ಯ ಪರಿವೀಕ್ಷಕಿ ಸುಗುಣ (7259817305), ವಾಹನದ ಸಂಖ್ಯೆ ಕೆಎ09ಎಎ8709, ಚಾಲಕನ ಹೆಸರು ಪುಟ್ಟ (8147241290)

ಅಭಿಷೇಕ್ ವೃತ್ತ: ಆರೋಗ್ಯ ಪರಿವೀಕ್ಷಕಿ ಎನ್.ಎಂ. ಗೀತಾ (9880154561), ಯೋಗೇಶ್ (8951780625), ವಾಹನದ ಸಂಖ್ಯೆ ಕೆಎ09ಸಿ9915, ಚಾಲಕನ ಹೆಸರು ಪ್ರಸನ್ನಕುಮಾರ್ (9972829770) ಈ ಎರಡು ಸ್ಥಳಗಳಿಗೆ ಪರಿಸರ ಅಭಿಯಂತರರು ನವೀನ್ (9480413750).

ಪುಲಕೇಶಿ ರಸ್ತೆ: ಆರೋಗ್ಯ ಪರಿವೀಕ್ಷಕ ಎಸ್. ಮಂಜುಕುಮಾರ್ (9164143489), ವಾಹನದ ಸಂಖ್ಯೆ ಕೆಎ09ಸಿ7264, ಚಾಲಕನ ಹೆಸರು ಶಾಂತ ಕುಮಾರ್ (9880144436).

ವಲಯ ಕಚೇರಿ–6: ಆರೋಗ್ಯ ಪರಿವೀಕ್ಷಕ ಬಸವರಾಜು (8722646408, ಧನಂಜಯಗೌಡ (9071150087), ವಾಹನದ ಸಂಖ್ಯೆ ಕೆಎ 09ಎಎ8713, ಚಾಲಕನ ಹೆಸರು ಚೇತನ್ (8904524048) ಈ 2 ಸ್ಥಳಗಳಿಗೆ ಪರಿಸರ ಅಭಿಯಂತರರು ಮೈತ್ರಿ (8105739384).

ಎಫ್‌ಟಿಎಸ್ ವೃತ್ತ: ಆರೋಗ್ಯ ಪರಿವೀಕ್ಷಕಿ ನಮ್ರತಾ (9741593580), ವಾಹನದ ಸಂಖ್ಯೆ ಕೆಎ09ಎಎ8710, ಚಾಲಕನ ಹೆಸರು ರಫೀಕ್ ಅಹ್ಮದ್ (9845764870).

ಪುಲಕೇಶಿ ರಸ್ತೆ, ಬಿ.ಬಿ.ಕೇರಿ: ಆರೋಗ್ಯ ಪರಿವೀಕ್ಷಕ ಎಸ್.ದರ್ಶನ್ (7019768854), ಅಶೋಕ್ (99645 06754), ವಾಹನದ ಸಂಖ್ಯೆ ಕೆಎ09ಎ 1230, ಚಾಲಕನ ಹೆಸರು ಪ್ರವೀಣ್ (7204857706) ಈ 2 ಸ್ಥಳಗಳಿಗೆ ಪರಿಸರ ಅಭಿಯಂತರರು ಚಿನ್ಮಯಿ (9902975701).

ಮಾರುತಿ ವೃತ್ತ, ಎನ್.ಆರ್.ಮೊಹಲ್ಲಾ: ಆರೋಗ್ಯ ಪರಿವೀಕ್ಷಕ ಶ್ರೀನಿಧಿ (8217858644), ವಾಹನದ ಸಂಖ್ಯೆ ಕೆಎ09ಎಎ1227, ಚಾಲಕನ ಹೆಸರು ಪ್ರಶಾಂತ್ (9008011939).

ಗಣೇಶ ನಗರ, ಉದಯಗಿರಿ: ಆರೋಗ್ಯ ಪರಿವೀಕ್ಷಕಿ ರಾಜೇಶ್ವರಿ ಬಾಯಿ (7760954056), ಡಿ.ಕೆ.ಮಂಜುನಾಥ್ (9538316393 ಮತ್ತು 9591867165), ಕೆ.ಎ.ಮುರುಗೇಶ್ (94811 18078), ವಾಹನದ ಸಂಖ್ಯೆ ಕೆಎ09ಎಎ8716, ಚಾಲಕನ ಹೆಸರು ಮಹಬೂಬ್ ಪಾಷ (9141380148) ಈ ಎರಡು ಸ್ಥಳಗಳಿಗೆ ಪರಿಸರ ಅಭಿಯಂತರರು ನವೀನ್ (9480413750).

ಟೆರಿಷಿಯನ್ ಕಾಲೇಜು ವೃತ್ತ: ಆರೋಗ್ಯ ಪರಿವೀಕ್ಷಕ ಎಲ್.ಕಾರ್ತಿಕ್ (9900410697), ವಾಹನದ ಸಂಖ್ಯೆ ಕೆಎ09ಎಎ8717, ಚಾಲಕನ ಹೆಸರು ಮಧುಸೂದನ್ (7406123983).

ತ್ರಿವೇಣಿ ವೃತ್ತ: ಆರೋಗ್ಯ ಪರಿವೀಕ್ಷಕಿ ಶೃತಿ (998600253), ಸಹನಾ (9900145407), ವಾಹನದ ಸಂಖ್ಯೆ ಕೆಎ09ಎಎ1224, ಚಾಲಕನ ಹೆಸರು ಹೆಚ್.ಚಂದ್ರಶೇಖರ್ (9739616673) ಈ ಎರಡು ಸ್ಥಳಗಳಿಗೆ ಪರಿಸರ ಅಭಿಯಂತರರು ಜ್ಯೋತಿ (9916694234).

ಜೋಸ್ ಅಲುಕ್ಕಾಸ್ ಜುವೆಲರಿ ವತಿಯಿಂದ ಸಿಎಸ್‌ಆರ್ ಫಂಡ್‌ನಿಂದ ಅನುದಾನ



ಜೋಸ್ ಅಲುಕ್ಕಾಸ್ ಜುವೆಲರಿ ವತಿಯಿಂದ ಸಿಎಸ್‌ಆರ್ ಫಂಡ್‌ನಿಂದ ಅನುದಾನ ಕಾರ್ಯಕ್ರಮವನ್ನು ಮೈಸೂರಿನ ಬಿಇಓ ರೇವಣ್ಣ, ಉದ್ಘಾಟಿಸಿದರು. ಅನುದಾನವನ್ನು ಮೈಸೂರು ತಾಲೂಕು, ಪುಟ್ಟೇಗೌಡನಹುಂಡಿ ಗ್ರಾಮದ ಸರ್ಕಾರಿ ಪ್ರೌಢಶಾಲೆ ಮತ್ತು ಸತ್ಯ ಸಾಯಿ ಅನಾನಿಕೇತನ ಟ್ರಸ್ಟ್‌ಗೆ ಬಿಡುಗಡೆ ಮಾಡಲಾಗಿದೆ. ಈ ವೇಳೆ ಬ್ರ್ಯಾಂಚ್ ಮ್ಯಾನೇಜರ್ ಹರಿ ಎ.ಆರ್., ಅಸಿಸ್ಟೆಂಟ್ ಮ್ಯಾನೇಜರ್ ಸಂತೋಷ್ ಕುಮಾರ್ ಎಂ, ಅಕೌಂಟ್ಸ್ ಮ್ಯಾನೇಜರ್ ಚಾರ್ಲಿ, PRO ರಾಘವೇಂದ್ರ ಬಿ.ಎಸ್. ಉಪಸ್ಥಿತರಿದ್ದರು.

ಮೂವತ್ತನೇ ವರ್ಷದ ಗಣಪತಿ ಪೂಜಾ ಮಹೋತ್ಸವ



ಮೈಸೂರು, ಸೆ. 6– ಮೈಸೂರು ಹೆಬ್ಬಾಳು ಬಡಾವಣೆ ಹುಡ್ಕೋ 1ನೇ ಹಂತ ಹೊಯ್ಸಳ ಯುವ ವೇದಿಕೆಯು 30ನೇ ವರ್ಷದ ಗಣಪತಿ ಪೂಜಾ ಮಹೋತ್ಸವ ಆಚರಿಸುತ್ತಿದ್ದು, ನಾಳೆ (ಸೆ. 7) ಬೆಳಗ್ಗೆ 10 ಗಂಟೆಗೆ ಗಣಪತಿ ಪ್ರತಿಷ್ಠಾನೆ, ಸೆ. 8ರಂದು ಭಾನುವಾರ ಬೆಳಗ್ಗೆ 10 ಗಂಟೆಗೆ ಗಣಪತಿ ಹೋಮ ಹಾಗೂ ಮಧ್ಯಾಹ್ನ 12 ಗಂಟೆ ಅನ್ನಸಂತರ್ಪಣೆ ಏರ್ಪಡಿಸಿದೆ. ಸೆ. 9ರಂದು ಸೋಮವಾರದಂದು ಸಂಜೆ 5 ಗಂಟೆಗೆ ಶ್ರೀ ಗಣಪತಿ ವಿಸರ್ಜನೆಯನ್ನು ಹಮ್ಮಿಕೊಂಡಿದೆ ಎಂದು ಹೊಯ್ಸಳ ಯುವ ವೇದಿಕೆ ತಿಳಿಸಿದೆ.

ಹೆಬ್ಬಾಳಲ್ಲಿ ಗಣಪತಿ ಹೋಮ

ಮೈಸೂರು, ಸೆ.6(ಬಿಎಲ್‌ಯು)–ಮೈಸೂರಿನ ಹೆಬ್ಬಾಳು ಹೊಯ್ಸಳ ಯುವ ವೇದಿಕೆಯ 30ನೇ ವರ್ಷದ ಗಣಪತಿ ಪೂಜಾ ಮಹೋತ್ಸವದ ಅಂಗವಾಗಿ ಸೆಪ್ಟೆಂಬರ್ 8 ರಂದು ಗಣಪತಿ ಹೋಮ ಆಯೋಜಿಸಿದೆ. ಹೆಬ್ಬಾಳು ಹೊಯ್ಸಳ ಸರ್ಕಲ್‌ನ ಹುಡ್ಕೊ ಮೊದಲ ಹಂತದಲ್ಲಿ ಅಂದು ಬೆಳಿಗ್ಗೆ 10 ಗಂಟೆಗೆ ಗಣಪತಿ ಹೋಮ ನಡೆಯಲಿದ್ದು, ಮಧ್ಯಾಹ್ನ 12 ಗಂಟೆಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ. ಸೆ.9 ರಂದು ಸಂಜೆ 5 ಗಂಟೆಗೆ ಗಣಪತಿ ಮೂರ್ತಿಯ ವಿಸರ್ಜನೆ ನೆರವೇರಲಿದೆ.

ಸೆ.9ಕ್ಕೆ ವೇಲುಕ್ಕುಡಿ ಕೃಷ್ಣನ್‌ಸ್ವಾಮಿ ಅವರಿಂದ 'ಅಘಟಿತ ಘಟನಾ' ವಿಶೇಷ ಉಪನ್ಯಾಸ



ಮೈಸೂರು, ಸೆ.6–ನಗರದ ಕಾಳಿದಾಸ ರಸ್ತೆಯಲ್ಲಿರುವ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನದಲ್ಲಿ ಯತಿ ರಾಜ ಮಠ, ಮೈಸೂರು ಶಾಖೆ ಮತ್ತು ಮೈಸೂರು ಪಂಚಗರುಡೋತ್ಸವ ಸೇವಾ ಸಮಿತಿ ಸಂಯುಕ್ತಾಶ್ರಯದಲ್ಲಿ ಸೆ.9ರಂದು ಸೋಮವಾರ ಬೆಳಿಗ್ಗೆ 10ರಿಂದ ಮಧ್ಯಾಹ್ನ 12.30ರವರೆಗೆ ಶ್ರೀ ಯದುಗಿರಿ ಯತಿರಾಜ ಜೀಯರ್ ಸ್ವಾಮೀಜಿಯವರ ಅಮೃತ ಮಹೋತ್ಸವ ಅಂಗವಾಗಿ ಶ್ರೀ ಉ.ವೇ.ವೇಲುಕ್ಕುಡಿ ಕೃಷ್ಣನ್ ಸ್ವಾಮಿಯವರಿಂದ 'ಅಘಟಿತ ಘಟನಾ' ವಿಷಯದ ಕುರಿತು ವಿಶೇಷ ಉಪನ್ಯಾಸವನ್ನು ಏರ್ಪಡಿಸಲಾಗಿದೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗ ಮಿಸಿ ಇದರ ಸದುಪಯೋಗಪಡಿಸಿ ಕೊಳ್ಳಬೇಕೆಂದು ದೇವಸ್ಥಾನದ ಮುಖ್ಯಸ್ಥ ಕೆ.ಆರ್.ಯೋಗಾನರಸಿಂಹನ್ (ಮುರುಳಿ ಅಯ್ಯಂಗಾರ್) ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಮಾಹಿತಿಗೆ ಮೊಬೈಲ್ 9342188323, 7598832271 ಸಂಪರ್ಕಿಸಬಹುದು.

ಇಂದಿನಿಂದ 9ರವರೆಗೆ ಶ್ರೀ ಗಣಪತಿ ಪೂಜಾ ಮಹೋತ್ಸವ

ಮೈಸೂರು,ಸೆ.6–ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ, ಚಾಮುಂಡಿಬೆಟ್ಟ ಮೈಸೂರು, ವತಿಯಿಂದ ಅರಮನೆ ಕೋಟೆ ಉತ್ತರ ಬಾಗಿಲಿನ ಶ್ರೀ ವಿನಾಯಕ ಸ್ವಾಮಿ ದೇವಸ್ಥಾನದಲ್ಲಿ ಶ್ರೀ ವಿನಾಯಕ ಚತುರ್ಥಿ ಪ್ರಯುಕ್ತ ಶ್ರೀ ಗಣಪತಿ ಪೂಜಾ ಮಹೋತ್ಸವವನ್ನು ಸೆಪ್ಟೆಂಬರ್ 7ರಿಂದ 9ರವರೆಗೆ ಆಯೋಜಿಸಲಾಗಿದೆ.

ಸೆ.7 ಸಂಜೆ 6 ಗಂಟೆಗೆ ಕೆ.ಪುಷ್ಪಲತಾ ನಾರಾಯಣ ತಂಡವರಿಂದ ಭಕ್ತಿಗೀತೆ ಮತ್ತು ಭಜನೆ, ಸೆಪ್ಟೆಂಬರ್ 8 ರಂದು ಜೂನಿಯರ್ ರಾಜಕುಮಾರ್ (ರಮೇಶ್ ಕುಮಾರ್) ತಂಡದವರಿಂದ ಭಕ್ತಿಗೀತೆ ಕಾರ್ಯಕ್ರಮಗಳು, ಸೆ.9ರಂದು ಪ್ರೊ.ಗಂಗಾಧರ್ ಆಚಾರ್ (ಹರಿಕಥಾ ವಿದ್ವಾನ್)ರವರಿಂದ ಹರಿಕಥೆಯನ್ನು ಆಯೋಜಿಸಲಾಗಿದೆ.

55 ದಿನ ಪೂರೈಸಿದ ಮಿಷನ್ ಆಸ್ಪತ್ರೆ ನೌಕರರ ಹೋರಾಟ

ಆಸ್ಪತ್ರೆಯಲ್ಲಿ ಒಳರೋಗಿ ವಿಭಾಗ ಖಾಲಿ ಖಾಲಿ; ಆಸ್ಪತ್ರೆ ಎದುರು ಮುಂದುವರೆದ ನೌಕರರ ಧರಣಿ

ಮೈಸೂರು,ಸೆ.6(ಪಿಎಂ)– ಬಾಕಿ ವೇತನ ಹಾಗೂ ವೇತನ ಪರಿಷ್ಕರಣೆ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆ ಆಗ್ರಹಿಸಿ ಸಿಎಸ್‌ಐ ಹೋಲ್ಡ್ಸ್‌ವರ್ತ್ ಮೆಮೋರಿಯಲ್ ಆಸ್ಪತ್ರೆ (ಮಿಷನ್ ಆಸ್ಪತ್ರೆ) ನೌಕರರು ನಡೆಸುತ್ತಿರುವ ಅನಿರ್ದಿಷ್ಟಾವಧಿ ಪ್ರತಿಭಟನಾ ಧರಣಿ 55ನೇ ದಿನವಾದ ಶುಕ್ರವಾರವೂ ನಡೆಯಿತು.

ಕೆಲಸ ಕೈಬಿಟ್ಟಿರುವ ನೌಕರರು, ಮೈಸೂರಿನ ಮಂಡಿಮೊಹಲ್ಲಾದ ಆಸ್ಪತ್ರೆ ಎದುರು ಸಿಎಸ್‌ಐ ಹೋಲ್ಡ್ಸ್‌ವರ್ತ್ ಮೆಮೋರಿಯಲ್ (ಮಿಷನ್) ಹಾಸ್ಪಿಟಲ್ ಎಂಪ್ಲಾಯೀಸ್ ಯೂನಿಯನ್ ನೇತೃತ್ವದಲ್ಲಿ ಪ್ರತಿಭಟನಾ ಧರಣಿ ಮುಂದುವರೆಸಿದ್ದಾರೆ.

ನಾವು ಪ್ರತಿಭಟನೆ ಆರಂಭಿಸುವ ಮುನ್ನ 70 ಮಂದಿ ಒಳರೋಗಿಗಳು ಆಸ್ಪತ್ರೆಯಲ್ಲಿದ್ದರು. ಆದರೆ ಈಗ ಒಬ್ಬರೂ ಇಲ್ಲ. ಆಡಳಿತ ಮಂಡಳಿಯವರಿಗೆ ಆಸ್ಪತ್ರೆ ನಡೆಸುವ ಉದ್ದೇಶ ಇದೆಯೋ ಇಲ್ಲವೋ ಎಂಬ ಅನುಮಾನ ಮೂಡುತ್ತಿದೆ ಎಂದು ಪ್ರತಿಭಟನಾನಿರತ ನೌಕರರು ಆಕ್ರೋಶ ವ್ಯಕ್ತಪಡಿಸಿದರು.



ಮೈಸೂರಿನ ಮಂಡಿ ಮೊಹಲ್ಲಾದಲ್ಲಿರುವ ಮಿಷನ್ ಆಸ್ಪತ್ರೆ ಎದುರು ಆಸ್ಪತ್ರೆ ನೌಕರರು ಶುಕ್ರವಾರವೂ ಪ್ರತಿಭಟನಾ ಧರಣಿ ನಡೆಸಿದರು.

ಇದೇ ವೇಳೆ ಮಾತನಾಡಿದ ಯೂನಿಯನ್ ಪ್ರಧಾನ ಕಾರ್ಯದರ್ಶಿ ಹಾಗೂ ಆಸ್ಪತ್ರೆಯ ಲಾಂಡ್ರಿ ವಿಭಾಗದ ನೌಕರ ವಿಲ್ಸನ್ ಪ್ರಭಾಕರ್, ಡಾಕ್ಟರ್‌ಗಳ ಹೊರತಾಗಿ ಆಸ್ಪತ್ರೆಯ ಕಚೇರಿ ಸಿಬ್ಬಂದಿ, ಪ್ಯಾರಾ ಮೆಡಿಕಲ್, ನರ್ಸ್, ವಾರ್ಡ್ ಹೆಡ್, ವಾರ್ಡ್ ಬಾಯ್, ಪೌರಕಾರ್ಮಿಕರು, ಲ್ಯಾಬ್ ನೌಕರರು ಸೇರಿದಂತೆ ಸುಮಾರು 200 ಮಂದಿ ಪ್ರತಿದಿನ ಬೆಳಗ್ಗೆ 7ರಿಂದ ರಾತ್ರಿ 8.30ರವರೆಗೆ ಪ್ರತಿಭಟನೆ ನಡೆಸುತ್ತಿದ್ದೇವೆ. ಹೋರಾಟ 55ನೇ ದಿನಕ್ಕೆ ಕಾಲಿಟ್ಟರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಕಿಡಿಕಾರಿದರು.

ಆಸ್ಪತ್ರೆಗೆ ಭೇಟಿ ನೀಡಿ ನಮ್ಮ ಸಮಸ್ಯೆಗಳನ್ನು ಬಗೆಹರಿಸುವಂತೆ ಆಸ್ಪತ್ರೆ ಅಧ್ಯಕ್ಷರೂ ಆದ ಬಿಷಪ್ ರೆ.ಹೇಮಚಂದ್ರಕುಮಾರ್ ಅವರಿಗೆ ಹಲವು ಬಾರಿ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಆಸ್ಪತ್ರೆ ಬೈಲಾ ಪ್ರಕಾರ ವೈದ್ಯರಾದವರು ಆಸ್ಪತ್ರೆಯ ನಿರ್ದೇಶಕರಾಗಬೇಕು. ಆದರೆ ವೈದ್ಯರಲ್ಲದ ವಿನ್ಸಂಟ್‌ಪಾಲಣ್ಣ ಈಗ ನಿರ್ದೇಶಕರಾಗಿದ್ದಾರೆ. ಇವರು ನಮ್ಮ ಆಸ್ಪತ್ರೆಯ ಫಾರ್ಮಸಿ, ಕ್ಯಾಂಟಿನ್ ಅನ್ನು ಹೊರಗುತ್ತಿಗೆಗೆ ನೀಡಿದ್ದಾರೆ. ಪ್ರತಿಭಟನೆಯ ಹಿನ್ನೆಲೆಯಲ್ಲಿ ಈಗ ಕೆಲವರಿಗೆ ಮೂರು ತಿಂಗಳ ಸಂಬಳ, ಕೆಲವರಿಗೆ ಎರಡು ತಿಂಗಳ ಸಂಬಳ ಕೊಟ್ಟಿದ್ದಾರೆ. ಆದರೆ ಎಲ್ಲರಿಗೂ ಪೂರ್ಣ ಪ್ರಮಾಣದಲ್ಲಿ ವೇತನ ಪಾವತಿಸಬೇಕು ಎಂದು ಒತ್ತಾಯಿಸಿದರು.

ಕಳೆದ 7 ವರ್ಷಗಳಿಂದ ವೇತನ ಪರಿಷ್ಕರಣೆ ಮಾಡಿಲ್ಲ. ಅಲ್ಲದೆ, ಕಳೆದ 4 ವರ್ಷಗಳಿಂದ ನಮ್ಮ ವೇತನದಲ್ಲಿ ಕಡಿತ ಮಾಡಿದ ಹಣವನ್ನು ಇಎಸ್‌ಐ ಮತ್ತು ಪಿಎಫ್ ಖಾತೆಗೆ ಸಂದಾಯ ಮಾಡಿಲ್ಲ. 2017ರಲ್ಲಿ ಸರ್ಕಾರ 58ರಿಂದ 60 ವರ್ಷಕ್ಕೆ ನಿವೃತ್ತಿ ವಯೋಮಿತಿ ನಿಗದಿಗೊಳಿಸಿದೆ. ಆದರೆ ಇಲ್ಲಿ ಇನ್ನೂ ಇದು ಜಾರಿಯಾಗಿಲ್ಲ. ನಮ್ಮ ಬೇಡಿಕೆಗಳನ್ನು ಈಡೇರಿಸುವ ಸಂಬಂಧ ಮೊನ್ನೆ ಪ್ರತಿಭಟನಾ ಮೆರವಣಿಗೆ ನಡೆಸಿ ಜಿಲ್ಲಾಧಿಕಾರಿಗಳ ಕಚೇರಿಗೆ ಮನವಿ ಸಲ್ಲಿಸಿದ್ದೇವೆ ಎಂದು ತಿಳಿಸಿದರು.

ಯೂನಿಯನ್ ಉಪಾಧ್ಯಕ್ಷರಾದ ಸಿ.ಶಂಕರ್, ದಯಾಪ್ರಕಾಶ್, ಕಾರ್ಯದರ್ಶಿ ಪಾಲ್ ಡೇವಿಡ್, ಖಜಾಂಚಿ ಆರ್.ಜೋಸೆಫ್ ಮಾನ್ಯುವಲ್ ಸೇರಿದಂತೆ ಆಸ್ಪತ್ರೆ ನೌಕರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ದೇಶ - ವಿದೇಶ

ಮಹಿಳೆಗೆ ಮದ್ಯ ಕುಡಿಸಿ ನಡು ರಸ್ತೆಯಲ್ಲೇ ಅತ್ಯಾಚಾರ


ಭೋಪಾಲ್, ಸೆ.6– ಮಧ್ಯಪ್ರದೇಶದ ಉಜ್ಜಯಿನಿ ನಗರದಲ್ಲಿ ರಸ್ತೆಬದಿಯಲ್ಲಿ ಮಹಿಳೆಯ ಮೇಲೆ ಅತ್ಯಾಚಾರವೆಸಗಿದ ಪ್ರಕರಣ ಬೆಳಕಿಗೆ ಬಂದಿದೆ. ಆರೋಪಿ ಯುವಕ ಮೊದಲು ಮಹಿಳೆಗೆ ಮದ್ಯ ಕುಡಿಸಿ, ನಂತರ ಮದುವೆಯ ನೆಪದಲ್ಲಿ ಆಕೆಯ ಮೇಲೆ ಅತ್ಯಾಚಾರ ಎಸಗಿದ್ದಾನೆ. ಬಳಿಕ ಮಹಿಳೆಯನ್ನು ಸ್ಥಳದಲ್ಲೇ ಬಿಟ್ಟು ಓಡಿ ಹೋಗಿದ್ದಾನೆ.

ಘಟನೆಯ ವಿಡಿಯೋ ವೈರಲ್ ಆದ ನಂತರ ಪೊಲೀಸರು ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಿದ್ದಾರೆ. ಯುವಕ ತನ್ನನ್ನು ಮದುವೆಯಾಗುವುದಾಗಿ ಆಮಿಷ ಒಡ್ಡಿ, ಮದ್ಯ ಕುಡಿಸಿ ನಂತರ ತನ್ನೊಂದಿಗೆ ಅನುಚಿತವಾಗಿ ವರ್ತಿಸಿದ್ದಾನೆ ಎಂದು ಮಹಿಳೆ ಪೊಲೀಸರಿಗೆ ತಿಳಿಸಿದ್ದಾರೆ. ಆರೋಪಿ ಲೋಕೇಶ್ ಎಂದು ಹೇಳಲಾಗಿದ್ದು, ನಗರದ ಅತ್ಯಂತ ಜನನಿಬಿಡ ಪ್ರದೇಶಗಳಲ್ಲಿ ಒಂದಾದ ಕೊಯ್ಲಾ ಫಾಟಕ್ ಬಳಿ ಈ ಘಟನೆ ನಡೆದಿದೆ, ಅಲ್ಲಿ ಅನೇಕ ಜನರು ಸೇರಿದ್ದರು, ಆದರೆ ಯಾರೂ ಮಹಿಳೆಗೆ ಸಹಾಯ ಮಾಡಲಿಲ್ಲ, ಆದರೆ ವಿಡಿಯೋಗಳನ್ನು ಮಾಡುತ್ತಲೇ ಇದ್ದರು.

ಸಾಮಾಜಿಕ ಮಾಧ್ಯಮ ವೇದಿಕೆಯಲ್ಲಿ ವೈರಲ್ ಆದ ವಿಡಿಯೋ ಆಧರಿಸಿ ಪೊಲೀಸರು ತಕ್ಷಣ ಕ್ರಮ ಕೈಗೊಂಡು ಆರೋಪಿ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಕುಡಿದ ಅಮಲಿನಲ್ಲಿ ಭಾರತಕ್ಕೆ ಹೊರಟ ವಿಮಾನ ಏರಿ ಕಂಗಾಲಾದ ಅಮೆರಿಕ ಯುವತಿ

ನ್ಯೂಯಾರ್ಕ್, ಸೆ.6– ಆಕೆ ಅಮೆರಿಕ ದೇಶದ ಪ್ರಜೆ.



ತನ್ನ ದೇಶದ ಜಾರ್ಜಿಯಾ ರಾಜ್ಯಕ್ಕೆ ಹೊರಟಿದ್ದ ಈ ಯುವತಿ, ಟಿಕೆಟ್ ಖರೀದಿಸುವಾಗ ಎಡವಟ್ಟು ಮಾಡಿದ್ದಳು. ಜಾರ್ಜಿಯಾ ಬದಲು ಇಂಡಿಯಾಗೆ ಟಿಕೆಟ್ ಖರೀದಿ ಮಾಡಿ ವಿಮಾನ ಏರಿದ್ದಳು. ಇದಕ್ಕೆ ಕಾರಣವಾಗಿದ್ದು ಎಣ್ಣೆ ಏಟು.

ಕುಡಿದ ಅಮಲಿನಲ್ಲಿ ಇದ್ದ ಈಕೆ ಟಿಕೆಟ್ ಬುಕ್ ಮಾಡುವಾಗ ಎಡವಟ್ಟು ಮಾಡಿಕೊಂಡಿದ್ದಳು. ಕೌಂಟರ್ ಬಳಿ ಈಕೆ ಜಾರ್ಜಿಯಾ ಎಂದದ್ದು, ವಿಮಾನ ನಿಲ್ದಾಣದ ಸಿಬ್ಬಂದಿಗೆ ಇಂಡಿಯಾ ಎಂದು ಕೇಳಿಸಿರಬಹುದು. ಹೀಗಾಗಿ, ಭಾರತಕ್ಕೆ ಟಿಕೆಟ್ ಬುಕ್ ಮಾಡಿದ್ದಾರೆ. ಈಕೆ ಕೂಡಾ ಭಾರತಕ್ಕೆ ಹೊರಡುವ ವಿಮಾನ ಏರಿ ಕುಳಿತಿದ್ದಾಳೆ. ವಿಮಾನ ಇನ್ನೇನು ಟೇಕ್ ಆಫ್ ಆಗಬೇಕು ಎನ್ನುವಾಗ ಈಕೆಗೆ ಕುಡಿದ ಅಮಲು ಥಟ್ಟನೆ ಇಳಿದಿದೆ ಇದಕ್ಕೆ ಕಾರಣ ಹಿಂದಿ ಭಾಷೆ. ಹಿಂದಿ ಭಾಷೆಯಲ್ಲಿ ಕ್ಯಾಪ್ಟನ್ ಘೋಷಣೆ ಹೊರಡಿಸುತ್ತಿದ್ದಂತೆಯೇ ಈ ಯುವತಿ ಕಂಗಾಲಾದಳು. ನಾನು ಯಾವ ವಿಮಾನ ಹತ್ತಿದ್ದೇನೆ, ಎಲ್ಲಿಗೆ ಹೊರಟಿದ್ದೇನೆ ಎಂದು ಕೇಳಲು ಆರಂಭಿಸಿದಳು. ಈ ವಿಡಿಯೋ ಇದೀಗ ವೈರಲ್ ಆಗಿದೆ.

ಮದುವೆಯಾಗುವುದಾಗಿ ನಂಬಿಸಿ 10 ಮಹಿಳಾ ಕಾನ್‌ಸ್ಟೇಬಲ್‌ಗಳಿಗೆ ವಂಚನೆ

ಲಕ್ನೋ, ಸೆ.6– ಉತ್ತರ ಪ್ರದೇಶದ ಬರೇಲಿ ಜಿಲ್ಲೆಯಲ್ಲಿ 8ನೇ ತರಗತಿ ಓದಿದ್ದ ಪೊಲೀಸ್ ಮಾಹಿತಿದಾರನೊಬ್ಬ ನಕಲಿ ಪೊಲೀಸ್ ಕಾನ್ಸಟೇಬಲ್ ವೇಷ ಧರಿಸಿ, 10 ಲೇಡಿ ಕಾನ್‌ಸ್ಟೆಬಲ್‌ಗಳಿಗೆ ವಂಚಿಸಿ ಮತ್ತು ಒಬ್ಬರನ್ನು ಮದುವೆಯಾಗಿರುವ ಘಟನೆ ನಡೆದಿದೆ.

ಲಖೀಂಪುರ ಖೇರಿ ನಿವಾಸಿಯಾಗಿರುವ ರಾಜನ್ ವರ್ಮಾ, 8ನೇ ತರಗತಿ ಓದಿದ್ದು, ಲಕ್ನೋದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರ ಕಚೇರಿಯಲ್ಲಿ ಕೆಲಸ ಮಾಡುವುದಾಗಿ ವಂಚಿಸಿದ್ದಾನೆ. 8 ರಿಂದ 10 ಮಹಿಳಾ ಕಾನ್‌ಸ್ಟೆಬಲ್‌ಗಳ ಮಾಹಿತಿಗಳನ್ನು ಪೊಲೀಸ್ ಇಲಾಖೆಯ ಜಾಲತಾಣಗಳಲ್ಲಿ ಪಡೆದುಕೊಂಡು, ಅವರಿಗೆ ಪೊಲೀಸ್ ಸಮವಸ್ತ್ರ ಧರಿಸಿರುವ ಚಿತ್ರಗಳನ್ನು ಕಳುಹಿಸಿ ಬಲೆಗೆ ಹಾಕಿಕೊಂಡಿದ್ದಾನೆ ಎಂದು ಬರೇಲಿ ನಗರ ಪೊಲೀಸ್ ವರಿಷ್ಠಾಧಿಕಾರಿ ರಾಹುಲ್ ಭಾಟಿ ತಿಳಿಸಿದ್ದಾರೆ.

ಪೊಲೀಸ್ ಇನ್ಫಾರ್ಮರ್ ಆಗಿ ಸೇರಿಕೊಂಡು, ಅವರ ಸಮವಸ್ತ್ರ ಧರಿಸುವಿಕೆ, ಸಲ್ಯೂಟ್ ಮತ್ತು ಶಸ್ತ್ರಾಸ್ತ್ರಗಳ ನಿರ್ವಹಣೆಯ ಕುರಿತು ಮಾಹಿತಿ ಕಲೆ ಹಾಕಿದ್ದಾನೆ ನಂತರ ಪೊಲೀಸ್ ಪಡೆಗೆ ದಾಖಲಾಗಿರುವುದಾಗಿ ಮಹಿಳಾ ಪೊಲೀಸ್ ಅಧಿಕಾರಿಗೆ ಸುಳ್ಳು ಹೇಳಿ ಮದುವೆಯಾಗುವುದಾಗಿ ನಂಬಿಸಿದ್ದಾನೆ. ಮೊರದಾಬಾದ್ ಹಾಗೂ ಲಖಿಂಪುರ್ ಕೇರಿಗಳಲ್ಲೂ ಇದೇ ರೀತಿ ಹಲವು ಮಹಿಳಾ ಕಾನ್‌ಸ್ಟೇಬಲ್‌ಗಳಿಗೆ ವಂಚಿಸಿದ್ದಾನೆಂದು ತಿಳಿದುಬಂದಿದೆ.

ಇಂಡೋನೇಷಿಯಾ ಜನ 4–5 ಮಕ್ಕಳು ಮಾಡಿಕೊಳ್ತಾರೆ, ಕೆಲವರು ನಾಯಿ ಬೆಕ್ಕಿಗೆ ತೃಪ್ತಿ; ಪೋಪ್ ಹೇಳಿಕೆ

ಜಕರ್ತಾ, ಸೆ.6– ಹಲವು ದೇಶಗಳಲ್ಲಿ ಜನಸಂಖ್ಯಾ ಅನುಪಾತದಲ್ಲಿನ ಮಹತ್ವದ ಬದಲಾವಣೆ ಆತಂಕ ಹೆಚ್ಚಿಸಿದೆ. ಈ ಕುರಿತು ಹಲವು ಸಮುದಾಯಗಳು ಆತಂಕ ವ್ಯಕ್ತಪಡಿಸುತ್ತಲೇ ಬಂದಿದೆ. ಇದೀಗ ಕ್ರಿಶ್ಚಿಯನ್ ಸಮುದಾಯದ ಗುರು ಪೋಪ್ ಫ್ರಾನ್ಸಿಸ್ ಇದೇ ಆತಂಕವನ್ನು ಹಾಸ್ಯದ ಮೂಲಕ ಹೇಳಿ ಭಾರೀ ಸಂಚಲನ ಸೃಷ್ಟಿಸಿದ್ದಾರೆ ಇಂಡೋನೇಷಿಯಾದಲ್ಲಿ ಜನ 4 ರಿಂದ 5 ಮಕ್ಕಳು ಮಾಡಿಕೊಳ್ಳುತ್ತಾರೆ. ಆದರೆ ಕೆಲ ದೇಶದ ಜನರು ನಾಯಿ, ಬೆಕ್ಕು ಸಾಕಿ ಸಂತೋಷ ಪಡುತ್ತಿದ್ದಾರೆ ಎಂದು ಪೋಪ್ ಫ್ರಾನ್ಸಿಸ್ ಹೇಳಿದ್ದಾರೆ.

ಇಂಡೋನೇಷಯಾದ ಜಕರ್ತಾದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಪೋಪ್ ದೇಶದ ಜನಸಂಖ್ಯೆ, ಕುಟುಂಬ ಕಲ್ಯಾಣ ಕುರಿತ ಆಲೋಚನೆಗಳನ್ನು ಪ್ರಶಂಸಿಸಿದ್ದಾರೆ. ಇಲ್ಲಿನ ಜನ 2 ರಿಂದ 5 ಮಕ್ಕಳನ್ನು ಮಾಡಿಕೊಳ್ಳುತ್ತಾರೆ. ಮಕ್ಕಳನ್ನು ಪ್ರೀತಿಯಿಂದ ಬೆಳೆಸುತ್ತಾರೆ. ಇದು ಇತರ ದೇಶಗಳಿಗೂ ಮಾದರಿಯಾಗಬೇಕು. ಆದರೆ ಕೆಲ ದೇಶದ ಜನ ನಾಯಿ, ಬೆಕ್ಕಿಗೆ ಸೀಮಿತಗೊಳ್ಳುತ್ತಿದ್ದಾರೆ ಎಂದು ಪೋಪ್ ಹೇಳಿದ್ದಾರೆ.

ಪೋಪ್ ಭಾಷಣದಲ್ಲಿ ನಾಯಿ, ಬೆಕ್ಕಿಗೆ ತೃಪ್ತಿ ಎಂಬ ಸಂದೇಶ ನೀಡುತ್ತಿದ್ದಂತೆ ವೇದಿಕೆಯಲ್ಲಿದ್ದ ಇಂಡೋನೇಷಿಯಾ ಅಧ್ಯಕ್ಷ ಜೋಕೋ ವಿಡೋಡ್‌ಗೆ ನಗು ತಡೆಯಲು ಸಾಧ್ಯವಾಗಲಿಲ್ಲ. ಚಪ್ಪಾಳೆ ತಟ್ಟಿದ್ದಾರೆ. ಇದೇ ವೇಳೆ ಅಧ್ಯಕ್ಷರತ್ತ ತಿರುಗಿದ ಪೋಪ್, ನಾನು ಹೇಳುತ್ತಿರುವುದು ನಿಜವಲ್ಲವೇ ಎಂದು ಪ್ರಶ್ನಿಸಿದ್ದಾರೆ.

ಲೈಂಗಿಕ ಕಿರುಕುಳ ಆರೋಪ: ಟಿಡಿಪಿ ಸತ್ಯವೇಡು ಶಾಸಕ ಅಮಾನತು

ಅಮರಾವತಿ, ಸೆ.6– ಮಹಿಳೆಯೊಬ್ಬರಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದ ಹಿನ್ನೆಲೆಯಲ್ಲಿ ಟಿಡಿಪಿ ಶಾಸಕ ಕೋನೇಟಿ ಆದಿಮೂಲಂ ಅವರನ್ನು ತೆಲುಗು ದೇಶಂ ಪಾರ್ಟಿಯ ರಾಜ್ಯಾಧ್ಯಕ್ಷ ಪಿ. ಶ್ರೀನಿವಾಸರಾವ್ ಅಮಾನತು ಮಾಡಿದ್ದಾರೆ.



ಆದಿಮೂಲಂ ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯ ಪರಿಶಿಷ್ಟ ಮೀಸಲು ಕ್ಷೇತ್ರ ಸತ್ಯವೇಡು ವಿಧಾನಸಭಾ ಕ್ಷೇತ್ರದ ಶಾಸಕರಾಗಿದ್ದರು. ಆದಿಮೂಲಂ ನನಗೆ ನಿರಂತರವಾಗಿ ಲೈಂಗಿಕ ಕಿರುಕುಳ ನೀಡಿದ್ದಾರೆ ಎಂದು ಆರೋಪಿಸಿದ್ದ ಮಹಿಳೆ, ಶಾಸಕನೊಂದಿಗೆ ತಾನು ಕಳೆದ ಖಾಸಗಿ ಕ್ಷಣಗಳನ್ನು ಪೆನ್ ಕ್ಯಾಮರಾ ಬಳಸಿ ಚಿತ್ರೀಕರಿಸಿದ್ದರು. ಈ ವಿಡಿಯೋ ಗುರುವಾರ ಬಹಿರಂಗವಾದ ಬೆನ್ನಲ್ಲೇ ಸಾಮಾಜಿಕ ಮಾಧ್ಯಮಗಳಲ್ಲಿ ವ್ಯಾಪಕವಾಗಿ ವೈರಲ್ ಆಗಿತ್ತು ಈ ವಿಚಾರವನ್ನು ಗಂಭೀರವಾಗಿ ತೆಗೆದುಕೊಂಡು ಆದಿಮೂಲಂ ಅವರನ್ನು ಪಕ್ಷದಿಂದ ಅಮಾನತು ಮಾಡಲಾಗಿದೆ ಎಂದು ಟಿಡಿಪಿ ತಿಳಿಸಿದೆ. ಆದಿಮೂಲಂ 2019ರಲ್ಲಿ ಸತ್ಯವೇಡು ಕ್ಷೇತ್ರದಿಂದ ವೈಎಸ್‌ಆರ್ ಕಾಂಗ್ರೆಸ್‌ನಿಂದ ಗೆದ್ದಿದ್ದರು. ಆದರೆ, ಈ ಬಾರಿ ಸ್ಪರ್ಧಿಸಲು ಪಕ್ಷದ ಮುಖ್ಯಸ್ಥ ವೈ.ಎಸ್. ಜಗನ್ ಮೋಹನ್ ರೆಡ್ಡಿ ಟಿಕೆಟ್ ನಿರಾಕರಿಸಿದ್ದರಿಂದ ಟಿಡಿಪಿ ಸೇರಿ ಗೆಲುವು ಸಾಧಿಸಿದ್ದರು.

ಏಕ ನಿವೇಶನ ಸಮಸ್ಯೆ ಪರಿಹರಿಸಲು ಕ್ರಮ

ಮಡಿಕೇರಿ ನಗರಸಭೆ ಸಾಮಾನ್ಯ ಸಭೆಯಲ್ಲಿ ಜಿಲ್ಲಾಧಿಕಾರಿ ವೆಂಕಟ್ ರಾಜಾ ಸ್ಪಷ್ಟನೆ

ಮಡಿಕೇರಿ, ಸೆ.6–ನಗರ ವ್ಯಾಪ್ತಿ ನಿವೇಶನಗಳ 'ಏಕ ನಿವೇಶನ' ಸಮಸ್ಯೆ ಪರಿಹರಿಸಲು ಅಗತ್ಯ ಕ್ರಮ ಕೈಗೊಳ್ಳುವುದಾಗಿ ನಗರಸಭಾ ಆಡಳಿತಾಧಿಕಾರಿಯಾದ ಜಿಲ್ಲಾಧಿಕಾರಿ ವೆಂಕಟ್ ರಾಜಾ ಸ್ಪಷ್ಟಪಡಿಸಿದರು.

ನಗರಸಭೆ ಸಭಾಂಗಣದಲ್ಲಿ ಶುಕ್ರವಾರ ನಡೆದ ಸಾಮಾನ್ಯ ಸಭೆಯಲ್ಲಿ ಈ ವಿಷಯ ಪ್ರಸ್ತಾಪಿಸಿದ ಸದಸ್ಯ ಕೆ.ಎಸ್.ರಮೇಶ್, ನಗರಸಭೆ ವ್ಯಾಪ್ತಿ ನಿವೇಶನ ಹೊಂದಿರುವ ಬಡವರು ಖಾತೆ ಮಾಡಿಸುವ ಹಂತದಲ್ಲಿ 'ಏಕ ನಿವೇಶನ'ದ ವಿಭಜನ ನಕ್ಷೆ ಷರತ್ತು ವಿಧಿಸಲಾಗುತ್ತಿದೆ. ಇದಕ್ಕೆ ನಿವೇಶನದಾರರು ಮುಡಾಗೆ ತೆರಳಿದರೆ ಅಲ್ಲಿ ಇದರ ಅವಶ್ಯಕತೆ ಇಲ್ಲವೆಂದು ಹಿಂಬರಹ ನೀಡಿ, ಮರಳಿ ನಗರಸಭೆಗೆ ಕಡತ ಕಳುಹಿಸುತ್ತಿದ್ದಾರೆ. ಇದರಿಂದ ಬಹಳಷ್ಟು ಸಮಸ್ಯೆ ಉದ್ಭವಿಸುತ್ತಿರುವುದಾಗಿ ಬೇಸರ ವ್ಯಕ್ತಪಡಿಸಿದರು.

ಇದಕ್ಕೆ ಧ್ವನಿಗೂಡಿಸಿದ ಅಮಿನ್ ಮೊಹಿಸಿನ್ ಮಾತನಾಡಿ, ಹಿಂದಿನಿಂದಲ್ಲೂ ನಗರ ವ್ಯಾಪ್ತಿ ಮನೆ ಹಾಗೂ ನಿವೇಶನ ಹೊಂದಿರುವವರು ತಮ್ಮ ಮಕ್ಕಳಿಗೆ ಹಂಚಿಕೆ ಮಾಡಿಕೊಡುವ ಹಂತದಲ್ಲಿ ಏಕ ನಿವೇಶನ ವಿಭಜನೆ ನಕ್ಷೆ ಕೇಳಲಾಗುತ್ತಿದೆ. ಆದರೆ, ಈ ಬಗ್ಗೆ ನ್ಯಾಯಾಲಯಗಳು ವಿವಿಧ ಪ್ರಕರಣಗಳಲ್ಲಿ ಇದರ ಅಗತ್ಯವಿಲ್ಲವೆಂದು ತೀರ್ಪು ನೀಡಿರುವ ಅಂಶವನ್ನು ಸಭೆ ಮುಂದಿಟ್ಟು, ಸಮಸ್ಯೆ ಬಗೆಹರಿಸುವಂತೆ ಕೋರಿದರು. ನಂತರ ಮಾತನಾಡಿದ ವೆಂಕಟ್ ರಾಜಾ, ಈ ಬಗ್ಗೆ ಸುದೀರ್ಘ ಚರ್ಚೆ ನಡೆಸಿ ಜನರಿಗೆ ಅನುಕೂಲವಾಗುವ ರೀತಿ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಬ್ಲಾಕ್ ಲಿಸ್ಟ್ ಎಚ್ಚರಿಕೆ: ಮಡಿಕೇರಿ ನಗರ ವ್ಯಾಪ್ತಿಯಲ್ಲಿ ಎಲ್‌ಇಡಿ ಬೀದಿದೀಪಗಳು ಸಮರ್ಪಕವಾಗಿ ಉರಿಯದೆ, ನಗರ ಕತ್ತಲೆಯಲ್ಲಿ ಮುಳುಗಿದೆ. ಇದನ್ನು ಸಮರ್ಪಕವಾಗಿ ನಿರ್ವಹಿಸದಿರುವ ವಿಚಾರ ಸಭೆಯಲ್ಲಿ ಪ್ರಸ್ತಾಪವಾಯಿತು. ನಂತರ ಜಿಲ್ಲಾಧಿಕಾರಿ ಮಾತನಾಡಿ, ಟೆಂಡರ್ ನಿಯಮಗಳಂತೆ ಗುತ್ತಿಗೆದಾರ ಸಂಸ್ಥೆ ಬೀದಿದೀಪ ನಿರ್ವಹಿಸಿಲ್ಲ ಎಂದಾದರೆ ಅದನ್ನು ಕಪ್ಪುಪಟ್ಟಿಗೆ ಒಳಪಡಿಸುವ ಎಚ್ಚರಿಕೆ ನೀಡಿದರು.

ಗುಂಡಿ ಮುಚ್ಚಲು ಅವಕಾಶ: ನಗರ ವ್ಯಾಪ್ತಿಯಲ್ಲಿ ತುರ್ತಾಗಿ ನಡೆಯಬೇಕಾಗಿರುವ ರಸ್ತೆ ಗುಂಡಿ ಮುಚ್ಚುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಪ್ರಸ್ತಾವನೆ ಸಲ್ಲಿಸುವಂತೆ ಜಿಲ್ಲಾಧಿಕಾರಿ ತಿಳಿಸಿದರು.

ಎನ್‌ಡಿಆರ್‌ಎಫ್ ಅಡಿ ರಸ್ತೆ ಗುಂಡಿ ಮುಚ್ಚುವ ಕಾಮಗಾರಿಗಳಿಗೆ ಮಾತ್ರ ಅವಕಾಶವಿದೆ. ಇದನ್ನು ಗಮನದಲ್ಲಿರಿಸಿ, ಪ್ರಸ್ತಾವನೆ ಸಲ್ಲಿಸುವಂತೆ ಸದಸ್ಯರಿಗೆ ಮಾಹಿತಿ ನೀಡಿದರು.

ಪುಟಾಣಿ ರೈಲಿಗೆ ಮತ್ತೆ ಚಾಲನೆ ನೀಡಿ: ರಾಜಾ ಸೀಟ್ ಬಳಿಯ ಪುಟಾಣಿ ರೈಲು ದುರಸ್ತಿಗೊಳಿಸಿ, ಮತ್ತೆ ಚಾಲನೆ ನೀಡಬೇಕು ಎಂದು ನಗರಸಭೆ ಮಾಜಿ ಅಧ್ಯಕ್ಷೆ ಅನಿತಾ ಪೂವಯ್ಯ ಅನಿಸಿಕೆ ವ್ಯಕ್ತಪಡಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಡಿಸಿ ವೆಂಕಟ್ ರಾಜಾ, ಪುಟಾಣಿ ರೈಲು ಪುನರಾರಂಭಕ್ಕೆ ಸಂಬಂಧಿಸಿದಂತೆ ಈಗಾಗಲೇ ಸರ್ವೇ ನಡೆಸಲಾಗಿದ್ದು, 1 ಕೋಟಿ ರೂ. ಅಗತ್ಯವಿದೆ. ಅಲ್ಲದೆ, ಆ ಪ್ರದೇಶ ತೋಟಗಾರಿಕಾ ಇಲಾಖೆ ವಶಕ್ಕೆ ಹೋಗಿದೆ ಎಂದು ಸಭೆಗೆ ತಿಳಿಸಿದರು.

ಸಭೆಯಲ್ಲಿ ಸದಸ್ಯರಾದ ಉಮೇಶ್ ಸುಬ್ರಮಣಿ, ರಾಜೇಶ್ ಯಲ್ಲಪ್ಪ, ಅಮಿನ್ ಮೊಹಿಸಿನ್, ಕೆ.ಎಸ್.ರಮೇಶ್ ಮತ್ತಿತರರು ಹಾಜರಿದ್ದರು.



ಮಡಿಕೇರಿ ನಗರಸಭೆ ಸಾಮಾನ್ಯ ಸಭೆಯಲ್ಲಿ ಜಿಲ್ಲಾಧಿಕಾರಿ ವೆಂಕಟ್ ರಾಜಾ ಮಾತನಾಡಿದರು.

ಸಾಮಾನ್ಯ ಸಭೆ ಕಾನೂನು ಬದ್ಧವಲ್ಲ

ಆಡಳಿತಾಧಿಕಾರಿ ಅಧ್ಯಕ್ಷತೆಯಲ್ಲಿ ಕರೆಯಲಾಗಿರುವ ನಗರಸಭೆ ಸಾಮಾನ್ಯ ಸಭೆ ನಡಾವಳಿಯಲ್ಲಿ ಹಿಂದಿನ ಹಲವು ಸಭೆಗಳ ಅಂಶಗಳನ್ನು ಪ್ರಾಸ್ತಪಿಸಿಲ್ಲ. ಈ ಹಿನ್ನೆಲೆಯಲ್ಲಿ ಸಭೆ ಕಾನೂನು ಬದ್ಧವಲ್ಲವೆಂದು ಸದಸ್ಯ ಅಮಿನ್ ಮೊಹಿಸಿನ್ ಹೇಳಿದರು.

ಹಿಂದಿನ ಸಭೆಯ ಪೌರಾಯುಕ್ತರ ವರ್ಗಾವಣೆ, ಆಯವ್ಯಯ ನಿರ್ಣಯಗಳನ್ನು ಈ ಸಭೆಯಲ್ಲಿ ಚರ್ಚಿಸಿಲ್ಲ. ಇವೆಲ್ಲವುಗಳನ್ನು ಪೌರಾಯುಕ್ತರು ಉದ್ದೇಶ ಪೂರ್ವಕವಾಗಿ ಮರೆ ಮಾಡಿದ್ದಾರೆಂದು ಆರೋಪಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಆಡಳಿತಾಧಿಕಾರಿ ವೆಂಕಟ್ ರಾಜಾ, ಈ ಬಗ್ಗೆ ತನಿಖೆ ಮಾಡಿಸುವುದಾಗಿ ತಿಳಿಸಿದರು. ಮುಂದಿನ ಸಭೆಯಲ್ಲಿ ಕಳೆದ ಸಭೆಗಳ ಅಂಶಗಳನ್ನು ತರಬೇಕೆಂದು ಪೌರಾಯುಕ್ತರಿಗೆ ಸೂಚಿಸಿದರಲ್ಲದೇ, ಸದಸ್ಯರ ಒಪ್ಪಿಗೆ ಇದ್ದಲ್ಲಿ ಸಭೆ ನಡೆಸಬಹುದೆಂದು ತಿಳಿಸಿದರು. ಇದಕ್ಕೆ ಸದಸ್ಯರು ಒಪ್ಪಿಗೆ ಸೂಚಿಸಿದ ಬಳಿಕ ಸಭೆ ಮುಂದುವರೆಯಿತು.

ಅಸಮರ್ಪಕ ತ್ಯಾಜ್ಯ ವಿಲೇವಾರಿ

ಮಡಿಕೇರಿ ನಗರಸಭೆ ವ್ಯಾಪ್ತಿ ಹಸಿ ಮತ್ತು ಒಣಕಸ ವಿಲೇವಾರಿ ಸಮರ್ಪಕವಾಗಿ ನಡೆಯದಿರುವ ಅಂಶವನ್ನು ಸದಸ್ಯ ಮನ್ಸೂರು ಸಭೆ ಗಮನಕ್ಕೆ ತಂದರು. ನಗರದ ಕೆಲವೆಡೆ ಸಿಸಿ ಕ್ಯಾಮರಾ ಅಳವಡಿ ಸಿದ್ದರೂ ಕಸವನ್ನು ಎಲ್ಲೆಂದರಲ್ಲಿ ಒಗೆಯುವುದನ್ನು ನಿಯಂತ್ರಿಸಲು ಸಾಧ್ಯವಾಗುತ್ತಿಲ್ಲ ಎಂದರು. ಇದಕ್ಕೆ ಪೂರಕವಾಗಿ ಸದಸ್ಯ ಅಪ್ಪಣ್ಣ ಮಾತನಾಡಿ, ಸುಮಾರು 50 ರಿಂದ 55 ಲಕ್ಷ ರೂ. ವೆಚ್ಚದಲ್ಲಿ ಘನತ್ಯಾಜ್ಯ ವಿಲೇವಾರಿ ಘಟಕ ಆರಂಭಿಸಲಾಗಿದೆ. ಇಲ್ಲಿಯವರೆಗೆ ಆ ಮೂಲಕ ಕಸವಿಲೇವಾರಿ ನಡೆಯದಿರುವುದನ್ನು ಪ್ರಸ್ತಾಪಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ವೆಂಕಟ್‌ರಾಜಾ, ಕಸ ವಿಲೇವಾರಿ ಬಗ್ಗೆ ಜನರಿಗೆ ಅರಿವು ಮೂಡಿಸುವ ಪ್ರಾತ್ಯಕ್ಷಿ ನಡೆಸುವ ಅಗತ್ಯವಿದೆ ಎಂದು ಅಭಿಪ್ರಾಯಿಸಿದರು.

ವಿರಾಜಪೇಟೆಯಲ್ಲಿ ಗೌರಮ್ಮ ಪಲ್ಲಕ್ಕಿ ಉತ್ಸವ



ವಿರಾಜಪೇಟೆಯಲ್ಲಿ ಗೌರಮ್ಮನಿಗೆ ಮಹಿಳೆಯರು ಬಾಗಿನ ಅರ್ಪಿಸಿದರು.

ವಿರಾಜಪೇಟೆ, ಸೆ.6–ಶ್ರೀ ಬಸವೇಶ್ವರ ದೇವಸ್ಥಾನದ ಗೌರಿ–ಗಣೇಶ ಉತ್ಸವ ಸಮಿತಿ ವತಿಯಿಂದ ಶ್ರೀ ಗೌರಮ್ಮ ಪಲ್ಲಕ್ಕಿ ಉತ್ಸವ ಶುಕ್ರವಾರ ನಡೆಯಿತು.

ಇಲ್ಲಿನ ಎನ್.ಯು.ಅಯ್ಯಪ್ಪ ಮೋಹನ್ ಅವರ ಕೆರೆಯಿಂದ ಪಟ್ಟಣದ ತೆಲುಗರ ಬೀದಿ, ದಕ್ಕನಿ ಮೊಹಲ್ಲಾ, ಮೊಗರಗಲ್ಲಿ, ಮೂರ್ನಾಡು ರಸ್ತೆ, ಚಿಕ್ಕಪೇಟೆ, ದೇವರಕಾಡು, ಅಪ್ಪಯ್ಯಸ್ವಾಮಿ ರಸ್ತೆ ಮಾರ್ಗವಾಗಿ ಜೈನರ ಬೀದಿಯ ಶ್ರೀ ಬಸವೇಶ್ವರ ದೇವಸ್ಥಾನವರೆಗೆ ಮೆರವಣಿಗೆ ನಡೆಸಲಾಯಿತು. ಬಳಿಕ ಗೌರಮ್ಮ ಮೂರ್ತಿಯನ್ನು ಪ್ರತಿಷ್ಠಾಪಿಸಿ, ವಿಶೇಷ ಪೂಜಾ ಕಾರ್ಯ ನೆರವೇರಿಸಲಾಯಿತು.

ಈ ಸಂದರ್ಭ ದೇವಾಲಯ ಸಮಿತಿ ಅಧ್ಯಕ್ಷ ಎನ್.ಜಿ.ಕಾಮತ್, ಹಿರಿಯ ವಕೀಲ ರವೀಂದ್ರ ಕಾಮತ್ ಹಾಗೂ ಗೌರಿ ಗಣೇಶ ಉತ್ಸವ ಸಮಿತಿ ಸದಸ್ಯರು, ಭಕ್ತರು ಇದ್ದರು.

ಹೊನ್ನಮ್ಮನ ಕೆರೆಗೆ ಬಾಗಿನ ಅರ್ಪಣೆ



ದೊಡ್ಡಮಳ್ತೆ ಗ್ರಾಮದ ಹೊನ್ನಮ್ಮನ ಕೆರೆಗೆ ಶಾಸಕ ಡಾ.ಮಂತರ್‌ಗೌಡ ಬಾಗಿನ ಅರ್ಪಿಸಿದರು.

ಮಡಿಕೇರಿ, ಸೆ.6–ಸೋಮವಾರಪೇಟೆ ತಾಲೂಕಿನ ದೊಡ್ಡಮಳ್ತೆ ಗ್ರಾಮದ ಪುಣ್ಯಕ್ಷೇತ್ರ ಹೊನ್ನಮ್ಮನ ಕೆರೆಗೆ ಶಾಸಕ ಡಾ.ಮಂತರ್‌ಗೌಡ ಗೌರಿ ಹಬ್ಬ ದಿನವಾದ ಶುಕ್ರವಾರ ಬಾಗಿನ ಅರ್ಪಿಸಿದರು.

ಸಿದ್ದೇಶ್ವರ ಮತ್ತು ಬಸವೇಶ್ವರ ಹಾಗೂ ತಾಯಿ ಹೊನ್ನಮ್ಮ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿದ ಬಳಿಕ ಶಾಸಕರು ಬಾಗಿನ ಅರ್ಪಿಸಿದರು. ಬಳಿಕ ಮಾತನಾಡಿದ ಅವರು, ಸುಮಾರು ಹಲವು ಶತಮಾನಗಳಿಂದ ಹೊನ್ನಮ್ಮನ ಕೆರೆಗೆ ನವದಂಪತಿ ಆಗಮಿಸಿ ವಿಶೇಷ ಪೂಜೆ ಸಲ್ಲಿಸಿಕೊಂಡು ಬರುತ್ತಾರೆ. ಈ ಬಾರಿ ಉತ್ತಮ ಮಳೆ, ಬೆಳೆಯಾಗಿದೆ. ಹೆಚ್ಚಿನ ಮಳೆಯಿಂದ ಕೆಲವು ಕಡೆ ತೊಂದರೆಯೂ ಆಗಿದೆ. ಆ ನಿಟ್ಟಿನಲ್ಲಿ ಎಲ್ಲರಿಗೂ ಒಳಿತಾಗಲಿ ಎಂದು ಆಶಿಸಿದರು.

ಮಡಿಕೇರಿ ದಸರಾ ಸಂಬಂಧಿಸಿದಂತೆ ಪ್ರತಿಕ್ರಿಯಿಸಿದ ಶಾಸಕರು, ಮಡಿಕೇರಿ ದಸರಾಗೆ ಹೆಚ್ಚಿನ ಅನುದಾನ ಬಿಡುಗಡೆಗೆ ಮುಖ್ಯಮಂತ್ರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರಿಗೆ ಈಗಾಗಲೇ ಮನವಿ ಮಾಡಲಾಗಿದೆ. ಹಿಂದಿನಂತೆ ವಿವಿಧ ಸಮಿತಿಗಳ ನೇತೃತ್ವದಲ್ಲಿ ಮಡಿಕೇರಿ ದಸರಾ ನಡೆಯಲಿದೆ. ಆ ನಿಟ್ಟಿನಲ್ಲಿ ಕೊಡಗು ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಶೀಘ್ರ ಸಭೆ ನಡೆಯಲಿದೆ ಎಂದು ತಿಳಿಸಿದರು.

ಇದೇ ವೇಳೆ ಗೌಡಳ್ಳಿ ವಿಎಸ್‌ಎಸ್‌ಎನ್ ಬ್ಯಾಂಕ್ ಅಧ್ಯಕ್ಷ ಎಚ್.ಆರ್.ಸುರೇಶ್, ಸಮಿತಿ ಅಧ್ಯಕ್ಷ ಡಿ.ಎ. ಉದಯ, ಉಪಾಧ್ಯಕ್ಷ ಡಿ.ಬಿ.ಲೋಕೇಶ್ ಬೆಳ್ಳಿಯಪ್ಪ, ಕಾರ್ಯದರ್ಶಿ ಡಿ.ಎಸ್.ಕವನ್, ಸದಸ್ಯರಾದ ಎಂ.ಬಿ.ಚಂದ್ರಶೇಖರ್, ವಿನಯ್ ಕುಮಾರ್ ಡಿ.ಪಿ(ಗುಂಡ), ಪ್ರೀತಂ ಡಿ.ಡಿ., ಶಶಿಕುಮಾರ್, ಭರತ್ ಡಿ.ಟಿ., ರಜಿತ್ ಡಿ.ಎಚ್., ಈರಯ್ಯ ಹಿರೇಮಠ್ ಇತರರು ಇದ್ದರು.

ಮೈತೆಯಿ ಜನಾಂಗ, ಕೊಡವರ ನೋವು ಒಂದೇ

ಸಭೆಯಲ್ಲಿ ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಬೇಸರ



ಬೆಂಗಳೂರಿನ ದೊಡ್ಡಕನ್ನೆಹಳ್ಳಿ ಸಿಲ್ವರ್ ಜ್ಯೂಬಿಲಿ ಟರ್ಫ್ ಪಾರ್ಕ್‌ನಲ್ಲಿ ನಡೆದ ಮಣಿಪುರ ಮೈತೆಯಿ ಬುಡಕಟ್ಟು ಜನಾಂಗದ ಸಭೆಯಲ್ಲಿ ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಭಾಗವಹಿಸಿದ್ದರು.

ಮಡಿಕೇರಿ: ಮಣಿಪುರದ ಮೈತೆಯಿ ಜನಾಂಗ ಹಾಗೂ ಕೊಡಗಿನ ಕೊಡವರು ಒಂದೇ ನೋವನ್ನು ಅನುಭವಿಸುತ್ತಿದ್ದಾರೆ ಎಂದು ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಅಧ್ಯಕ್ಷ ಎನ್.ಯು.ನಾಚಪ್ಪ ಹೇಳಿದರು.

ಬೆಂಗಳೂರಿನ ದೊಡ್ಡಕನ್ನೆಹಳ್ಳಿ ಸಿಲ್ವರ್ ಜ್ಯೂಬಿಲಿ ಟರ್ಫ್ ಪಾರ್ಕ್‌ನಲ್ಲಿ ಮಣಿಪುರ ಮೈತೆಯಿ ಅಸೋಸಿಯೇಷನ್ ಆಫ್ ವತಿಯಿಂದ ನಡೆದ ಮಣಿಪುರ ಮೈತೆಯಿ ಬುಡಕಟ್ಟು ಜನಾಂಗದ ಸಭೆಯಲ್ಲಿ ಮಾತನಾಡಿದ ಅವರು, ಮೈತೆಯಿ ಸಮುದಾಯ ಹಲವು ತಿಂಗಳಿಂದ ತಮ್ಮ ಸ್ವಂತ ತಾಯ್ನಾಡಿನಲ್ಲಿ ಸಂಕಷ್ಟದಲ್ಲಿದೆ. ನೆರೆಯ ಮ್ಯಾನ್ಮಾರ್‌ನಿಂದ ಬಂದ ವಲಸಿಗರಿಂದ ಮೈತೆಯಿ ಸಮುದಾಯದ ಅಸ್ತಿತ್ವಕ್ಕೆ ಬೆದರಿಕೆ ಇದೆ. ವಲಸಿಗ ಕುಕ್ಕಿಗಳು ಭೂಮಿ ಕಸಿದುಕೊಳ್ಳಲು ಮತ್ತು ಆಕ್ರಮಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ ಎಂದರು.

ಪವಿತ್ರ ಯಾತ್ರಾಸ್ಥಳ ನೊಂಗ್ ಮೈಚಿಂಗ್‌ಗೆ ಪ್ರವೇಶಿಸದಂತೆ ತಡೆದಿದ್ದಾರೆ. ಸ್ಥಳೀಯ ಮೈತೆಯಿಗಳನ್ನು ಎಸ್‌ಟಿ ಪಟ್ಟಿಗೆ ಸೇರಿಸುವ ಕುರಿತು ಗುವಾಹಟಿ ಹೈಕೋರ್ಟ್ ನೀಡಿದ ಮಹತ್ವದ ತೀರ್ಪಿನಲ್ಲಿ ಎತ್ತಿ ಹಿಡಿದಿದ್ದರೂ ಕುಕ್ಕಿ ವಲಸಿಗರ ಒತ್ತಡದಿಂದ ಸರ್ಕಾರ ಇದನ್ನು ತಿರಸ್ಕರಿಸಿದೆ ಅಥವಾ ಅವಮಾನಿಸಿದೆ ಎಂದು ಆರೋಪಿಸಿದರು.

ಇದೇ ಪರಿಸ್ಥಿತಿ ಕೊಡಗಿನಲ್ಲೂ ಇದ್ದು, ಕೊಡವ ಪ್ರಾಂತ್ಯದಲ್ಲಿ ಕೊಡವರ ಭೂಮಿಯನ್ನು ಸರ್ಕಾರ ವಶಪಡಿಸಿಕೊಳ್ಳುತ್ತಿದೆ ಮತ್ತು ರಾಜ್ಯ ಪ್ರಾಯೋಜಿತ ವಲಸಿಗರು ಆಕ್ರಮಿಸಿಕೊಂಡಿದ್ದಾರೆ. ಕೊಡವರ ಪವಿತ್ರ ಯಾತ್ರಾಸ್ಥಳ ತಲಕಾವೇರಿಗೆ ದೇವಟ್ ಪರಂಬು ದುರಂತದ ಫಲಾನುಭವಿ ಜನಪ್ರವೇಶವನ್ನು ನಿರ್ಬಂಧಿಸುತ್ತಿದ್ದಾರೆ. ಕೊಡವರ ಪ್ರವೇಶವನ್ನು ತಡೆಯುವ ಪ್ರಯತ್ನ ಮಾಡಲಾಗುತ್ತಿದೆ ಎಂದು ದೂರಿದರು. ಇದೇ ವೇಳೆ ಮಣಿಪುರ ಮೈತೆಯಿ ಅಸೋಸಿಯೇಷನ್ ಅಧ್ಯಕ್ಷ ಮೇಜರ್ ರಾಜ್‌ಕುಮಾರ್ ಜಲಜಿತ್ ಸಿಂಗ್ ನೇತೃತ್ವದಲ್ಲಿ ಫೀಲ್ಡ್ ಆಫ್ ಹೋಪ್ ಎಂಬ ಘೋಷಣೆಯಡಿ ಶಾಂತಿ ಸ್ಥಾಪಿಸುವ ಫುಟ್ಬಾಲ್ ಪಂದ್ಯಾವಳಿ ನಡೆಯಿತು.

ಪರಿಸರ ಸ್ನೇಹಿ ಗಣೇಶ ಜಾಗೃತಿ...



ಕುಶಾಲನಗರ ಬಾಲಕಿಯರ ಸರ್ಕಾರಿ ಪ್ರೌಢಶಾಲೆ ಹಾಗೂ ಪಿಎಂಶ್ರೀ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ ವತಿಯಿಂದ ಗೋ ಗ್ರೀನ್ ಅಭಿಯಾನದಡಿ ಪರಿಸರ ಸ್ನೇಹಿ ಮಣ್ಣಿನ ಗಣೇಶ ಮೂರ್ತಿ ಬಳಕೆ ಕುರಿತು ಜನಜಾಗೃತಿ ಮೂಡಿಸಲಾಯಿತು. ಮುಖ್ಯ ಶಿಕ್ಷಕ ಟಿ.ಜಿ.ಪ್ರೇಮಕುಮಾರ್, ರಾಜ್ಯ ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಮೈಸೂರು ವಿಭಾಗೀಯ ಉಪಾಧ್ಯಕ್ಷ ಪಿ.ನವೀನ್ ಕುಮಾರ್, ಶಾಲೆ ಇಕೋ ಕ್ಲಬ್ ಉಸ್ತುವಾರಿ ಶಿಕ್ಷಕ ಎಸ್.ಎನ್.ವೇಣುಗೋಪಾಲ್, ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿ ಟಿ.ಇ.ವಿಶ್ವನಾಥ್, ಪ್ರಾಂಶುಪಾಲೆ ಶ್ವೇತಾ, ಗೈಡ್ ಕ್ಯಾಪ್ಟನ್ ಭವ್ಯ, ಕೆ.ಟಿ.ರಶ್ಮಿ, ಬಿ.ಕೆ.ಅಕ್ಷತಾ, ಎಚ್.ಪಿ.ಅನಿತಾ ಇದ್ದರು.

ಗೌರಿ–ಗಣೇಶ ಹಬ್ಬದ ಪೂರ್ವಭಾವಿ ಸಭೆ



ಯಳಂದೂರು ಪಟ್ಟಣ ಪೊಲೀಸ್ ಠಾಣೆಯಲ್ಲಿ ಗೌರಿ–ಗಣೇಶ ಹಬ್ಬದ ಹಿನ್ನೆಲೆಯಲ್ಲಿ ನಡೆದ ಶಾಂತಿ ಸಭೆಯಲ್ಲಿ ಸಿಪಿಐ ಶ್ರೀಕಾಂತ್ ಮಾತನಾಡಿದರು.

ಯಳಂದೂರು: ಗೌರಿ–ಗಣೇಶ ಹಬ್ಬದ ಅಂಗವಾಗಿ ಪಟ್ಟಣ ಪೊಲೀಸ್ ಠಾಣೆ ಆವರಣದಲ್ಲಿ ಶಾಂತಿ ಸಭೆ ನಡೆಯಿತು.

ಸಿಪಿಐ ಶ್ರೀಕಾಂತ್ ಮಾತನಾಡಿ, ಗೌರಿ–ಗಣೇಶ ಹಬ್ಬವನ್ನು ಎಲ್ಲರೂ ಶಾಂತಿ ಹಾಗೂ ಸೌಹಾರ್ದತೆಯಿಂದ ಆಚರಿಸಬೇಕು. ಕಾನೂನು ಸುವ್ಯವಸ್ಥೆಗೆ ಧಕ್ಕೆಯಾಗದ ರೀತಿ ಗಣೇಶ ಮೂರ್ತಿ ಪ್ರತಿಷ್ಠಾಪಿಸಬೇಕು. ಪಟ್ಟಣ ಹಾಗೂ ಗ್ರಾಮ ಪಂಚಾಯಿತಿಯಿಂದ ಕಡ್ಡಾಯವಾಗಿ ಅನುಮತಿ ಪಡೆಯಬೇಕು ಎಂದು ಸೂಚಿಸಿದರು.

ಗಣೇಶ ಮೂರ್ತಿ ವಿಸರ್ಜನೆ ದಿನಾಂಕ ಮತ್ತು ಸಮಯವನ್ನು ಠಾಣೆಗೆ ಮುಂಚಿತವಾಗಿ ತಿಳಿಸಬೇಕು. ಯಾವುದೇ ಕಾರಣಕ್ಕೂ ಡಿಜೆ ಬಳಸಬಾರದು. ಧ್ವನಿವರ್ಧಕಗಳನ್ನು ರಾತ್ರಿ ಹಾಕಬಾರದು. ಕಡ್ಡಾಯವಾಗಿ ಪರವಾನಿಗಿ ಪಡೆದುಕೊಳ್ಳಬೇಕು ಎಂದರು.

ಸಭೆಯಲ್ಲಿ ಪಿಎಸ್‌ಐ ಹನುಮಂತ ಉಪ್ಪಾರ್, ಕರಿಬಸಪ್ಪ ಪಪಂ ಸದಸ್ಯ ಮಹೇಶ್, ಅನಿಲ್, ಮಹೇಶ್, ಆನಂದ, ಜಡೇಸ್ವಾಮಿ, ನಾಗೇಶ್, ರಘು ಅನೇಕರು ಇದ್ದರು.

ಸೆ.14ರಂದು ಜಿಲ್ಲಾದ್ಯಂತ ಲೋಕ್ ಅದಾಲತ್



ಬಿ.ಎಸ್.ಭಾರತಿ

ಚಾಮರಾಜನಗರ: ರಾಷ್ಟ್ರೀಯ ಹಾಗೂ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ನಿರ್ದೇಶನದಂತೆ ಜಿಲ್ಲಾದ್ಯಂತ ರಾಷ್ಟ್ರೀಯ ಲೋಕ್ ಅದಾಲತ್ ಅನ್ನು ಸೆ.14 ರಂದು ನಡೆಸಲಾಗುವುದು ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಅಧ್ಯಕ್ಷೆ ಬಿ.ಎಸ್.ಭಾರತಿ ತಿಳಿಸಿದರು.

ನಗರದ ನ್ಯಾಯಾಲಯದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅದಾಲತ್‌ನಲ್ಲಿ ಸಾರ್ವಜನಿಕರು ನ್ಯಾಯಾಲಯದ ಬಾಕಿ ಮತ್ತು ವ್ಯಾಜ್ಯ ಪೂರ್ವ ಪ್ರಕರಣಗಳನ್ನು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಅಥವಾ ಆಯಾಯ ತಾಲೂಕು ಕಾನೂನು ಸೇವಾ ಸಮಿತಿಗಳಲ್ಲಿ ಆನ್‌ಲೈನ್, ವಿಡಿಯೋ ಕಾನ್ಫರೆನ್ಸ್, ಇ–ಮೇಲ್, ಎಸ್‌ಎಂಎಸ್, ವಾಟ್ಸ್‌ಆಪ್ ಮೂಲಕ ಅಥವಾ ಖುದ್ದಾಗಿ ಹಾಜರಾಗುವ ಮೂಲಕ ಸಂಪರ್ಕಿಸಿ ಇತ್ಯರ್ಥ ಪಡಿಸಿಕೊಳ್ಳಬಹುದು ಎಂದರು.

ಅದಾಲತ್ ನಿಮಿತ್ತ ನ್ಯಾಯಾಲಯಗಳ ಬಾಕಿ ರಾಜೀ ಯೋಗ್ಯ ಪ್ರಕರಣಗಳನ್ನು ಶೀಘ್ರ ಹಾಗೂ ಪರಿಣಾಮಕಾರಿ ತೀರ್ಮಾನ ಮಾಡಿಕೊಳ್ಳಲು ಎಡಿಆರ್ ಕಟ್ಟಡದಲ್ಲಿ ಪೂರ್ವಭಾವಿ ಸಮಾಲೋಚನಾ ಕೇಂದ್ರ ತೆರೆಯಲಾಗಿದೆ. ಸಾರ್ವಜನಿಕರು ತಮ್ಮ ವ್ಯಾಜ್ಯ ಪೂರ್ವ ಹಾಗೂ ಬಾಕಿ ಪ್ರಕರಣಗಳಿಗೆ ತಕ್ಷಣ ಪರಿಹಾರ ಪಡೆದುಕೊಳ್ಳಲು ಇದೊಂದು ಸುವರ್ಣಾವಕಾಶವಾಗಿದೆ ಎಂದು ತಿಳಿಸಿದರು.

ಮಾಹಿತಿಗೆ ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ ಸಹಾಯವಾಣಿ ಸಂಖ್ಯೆ: 15100, ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ದೂ.ಸಂ:1800–425–90900, ಚಾಮರಾಜನಗರ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ದೂ.ಸಂ: 08226–226022, ತಾಲೂಕು ಕಾನೂನು ಸೇವಾ ಸಮಿತಿಯ ಕೊಳ್ಳೇಗಾಲ: 08224–256788, ಗುಂಡ್ಲುಪೇಟೆ: 08229–223279, ಯಳಂದೂರು: 08226–240229, ಇ–ಮೇಲ್: dlsachnagar2021@gmail.com ಹಾಗೂ ಪ್ರಾಧಿಕಾರದ ಫೇಸ್‌ಬುಕ್ ಖಾತೆ: Dlsa Chamarajanagara ಅನ್ನು ಸಂಪರ್ಕಿಸಬಹುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಈಶ್ವರ್, ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಸ್.ನಂಜಪ್ಪ, ಪ್ರಧಾನ ಕಾರ್ಯದರ್ಶಿ ರಂಗಸ್ವಾಮಿ ಇದ್ದರು.

ಹೋಟೆಲ್‌ಗೆ ಆಹಾರ ಅಧಿಕಾರಿಗಳ ಭೇಟಿ, ಪರಿಶೀಲನೆ



ಯಳಂದೂರು ತಾಲೂಕಿನ ಬಿಳಿಗಿರಿರಂಗನಬೆಟ್ಟಕ್ಕೆ ಆಹಾರ ಸುರಕ್ಷತಾ ಅಧಿಕಾರಿಗಳ ತಂಡ ಗುರುವಾರ ಭೇಟಿ ನೀಡಿ ಪರಿಶೀಲನೆ ನಡೆಸಿತು.

ಯಳಂದೂರು, ಸೆ.6–ತಾಲೂಕಿನ ಬಿಳಿಗಿರಿರಂಗನಬೆಟ್ಟದ ಮಯೂರ ಬಿಳಿಗಿರಿ ಹೋಟೆಲ್‌ಗೆ ಚಾಮರಾಜನಗರ ಜಿಲ್ಲಾ ಆಹಾರ ಸುರಕ್ಷತಾ ಅಧಿಕಾರಿಗಳ ತಂಡ ಶುಕ್ರವಾರ ಭೇಟಿ ನೀಡಿ, ಪರಿಶೀಲಿಸಿತು.

ಹೋಟೆಲ್‌ಗೆ ಭೇಟಿ ನೀಡಿದ ಜಿಲ್ಲಾ ಆಹಾರ ಸುರಕ್ಷತಾಧಿಕಾರಿ ಶ್ರೀನಿವಾಸ್ ನೇತೃತ್ವದ ತಂಡ, ಉಪಾಹಾರ ಗೃಹ, ಅಡುಗೆ ಮನೆ, ವಾಷಿಂಗ್ ಪ್ರದೇಶ ಮತ್ತು ಉಗ್ರಾಣ ಪರಿಶೀಲಿಸಿತು. ಈ ಸಂದರ್ಭದಲ್ಲಿ ಹೋಟೆಲ್‌ನ ಸುರಕ್ಷತೆ, ಶುಚಿತ್ವ ಹಾಗೂ ಇತರೆ ಅಂಶ ಉತ್ತಮವಾಗಿದ್ದು, ಈ ಬಗ್ಗೆ ಅಧಿಕಾರಿಗಳು ಮೆಚ್ಚುಗೆ ವ್ಯಕ್ತಪಡಿಸಿದರು. ಉಗ್ರಾಣ ಹಾಗೂ ಅಡುಗೆ ಮನೆಯಲ್ಲಿ ಆಹಾರ ಇಲಾಖೆ ಮಾರ್ಗಸೂಚಿಯನ್ನು ಕಡ್ಡಾಯವಾಗಿ ಪಾಲಿಸಬೇಕು. ಗ್ರಾಹಕರಿಗೆ ಉತ್ತಮ ಆಹಾರ ನೀಡಬೇಕು ಎಂದು ಸೂಚಿಸಿ, ಸಲಹೆ ನೀಡಿದರು.

ವ್ಯವಸ್ಥಾಪಕ ಮಹದೇವಸ್ವಾಮಿ, ಪ್ರದೀಪ್, ಆಹಾರ ಇಲಾಖೆ ನೌಕರರು ಹಾಗೂ ಹೋಟೆಲ್ ಸಿಬ್ಬಂದಿ ಹಾಜರಿದ್ದರು.

ಶಿವರಾಮು ನಿಧನ



ಯಳಂದೂರು: ಪಟ್ಟಣದ ತಿರುಮಲ ಬಜಾರ್ ಮಾಲೀಕ ಹಾಗೂ ಯೂನಿಯನ್ ಬ್ಯಾಂಕ್ ನಿವೃತ್ತ ನೌಕರ ಶಿವರಾಮು (65) ಅನಾರೋಗ್ಯದಿಂದ ಗುರುವಾರ ನಿಧನರಾದರು.

ಮೃತರು ಪತ್ನಿ, ಪುತ್ರ, ಪುತ್ರಿ ಹಾಗೂ ಅಪಾರ ಬಂಧು–ಬಳಗ ಅಗಲಿದ್ದಾರೆ. ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಜಿಲ್ಲಾದ್ಯಂತ ಸಂಭ್ರಮದ ಗೌರಿಹಬ್ಬ ಆಚರಣೆ

ಕುಟುಂಬ ಸಮೇತ ಬಾಗಿನ ನೀಡಿ, ಪೂಜೆ ಸಲ್ಲಿಸಿದ ಮುತ್ತೈದೆಯರು

ಚಾಮರಾಜನಗರ, ಸೆ.6–ಭಾದ್ರಪದ ಮಾಸದ ಮೊದಲ ದೊಡ್ಡ ಹಬ್ಬ ಗಣೇಶ ಚೌತಿಯ ಮುನ್ನ ದಿನವಾದ ಶುಕ್ರವಾರ ಜಿಲ್ಲಾದ್ಯಂತ ಗೌರಿ ಹಬ್ಬವನ್ನು ಸಂಭ್ರಮದಿಂದ ಆಚರಿಸಲಾಯಿತು.

ಚಾಮರಾಜನಗರ, ಗುಂಡ್ಲುಪೇಟೆ, ಯಳಂದೂರು, ಕೊಳ್ಳೇಗಾಲ ಹಾಗೂ ಹನೂರು ತಾಲೂಕು ಕೇಂದ್ರ ಸೇರಿದಂತೆ ಗ್ರಾಮೀಣ ಪ್ರದೇಶಗಳ ಪ್ರಮುಖ ದೇವಾಲಯಗಳಲ್ಲಿ ಗೌರಿಯನ್ನು ಪ್ರತಿಷ್ಠಾಪಿಸಲಾಯಿತು. ಬೆಳಗ್ಗೆಯೇ ಶುಭ ಮುಹೂರ್ತದಲ್ಲಿ ದೇವಿಯನ್ನು ಪ್ರತಿಷ್ಠಾಪಿಸಿದ ಮುತ್ತೈದೆಯರು, ಕುಟುಂಬ ಸಮೇತ ಬಾಗಿನ ನೀಡಿ ಪೂಜೆ ನೆರವೇರಿಸಿದರು. ಮುತ್ತೈದೆ ಭಾಗ್ಯ ಕರುಣಿಸುವಂತೆ ದೇವಿಯಲ್ಲಿ ಪ್ರಾರ್ಥಿಸಿದರು.

ವಿಶೇಷ ಪೂಜೆ: ಗೌರಿ ಹಬ್ಬದ ಹಿನ್ನೆಲೆಯಲ್ಲಿ ನಗರದ ಚಾಮರಾಜೇಶ್ವರಸ್ವಾಮಿ ದೇವಸ್ಥಾನದಲ್ಲಿ ಪ್ರತಿಷ್ಠಾಪಿಸಿದ ಗೌರಿಗೆ ಮುತ್ತೈದೆಯರು ಹಾಗೂ ಮಹಿಳೆಯರು ವಿಶೇಷ ಪೂಜೆ ಸಲ್ಲಿಸಿದರು. ದೇವಾಲಯ ಅರ್ಚಕರು ವಿಶೇಷ ಪೂಜೆ ಸಲ್ಲಿಸಿದ ನಂತರ ಸಾರ್ವಜನಿಕರು ಹಾಗೂ ಮಹಿಳೆಯರಿಗೆ ಪೂಜೆ ಸಲ್ಲಿಸಲು ಅವಕಾಶ ಕಲ್ಪಿಸಲಾಯಿತು. ಇದೇ ವೇಳೆ ಮುತ್ತೈದೆಯರು ಬಾಗಿನ ಅರ್ಪಿಸಿದರು. ಈ ಬಾರಿ ಗೌರಮ್ಮ ಕರಿಮಣಿ ಮೇಲೆ ಬಂದಿದ್ದು, ಇದು ಮುತ್ತೈದೆಯರಿಗೆ ಶುಭ ಸೂಚಕವಾಗಿದೆ ಎನ್ನಲಾಗಿದೆ.

ಗ್ರಾಮೀಣ ಪ್ರದೇಶದಲ್ಲಿ ಗೌರಿ ಹಬ್ಬವನ್ನು ಸಡಗರದಿಂದ ಆಚರಿಸಲಾಯಿತು. ಬೀದಿ ಬೀದಿ, ದೇವಸ್ಥಾನ, ಸಮುದಾಯ ಭವನ ಸೇರಿದಂತೆ ಎಲ್ಲೆಡೆ ಚಪ್ಪರ ಹಾಕಿ ವಿವಿಧ ವಿನ್ಯಾಸದ ಗಣೇಶನ ಮೂರ್ತಿಗಳ ಪ್ರತಿಷ್ಠಾಪನೆಗೆ ಯುವಕರು, ಸಂಘ–ಸಂಸ್ಥೆ ಮುಖಂಡರು ಸಿದ್ಧತೆ ಕೈಗೊಂಡಿದ್ದಾರೆ.

ವಿಶೇಷ ಭಕ್ತಿ ಸಮರ್ಪಣೆ: ಗೌರಿ ಶಿವನನ್ನು ಮದುವೆಯಾದ ಮೇಲೆ ತವರು ಮನೆ ಭೂ ಲೋಕಕ್ಕೆ ಬಂದಾಗ ಭೂಮಿ ಹಸಿರಿನಿಂದ ನಳನಳಿಸುತ್ತಿರುತ್ತದೆ ಇದರಿಂದ ಗೌರಿ ಸಂತೋಷದಿಂದ ಇದೇ ರೀತಿ ಮಳೆ ಬೆಳೆ ಚೆನ್ನಾಗಿ ಆಗಲಿ ಎಂದು ಹರಸುತ್ತಾಳೆ ಎಂಬ ನಂಬಿಕೆ ಇದೆ. ತವರು ಮನೆಗೆ ಬಂದ ಮಗಳಿಗೆ ಹೇಗೆ ಸತ್ಕರಿಸಿ ಕಳುಹಿಸಿಕೊಡಲಾಗುತ್ತದೆಯೋ ಹಾಗೆಯೇ ಗೌರಮ್ಮನಿಗೂ ಸತ್ಕರಿಸಲಾಗುತ್ತದೆ. ತಾಯಿಯನ್ನು ಮಗ ಗಣೇಶ ಹುಡುಕಿಕೊಂಡು ಬರುತ್ತಾನೆ. ಇದರಿಂದ ಗಣೇಶ ಹಬ್ಬವೂ ಬಂದಿದೆ ಎನ್ನಲಾಗಿದೆ.



ಚಾಮರಾಜನಗರ ತಾಲೂಕಿನ ಕುದೇರು ಗ್ರಾಮದ ಸ್ವರ್ಣಗೌರಿಗೆ ಮಹಿಳೆಯರು ಬಾಗಿನ ಅರ್ಪಿಸಿದರು.

ಕುದೇರು ಗ್ರಾಮದಲ್ಲಿ ವಿಜೃಂಭಣೆಯ ಸ್ವರ್ಣಗೌರಿ ವ್ರತ

ಚಾಮರಾಜನಗರ, ಸೆ.6– ತಾಲೂಕಿನ ಕುದೇರು ಗ್ರಾಮದ ಸ್ವರ್ಣಗೌರಿ ದೇವಾಲಯದಲ್ಲಿ ಶುಕ್ರವಾರ ವಿಜೃಂಭಣೆಯಿಂದ ಗೌರಿ ಹಬ್ಬ ಆಚರಿಸಲಾಯಿತು.

ಬೆಳಗ್ಗೆಯಿಂದಲೇ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು. ಹಬ್ಬದ ಅಂಗವಾಗಿ ದೇವಸ್ಥಾನ ಮುಂಭಾಗ ದೊಡ್ಡ ಚಪ್ಪರ ಹಾಕಿ ತಳಿರು–ತೋರಣಗಳಿಂದ ಸಿಂಗಾರಗೊಳಿಸಲಾಗಿತ್ತು. ಮಧ್ಯಾಹ್ನ ನಂತರ ದೇವಸ್ಥಾನಕ್ಕೆ ಹೊಸ ನೀರು ತಂದು ಗೌರಿಯನ್ನು ಪ್ರತಿಷ್ಠಾಪಿಸಲಾಯಿತು. ನಂತರ ಗ್ರಾಮದ ಮಹಿಳೆಯರು ಹಾಗೂ ಚಾಮರಾಜನಗರ, ಬೆಂಗಳೂರು, ರಾಮನಗರ ಸೇರಿದಂತೆ ರಾಜ್ಯದ ವಿವಿಧೆಡೆಯಿಂದ ಬಂದಿದ್ದ ಮಹಿಳೆಯರು ದೇವಿಗೆ ಬಾಗಿನ ಅರ್ಪಿಸಿದರು.

ಮರಳಿನ ಮೂರ್ತಿ ಪ್ರತಿಷ್ಠಾಪನೆ: ನಾಡಿನ ಎಲ್ಲೆಡೆ ಹಬ್ಬದ ದಿನ ಗೌರಮ್ಮನ ಮೂರ್ತಿ ಪ್ರತಿಷ್ಠಾಪಿಸಿ ಪೂಜೆ ಸಲ್ಲಿಸಲಾಗುತ್ತದೆ. ಆದರೆ, ಇಲ್ಲಿ ಹಬ್ಬದ ಹಿಂದಿನ ದಿನವೇ ದೊಡ್ಡ ಕೆರೆಯ ತಡದಲ್ಲಿ ಮರಳಿನ ಗೌರಿ ಮೂರ್ತಿಯನ್ನು ಸಿದ್ಧಪಡಿಸಲಾಗುತ್ತದೆ. ಗೌರಿ ಹಬ್ಬದಂದು ವಿಶೇಷ ಪೂಜೆಯೊಂದಿಗೆ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮೂಲಕ ದೇವಸ್ಥಾನಕ್ಕೆ ತಂದು ಪ್ರತಿಷ್ಠಾಪಿಸಲಾಗುತ್ತದೆ.

ದೇವಾಲಯದಲ್ಲಿ ಐದನೇ ದಿನಕ್ಕೆ ಮರಳಿನ ಗೌರಿಯನ್ನು ಬದಲಿಸಿ, ಕಡಲೆ ಹಿಟ್ಟಿನ ಗೌರಿಯನ್ನು ಪ್ರತಿಷ್ಠಾಪಿಸಿ ಅದಕ್ಕೆ ಚಿನ್ನದ ಕವಚ, ಆಭರಣಗಳನ್ನು ತೊಡಿಸಲಾಗುತ್ತದೆ. ಅಂದಿನಿಂದ 12ನೇ ದಿನದವರೆಗೆ ಸ್ವರ್ಣಗೌರಿ ಎಂದು ವಿಶಿಷ್ಟವಾಗಿ ಪೂಜಿಸುವ ವಾಡಿಕೆ ಇದೆ.

12 ದಿನ ವಿಶೇಷ ಪೂಜೆ: ಇಷ್ಟಾರ್ಥ ಸ್ವರ್ಣಗೌರಿ ಎಂದು ಕರೆಸಿಕೊಳ್ಳುವ ಈ ಗೌರಮ್ಮನಿಗೆ 12 ದಿನಗಳವರಗೆ ವಿಶೇಷ ಪೂಜೆ ನಡೆಯುತ್ತದೆ. ಈ ಸಂದರ್ಭದಲ್ಲಿ ಸುಮಂಗಲಿಯರು ಬಾಗಿನ ಅರ್ಪಿಸಿ ಇಷ್ಟಾರ್ಥ ಸಿದ್ಧಿಗಾಗಿ ಬೇಡಿಕೊಳ್ಳುತ್ತಾರೆ. ರಾಜ್ಯದ ವಿವಿಧೆಡೆಗಳಿಂದ ಭಕ್ತರು ಆಗಮಿಸುತ್ತಾರೆ.

ಗುಂಡ್ಲುಪೇಟೆಯಲ್ಲಿ ಸುಮಂಗಲಿಯರಿಂದ ಬಾಗಿನ ಅರ್ಪಣೆ



ಗುಂಡ್ಲುಪೇಟೆ ಪ್ರಸನ್ನ ಗಣಪತಿ ದೇವಾಲಯದ ಗೌರಿ ಗುಡಿಯಲ್ಲಿ ಸುಮಂಗಲಿಯರು ಬಾಗಿನ ಸಲ್ಲಿಸಿದರು.

ಗುಂಡ್ಲುಪೇಟೆ, ಸೆ.6–ಪಟ್ಟಣ ಹಾಗೂ ತಾಲೂಕಿನಾದ್ಯಂತ ಶುಕ್ರವಾರ ಗೌರಿ ಹಬ್ಬವನ್ನು ಭಕ್ತಿಯಿಂದ ಆಚರಿಸಲಾಯಿತು.

ಮುಂಜಾನೆಯಿಂದಲೇ ಮುತ್ತೈದೆಯರು ಹಾಗೂ ಮಕ್ಕಳು ಪಟ್ಟಣದ ವಿವಿಧ ಗೌರಿ ಗುಡಿಯಲ್ಲಿ ತರಕಾರಿ, ಹಣ್ಣು ಹಾಗೂ ತಳಿರು ತೋರಣಗಳಿಂದ ಸಿಂಗರಿಸಿದ ಸ್ವರ್ಣಗೌರಿಗೆ ಅರಿಶಿಣ–ಕುಂಕುಮ, ಹೂವು, ಹಣ್ಣು, ಬಳೆ ಇಟ್ಟು ಪೂಜೆ ಸಲ್ಲಿಸಿದರು. ನಂತರ ಬಾಗಿನ ಸಮರ್ಪಿಸುವುದರೊಂದಿಗೆ ಗೌರಿ ಹಬ್ಬವನ್ನು ಸಡಗರದಿಂದ ಆಚರಿಸಿದರು.

ಕಳೆಗಟ್ಟಿದ ಗೌರಿ ಗುಡಿ: ಗೌರಿ ಹಬ್ಬದ ಹಿನ್ನೆಲೆಯಲ್ಲಿ ಪಟ್ಟಣದ ಪ್ರಸಿದ್ಧ ಪ್ರಸನ್ನ ಗಣಪತಿ ದೇವಾಲಯದ ಗೌರಿ ಗುಡಿಯಲ್ಲಿ ಪ್ರಧಾನ ಅರ್ಚಕ ನಾಗರಾಜಸ್ವಾಮಿ ನೇತೃತ್ವದಲ್ಲಿ ಸರದಿ ಸಾಲಿನಲ್ಲಿ ಸುಮಂಗಲಿಯರು ಪೂಜೆ ಸಲ್ಲಿಸಿದರು. ಪಟ್ಟಣದ ಶ್ರೀರಾಮೇಶ್ವರ ದೇವಾಲಯದಲ್ಲಿ ಪ್ರಧಾನ ಅರ್ಚಕ ಶಂಕರನಾರಾಯಣ ಜೋಯಿಸ್ ನೇತೃತ್ವದಲ್ಲಿ ಸ್ವರ್ಣಗೌರಿ ಪ್ರತಿಷ್ಠಾಪಿಸಲಾಯಿತು. ನೂರಾರು ಮಹಿಳೆಯರು ಬಾಗಿನ ಸಲ್ಲಿಸಿ ಎಳೆಕಟ್ಟಿಸಿಕೊಂಡರು.

ಗಣೇಶ ಹಬ್ಬಕ್ಕೆ ಖರೀದಿ ಭರಾಟೆ: ಒಂದೆಡೆ ಮಹಿಳೆಯರು ಸ್ವರ್ಣಗೌರಿ ಆಚರಣೆಯಲ್ಲಿ ನಿರತರಾಗಿದ್ದರೆ, ಯುವಕರು ಮತ್ತು ಮಕ್ಕಳು ಶನಿವಾರದ ಗಣೇಶ ಹಬ್ಬ ಆಚರಣೆಗೆ ಭರದಿಂದ ಸಿದ್ಧತೆಯಲ್ಲಿ ತೊಡಗಿಕೊಂಡಿದ್ದರು.

ಎಲ್ಲಿ ನೋಡಿದರೂ ಗಣೇಶ ಮೂರ್ತಿಗಳ ಖರೀದಿ, ಪ್ರತಿಷ್ಠಾಪನೆಗೆ ಹೂ, ಹಣ್ಣು, ಮಂಟಪ ಅಲಂಕಾರಕ್ಕೆ ಕಬ್ಬು, ಬಾಳೆ ಕಂದು, ಮಾವಿನ ಸೊಪ್ಪು ಸಂಗ್ರಹದಲ್ಲಿ ತೊಡಗಿಸಿಕೊಂಡರು. ಇದರಿಂದ ಪಟ್ಟಣದ ಅಂಗಡಿ ಬೀದಿಯಲ್ಲಿ ಖರೀದಿ ಭರಾಟೆ ಜೋರಾಗಿತ್ತು.

ಕರ್ತವ್ಯಲೋಪ: ಜೂನಿಯರ್ ಇಂಜಿನಿಯರ್ ಅಮಾನತು

ಮೈಸೂರು, ಸೆ.6(ಎಸ್‌ಪಿಎನ್)– ರಸ್ತೆ ಮತ್ತು ಚರಂಡಿ ಕಾಮಗಾರಿಗಳ ಗುಣಮಟ್ಟ ಕಾಪಾಡುವಲ್ಲಿ ವಿಫಲರಾಗಿ ಕರ್ತವ್ಯ ಲೋಪ ವೆಸಗಿದ ಹೆಚ್.ಡಿ. ಕೋಟೆ ಪುರಸಭೆ ಜೂನಿಯರ್ ಇಂಜಿನಿಯರ್ ಅಮಾನತು ಗೊಳಿಸಿ ಮೈಸೂರು ಜಿಲ್ಲಾಧಿಕಾರಿ ಜಿ.ಲಕ್ಷ್ಮೀ ಕಾಂತ ರೆಡ್ಡಿ ಶುಕ್ರವಾರ ಆದೇಶಿಸಿದ್ದಾರೆ.

ಇಲ್ಲಿನ ಜೂನಿಯರ್ ಇಂಜಿನಿಯರ್ ಕೆ. ಸುರೇಶ್ ಅಮಾನತ್ತಾದವರು. ಇವರು ಮುಖ್ಯ ಮಂತ್ರಿಗಳ ಅಮೃತ್ ನಗರೋತ್ಥಾನ (ಮುನಿಸಿಪಾಲಿಟಿ) ಯೋಜನೆ (ಹಂತ 4) ಅಡಿಯಲ್ಲಿ ನಿರ್ವಹಿಸಲಾಗುವ ಕಾಮಗಾರಿಗಳ ಗುಣಮಟ್ಟವನ್ನು ಕಾಪಾಡುವ ದೃಷ್ಟಿಯಿಂದ ಪ್ರತಿ ರನ್ನಿಂಗ್ ಬಿಲ್‌ನಲ್ಲಿ ಶೇ.25 ರಷ್ಟು ಪರಿಮಾಣ ಮತ್ತು ಗುಣಮಟ್ಟಗಳನ್ನು ಪರಿಶೀಲಿಸಿ ನಂತರ ಗುತ್ತಿಗೆದಾರರಿಗೆ ಬಿಲ್ ಪಾವತಿಸಲು ಕ್ರಮವಹಿಸುವಂತೆ ಪೌರಾಡಳಿತ ನಿರ್ದೇಶಕರ ಪತ್ರದಲ್ಲಿ ಸೂಚನೆ ಇತ್ತು.

ಜಿಲ್ಲಾಧಿಕಾರಿ ಕೆ.ಲಕ್ಷ್ಮೀಕಾಂತ ರೆಡ್ಡಿ, ಕಾಮಗಾರಿಗಳ ಪರಿಮಾಣ ಮತ್ತು ಗುಣಮಟ್ಟ ಪರಿಶೀಲನೆ ಸಂದರ್ಭದಲ್ಲಿ ಕೆ. ಸುರೇಶ್ ಅವರು, 75 ಎಂಎಂ ಟಾರ್ ರಸ್ತೆ ಹಾಗೂ 150ಎಂಎಂ ಕಾಂಕ್ರೀಟ್ ರಸ್ತೆ ಎಂದು ನಮೂದಿಸಿದ್ದರು. ಆದರೆ, ವಾಸ್ತವಿಕವಾಗಿ ಟಾರ್ ರಸ್ತೆ 55 ಎಂಎಂ, ಕಾಂಕ್ರೀಟ್ ರಸ್ತೆ 100ಎಂಎಂ ದಪ್ಪ ಇತ್ತು. ಈ ಕಾಮಗಾರಿಗಳ ಗುಣಮಟ್ಟ ಪರಿಶೀಲಿಸದೇ ಗುತ್ತಿಗೆದಾರರಿಗೆ ಬಿಲ್ ಪಾವತಿಸಲು ಕಡತ ಮಂಡಿಸಿದ್ದಾರೆ ಎಂದು ಆದೇಶದಲ್ಲಿ ತಿಳಿಸಿದ್ದಾರೆ.

ಡಿಸಿ ಪರಿಶೀಲಿಸಿದ ಕಾಮಗಾರಿಗಳ ವಿವರ: ಹೆಚ್.ಡಿ.ಕೋಟೆ ಪುರಸಭಾ ವ್ಯಾಪ್ತಿಯ ವಾರ್ಡ್ ನಂ.4ರ ಸಿದ್ದಾಪ್ಪಾಜಿ ರಸ್ತೆಯ ರಾಮಮಂದಿರದಿಂದ ಅರಳಿಕಟ್ಟೆ ವರಗೆ ರಸ್ತೆ ಮತ್ತು ಚರಂಡಿ ಕಾಮಗಾರಿ. ವಾರ್ಡ್ ನಂ.14ರ ಪ್ರಕಾಶ್ ಸೇಠ್ ಅವರ ಮನೆಯಿಂದ ಎನ್.ಎನ್.ಉಮಾಶಂಕರ್ ಮನೆಯವರೆಗಿನ ರಸ್ತೆ ಮತ್ತು ಚರಂಡಿ. ವಾರ್ಡ್ ನಂ.23ರಲ್ಲಿನ ಮೇಟಿಕುಪ್ಪೆ ಮುಖ್ಯರಸ್ತೆಯಿಂದ ಮಲ್ಲೈ ಮಹದೇಶ್ವರ ದೇವಸ್ಥಾನಕ್ಕೆ ಹೋಗುವ ರಸ್ತೆ ಅಭಿವೃದ್ಧಿ ಕಾಮಗಾರಿಗಳ ಪರಿಶೀಲನೆ ವೇಳೆ ಕೆ.ಸುರೇಶ್ ಅವರ ಕರ್ತವ್ಯ ಲೋಪ ಪತ್ತೆಯಾಗಿದೆ.

ಹಾಗಾಗಿ ಕರ್ನಾಟಕ ಸರ್ಕಾರಿ ಸೇವಾ (ವರ್ಗೀಕರಣ, ನಿಯಂತ್ರಣ, ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 10(1)ರ ಪ್ರಕಾರ ಕಿರಿಯ ಅಭಿಯಂತರ ಕೆ.ಸುರೇಶ್ ಅವರ ಕರ್ತವ್ಯ ಲೋಪದ ವಿರುದ್ಧ ಇಲಾಖಾ ವಿಚಾರಣೆ ಕಾಯ್ದಿರಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ ಅಮಾನತುಗೊಳಿಸಿ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಆದೇಶಿಸಿದ್ದಾರೆ.

ಟೀಂ ಮೈಸೂರು, ಲಯನ್ಸ್‌ನಿಂದ ಶಿಕ್ಷಕರಿಗೆ ಗೌರವ ಸಮರ್ಪಣೆ

ಸಮಾಜದಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದು ; ಮೈಸೂರು ವಿವಿ ಪರೀಕ್ಷಾಂಗ ಕುಲಸಚಿವ ಪ್ರೊ.ನಾಗರಾಜ್



ಮೈಸೂರಿನ ನಜರ್‌ಬಾದ್‌ನ ವಿಕೆ ಫಂಕ್ಷನ್ ಹಾಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಿಕ್ಷಕರನ್ನು ಸನ್ಮಾನಿಸಲಾಯಿತು.

ಮೈಸೂರು,ಸೆ.6(ಪಿಎಂ)– ಟೀಂ ಮೈಸೂರು ಹಾಗೂ ಲಯನ್ಸ್ ಕ್ಲಬ್ ಇಂದಿರಾನಗರದ ಜಂಟಿ ಆಶ್ರಯದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಶಿಕ್ಷಕರ ದಿನಾಚರಣೆಯಲ್ಲಿ 21 ಶಿಕ್ಷಕರಿಗೆ ಗೌರವ ಸಮರ್ಪಿಸಲಾಯಿತು.

ಮೈಸೂರಿನ ನಜರ್‌ಬಾದ್‌ನ ವಿಕೆ ಫಂಕ್ಷನ್ ಹಾಲ್‌ನಲ್ಲಿ ಡಾ.ರಾಧಾಕೃಷ್ಣನ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಮೈಸೂರು ವಿವಿ ಪರೀಕ್ಷಾಂಗ ಕುಲಸಚಿವ ಪ್ರೊ.ನಾಗರಾಜ್ ಮಾತನಾಡಿ, ಸಮಾಜಕ್ಕೆ ಮಹತ್ವದ ಕೊಡುಗೆಗಳನ್ನು ನೀಡುವಲ್ಲಿ ಶಿಕ್ಷಕರ ಪಾತ್ರ ಪ್ರಮುಖವಾದುದು. ಅವರಿಗೆ ಸನ್ಮಾನಿಸಿ ಪ್ರೋತ್ಸಾಹಿಸುವುದು ನಿಜಕ್ಕೂ ಶ್ಲಾಘನೀಯ. ಶಿಕ್ಷಕರು ತಮ್ಮ ವಿದ್ಯಾರ್ಥಿಗಳಿಂದ ಅಪೇಕ್ಷಿಸುವುದು ಕೇವಲ ಅವರ ಯಶಸ್ಸು ಮಾತ್ರವೇ. ತಾವು ಬೋಧಿಸಿದ ವಿದ್ಯಾರ್ಥಿಗಳು ಸಾಧನೆ ಮಾಡಿದರೆ ಶಿಕ್ಷಕರು ನಿಜಕ್ಕೂ ಖುಷಿ ಪಡುತ್ತಾರೆ ಎಂದು ಹೇಳಿದರು.

ಲಯನ್ಸ್ ಕ್ಲಬ್ ಇಂದಿರಾನಗರದ ಚಾರ್ಟೆಡ್ ಸದಸ್ಯ ಅಚ್ಯುತ್ ಮಾತನಾಡಿ, ಪ್ರತಿಯೊಬ್ಬರ ಸಾಧನೆಯ ಹಿಂದೆ ಅವರ ಶಿಕ್ಷಕರ ಪರಿಶ್ರಮ ಇರುತ್ತದೆ. ಹಾಗಾಗಿ ಶಿಕ್ಷಕರು ಸಮಾಜದಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತಾರೆ. ಅವರನ್ನು ಗೌರವಿಸುವುದು ಪ್ರತಿಯೊಂದು ಸಮಾಜದ ಕರ್ತವ್ಯ. ಟೀಂ ಮೈಸೂರು ಹಾಗೂ ಲಯನ್ಸ್ ಕ್ಲಬ್ ಎರಡೂ ಸಮಾಜಕ್ಕೆ ತನ್ನ ಕೈಲಾದ ಸೇವೆಯನ್ನು ಮಾಡುತ್ತಿವೆ ಎಂದರು.

ಇದಕ್ಕೂ ಮುನ್ನ ಪ್ರಾಸ್ತಾವಿಕವಾಗಿ ಮಾತನಾಡಿದ ಟೀಂ ಮೈಸೂರು ತಂಡದ ಸಂಚಾಲಕ ಗೋಕುಲ್ ಗೋವರ್ಧನ್, ಟೀಂ ಮೈಸೂರು ತಂಡ ನಡೆದು ಬಂದ ಹಾದಿ ಹಾಗೂ ಸಂಘಟನೆಯ ಸೇವಾ ಚಟುವಟಿಕೆಗಳನ್ನು ವಿವರಿಸಿದರು.

ಟೀಂ ಮೈಸೂರು ತಂಡದ ಸದಸ್ಯರಾದ ಯಶವಂತ್, ಕಿರಣ್ ಜಯರಾಮೇಗೌಡ, ಪ್ರಸನ್ನರಾಜ್, ಹೇಮಂತ್, ಹಿರಿಯಣ್ಣ, ರಾಮ್‌ಪ್ರಸಾದ್, ಮನೋಹರ್, ಸುನೀಲ್, ಮಂಜುನಾಥ್, ಜಯಂತ್, ಕೆ.ವಿ.ಬಸವರಾಜು, ಚೇತನ್, ಶೇಖರ್, ಗೋವಿತ್ ಕಿರಣ್, ಮಲ್ಲೇಶ್, ಅಭಿನಂದನ್, ಬಾಲು, ಮಹಿಳಾ ಸದಸ್ಯರಾದ ಸುಗುಣ ಚಂದ್ರಶೇಖರ್, ಲಯನ್ಸ್ ಕ್ಲಬ್‌ನ ರಾಜರತ್ನಮ್, ವೆಂಕಟೇಶ್, ಅಭಿಷೇಕ್ ಮತ್ತಿತರರು ಹಾಜರಿದ್ದರು.

ಐ.ಸೇಸುನಾಥನ್ ಪಿಎಚ್.ಡಿ

ಮೈಸೂರು, ಸೆ.6– ಡಾ. ಎಂ. ನಂಜುಂಡಯ್ಯ ಹೊಂಗನೂರು ಮಾರ್ಗದರ್ಶನದಲ್ಲಿ ಐ. ಸೇಸುನಾಥನ್ ಸಂಶೋಧನೆ ನಡೆಸಿ ಸಾದರ ಪಡಿಸಿದ 'ಮಾರ್ಟಳ್ಳಿ: ಸಾಂಸ್ಕೃತಿಕ ಅಧ್ಯಯನ' ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಲಾಗಿದೆ.



ಅನಿಲ ಸೋರಿಕೆಯಿಂದ ಆಟೋ ಭಸ್ಮ



ಬೆಂಕಿ ನಂದಿಸುತ್ತಿರುವ ಅಗ್ನಿಶಾಮಕ ಸಿಬ್ಬಂದಿ.

ಮೈಸೂರು,ಸೆ.6(ಪಿಎಂ)– ಅನಿಲ ಸೋರಿಕೆಯಿಂದ ಎಲ್‌ಪಿಜಿ ಆಟೋ ಸುಟ್ಟು ಕರಕಲಾದ ಘಟನೆ ನಜರ್‌ಬಾದ್‌ನಲ್ಲಿ ಶುಕ್ರವಾರ ಸಂಜೆ ಸಂಭವಿಸಿದೆ.

ಪ್ರಯಾಣಿಕರು ಯಾರೂ ಇಲ್ಲದ ಹಿನ್ನೆಲೆಯಲ್ಲಿ ಹಾಗೂ ಬೆಂಕಿ ಕಾಣಿಸಿಕೊಂಡ ತಕ್ಷಣ ಚಾಲಕ ಆಟೋದಿಂದ (ಕೆಎಲ್11, ಎಂ 6697) ಕೆಳಗಿಳಿದ್ದರಿಂದ ಯಾವುದೇ ಜೀವಹಾನಿಯಾಗಿಲ್ಲ. ಗ್ಯಾಸ್ ತುಂಬಿಸಲು ಹೋಗಿದ್ದಾಗ, ತಾಂತ್ರಿಕ ಕಾರಣಕ್ಕೆ ಟ್ಯಾಂಕಿಗೆ ಅನಿಲ್ ಪೂರೈಕೆ ಸಾಧ್ಯವಾಗದೇ ಚಾಲಕ ಮರಳುತ್ತಿದ್ದಾಗ, ಮಾರ್ಗ ಮಧ್ಯೆ ಇದ್ದಕ್ಕಿದ್ದಂತೆ ಆಟೋದಲ್ಲಿ ಬೆಂಕಿ ಕಾಣಿಸಿಕೊಂಡಿದೆ.

ನಜರ್‌ಬಾದ್‌ನ ಅಬಾ ರಸ್ತೆಯಲ್ಲಿ ಈ ದುರ್ಘಟನೆ ನಡೆದಿದ್ದು, ಸ್ಥಳಕ್ಕೆ ಧಾವಿಸಿದ ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಕೆಸಿ. ರಮೇಶ್, ಬನ್ನಿಮಂಟಪ ಅಗ್ನಿಶಾಮಕ ಠಾಣಾಧಿಕಾರಿ ಮಹೇಶ್ ಮತ್ತು ಸಿಬ್ಬಂದಿ ಬೆಂಕಿ ನಂದಿಸಿದರು.

ಮಾವಿನಹಣ್ಣು ಆಸೆ ತೋರಿಸಿ ಅಪ್ರಾಪ್ತ ಬಾಲಕಿ ಮೇಲೆ ಅತ್ಯಾಚಾರ

ಆರೋಪಿಗೆ 30 ವರ್ಷ ಸಜೆ

ಮೈಸೂರು, ಸೆ.6(ಎಂಕೆ)– ಮಾವಿನ ಹಣ್ಣು ಕೊಡುವುದಾಗಿ ಪುಸಲಾಯಿಸಿ ಅಪ್ರಾಪ್ತ ಬಾಲಕಿ ಮೇಲೆ ಅತ್ಯಾಚಾರ ವೆಸಗಿದ ಆರೋಪಿಗೆ 30 ವರ್ಷಗಳ ಕಠಿಣ ಸಜಾ ಹಾಗೂ 1 ಲಕ್ಷ ರೂ.ದಂಡ ವಿಧಿಸಿ ಮೈಸೂರಿನ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಎಫ್‌ಟಿಎಸ್‌ಸಿ–1 ವಿಶೇಷ ನ್ಯಾಯಾಲಯ ಆದೇಶಿಸಿದೆ.

ಮೈಸೂರು ಜಿಲ್ಲೆ ಬನ್ನೂರು ಪೊಲೀಸ್ ಠಾಣೆ ವ್ಯಾಪ್ತಿಯ ಗ್ರಾಮವೊಂದರಲ್ಲಿ 2023ರ ಜು.15 ರಂದು 5 ವರ್ಷದ ಅಪ್ರಾಪ್ತ ಬಾಲಕಿಯನ್ನು ಮಾವಿನಹಣ್ಣು ಕೊಡುವುದಾಗಿ ಪುಸಲಾಯಿಸಿ ಮನೆಗೆ ಕರೆದು ಆಕೆಯ ಮೇಲೆ ಅತ್ಯಾಚಾರ ಎಸಗಿದ್ದ ಕುರಿತು ದೂರು ದಾಖಲಿಸಿಕೊಂಡ ಬನ್ನೂರು ಇನ್ಸ್‌ಪೆಕ್ಟರ್ ಟಿ.ಎಸ್.ಲೋಲಾಕ್ಷಿ ಪ್ರಕರಣದ ತನಿಖೆ ನಡೆಸಿ ಆರೋಪಿ ವಿರುದ್ಧ ದೋಷಾರೋಪಣಾ ಪತ್ರ ಸಲ್ಲಿಸಿದ್ದರು.

ಪ್ರಕರಣ ವಿಚಾರಣೆ ನಡೆಸಿದ ಪೋಕ್ಸೋ ವಿಶೇಷ ನ್ಯಾಯಾಲಯದ ನ್ಯಾಯಾಧೀಶರಾದ ಆನಂದ್ ಪಿ.ಹೊಗಾಡೆ, ಆರೋಪಿಯ ವಿರುದ್ಧ ಆರೋಪ ಸಾಬೀತಾಗಿದೆ ಎಂದು ತಿಳಿಸಿ ಸೆ.5 ರಂದು ಆರೋಪಿಗೆ ಪೋಕ್ಸೋ ಕಾಯ್ದೆಯಡಿ 30 ವರ್ಷಗಳ ಕಠಿಣ ಸಜಾ ಹಾಗೂ 1 ಲಕ್ಷ ರೂ.ದಂಡ ವಿಧಿಸಿದ್ದು, ದಂಡದ ಪೂರ್ಣ ಹಣವನ್ನು ಪರಿಹಾರ ರೂಪದಲ್ಲಿ ಬಾಲಕಿಗೆ ನೀಡಬೇಕು ಹಾಗೂ ಬಾಲಕಿಯು ಸರ್ಕಾರದಿಂದ ಪರಿಹಾರ ರೂಪದಲ್ಲಿ 6 ಲಕ್ಷ ರೂ. ಪಡೆಯಲು ಅರ್ಹಳು ಎಂದು ಆದೇಶಿಸಿದ್ದಾರೆ. ಸರ್ಕಾರದ ಪರವಾಗಿ ಪಬ್ಲಿಕ್ ಪ್ರಾಸಿಕ್ಯೂಟರ್ ಕೆ.ಬಿ.ಜಯಂತಿ ವಾದ ಮಂಡಿಸಿದ್ದರು.

ಎಂಎಸ್ ಗೋಲ್ಡ್ ಅಂಡ್ ಡೈಮಂಡ್ಸ್‌ನ ಮೆಗಾ ಶೋ ರೂಂ ನಾಳೆ ಉದ್ಘಾಟನೆ



ಗೋಲ್ಡನ್‌ಸ್ಟಾರ್ ಗಣೇಶ್

MS GOLD &DIAMONDS

ಮೈಸೂರು,ಸೆ.6(ಪಿಎಂ)– ನಗರದ ಬಿಎನ್ ರಸ್ತೆಯ ಸಬ್‌ಅರ್ಬನ್ ಬಸ್ ನಿಲ್ದಾಣದ ಸಮೀಪ ಸಜ್ಜುಗೊಂಡಿರುವ ಎಂಎಸ್ ಗೋಲ್ಡ್ ಅಂಡ್ ಡೈಮಂಡ್ಸ್‌ನ ಮೆಗಾ ಶೋರೂಂ ಅನ್ನು ಸೆ.8 ರಂದು ಬೆಳಗ್ಗೆ 10.30ಕ್ಕೆ ಖ್ಯಾತ ನಟ ಗೋಲ್ಡನ್ ಸ್ಟಾರ್ ಗಣೇಶ್ ಉದ್ಘಾಟಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಶಾಸಕರಾದ ಜಿ.ಟಿ.ದೇವೇಗೌಡ, ತನ್ವೀರ್ ಸೇಠ್, ಕೆ.ಹರೀಶ್‌ಗೌಡ, ಟಿ.ಎಸ್.ಶ್ರೀವತ್ಸ ಪಾಲ್ಗೊಳ್ಳಲಿದ್ದಾರೆ. ಮೈಸೂರಿನಲ್ಲೇ ಅತೀ ದೊಡ್ಡ ಚಿನ್ನದ ಮಳಿಗೆ ಇದಾಗಿದ್ದು, ಸಾಂಪ್ರದಾಯಿಕ ಶ್ರೇಣಿಯ ಆಭರಣಗಳ ಅತೀ ದೊಡ್ಡ ಸಂಗ್ರಹವಿದೆ. ಹಾಲ್‌ಮಾರ್ಕ್ ಪರಿಶುದ್ಧತೆಯ ಚಿನ್ನಾಭರಣ, ಐಜಿಐ ಪ್ರಮಾಣಿತ ಡೈಮಂಡ್ ಆಭರಣಗಳ ಪ್ರತ್ಯೇಕ ಸಂಗ್ರಹ ಸಹ ಇದೆ.

ಪರಿಶುದ್ಧ ಬೆಳ್ಳಿ ಆಭರಣ, ಪೂಜಾ ಸಾಮಗ್ರಿ, ಪ್ಲಾಟಿನಂ ಆಭರಣ, ಫ್ಯಾಷನ್, ಲೈಟ್‌ವೈಟ್, ಡೈಲಿ ವೇರ್, ಟ್ರೆಂಡಿ ಆಭರಣಗಳ ಅತೀ ದೊಡ್ಡ ಸಂಗ್ರಹ ಕೂಡ ಇದೆ. ಉದ್ಘಾಟನಾ ದಿನದಂದು ಶೋ ರೂಂಗೆ ಭೇಟಿ ನೀಡುವವರಿಗೆ ಉಚಿತ ಕೂಪನ್ ಡ್ರಾ ಮೂಲಕ ಆಯ್ಕೆಯಾದ ಅದೃಷ್ಟವಂತರಿಗೆ 1 ಲಕ್ಷ ರೂ.ಗಳ ಉಚಿತ ಪರ್ಚೇಸ್ ವೋಚರ್ ಗೆಲ್ಲುವ ಅವಕಾಶ ವಿದೆ ಎಂದು ಪ್ರಕಟಣೆ ತಿಳಿಸಿದೆ.

ನಾಳೆ ದಿ ಲಯನ್ ರೆಸ್ಟೋರೆಂಟ್ ಉದ್ಘಾಟನೆ



ಆರಾಧನಾ ರಾಮ್

ಮೈಸೂರು,ಸೆ.6(ಪಿಎಂ)– ಶ್ರೀರಾಂಪುರ 2ನೇ ಹಂತ ಬೆಮೆಲ್ ನಗರದ ಮಾನಂದವಾಡಿ ರಸ್ತೆಯಲ್ಲಿ ಸಜ್ಜುಗೊಂಡಿರುವ ದಿ ಲಯನ್ ರೆಸ್ಟೋರೆಂಟ್ ಅನ್ನು ಸೆ.8ರಂದು ಸಿನಿಮಾ ನಟಿ ಆರಾಧನಾ ರಾಮ್ ಉದ್ಘಾಟಿಸಲಿದ್ದಾರೆ.

ಅಂದು ಬೆಳಗ್ಗೆ 10.30ಕ್ಕೆ ನಡೆಯುವ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಶಾಸಕರಾದ ಜಿ.ಟಿ. ದೇವೇಗೌಡ, ತನ್ವೀರ್‌ಸೇಠ್, ಟಿ.ಎಸ್.ಶ್ರೀವತ್ಸ, ಮಾಜಿ ಸಂಸದ ಪ್ರತಾಪ್ ಸಿಂಹ, ಬಿಜೆಪಿ ಜಿಲ್ಲಾ ಕಾರ್ಯದರ್ಶಿ ಎಂ.ಜೆ.ಕಿರಣ್ ಗೌಡ ಪಾಲ್ಗೊಳ್ಳಲಿದ್ದಾರೆ. ವೆಜ್ ಮತ್ತು ನಾನ್‌ವೆಜ್ ಸೇರಿದಂತೆ 500ಕ್ಕೂ ಹೆಚ್ಚು ಬಗೆಯ ತಿನಿಸುಗಳು ಇಲ್ಲಿ ಲಭ್ಯವಾಗಲಿವೆ. ಅಲ್ಲದೆ, ಚೈನೀಸ್, ನಾರ್ಥ್ ಇಂಡಿಯನ್, ತಂದೂರಿ ದೊರೆಯಲಿದ್ದು, ಕಾಂಟಿನೆಂಟಲ್, ಮಲ್ಟಿ–ಕ್ಯುಸಿನ್ ಡಿಲೈಟ್ಸ್ ಹಾಗೂ ಬ್ಯಾಂಕ್ವೆಟ್ ಹಾಲ್ ಸೌಲಭ್ಯಗಳು ಇಲ್ಲಿ ಲಭ್ಯವಿವೆ ಎಂದು ಪ್ರಕಟಣೆ ತಿಳಿಸಿದೆ.

ಎನ್‌ಡಿಎ ಮೈತ್ರಿಕೂಟದ ತೆಕ್ಕೆಗೆ ಬನ್ನೂರು ಪುರಸಭೆ

ಅಧ್ಯಕ್ಷರಾಗಿ ಕೃಷ್ಣೇಗೌಡ, ಉಪಾಧ್ಯಕ್ಷೆಯಾಗಿ ನಾಗರತ್ನ ಅವಿರೋಧ ಆಯ್ಕೆ



ಬನ್ನೂರು ಪುರಸಭೆ ನೂತನ ಅಧ್ಯಕ್ಷ ಕೃಷ್ಣೇಗೌಡ, ಉಪಾಧ್ಯಕ್ಷೆ ನಾಗರತ್ನ ಅವರನ್ನು ಸಂಸದ ಯದುವೀರ್, ಮಾಜಿ ಶಾಸಕ ಎಂ.ಅಶ್ವಿನ್ ಕುಮಾರ್ ಅಭಿನಂದಿಸಿದರು.

ತಿ.ನರಸೀಪುರ, ಸೆ.6– ಬನ್ನೂರು ಪುರಸಭೆ ಅಧಿಕಾರವನ್ನು ತನ್ನ ತೆಕ್ಕೆಗೆ ಹಾಕಿಕೊಳ್ಳಲು ಎನ್‌ಡಿಎ ಮೈತ್ರಿಕೂಟ ಯಶಸ್ವಿಯಾಗಿದ್ದು, ನೂತನ ಅಧ್ಯಕ್ಷರಾಗಿ ಜೆಡಿಎಸ್‌ನ ಕೃಷ್ಣೇಗೌಡ ಹಾಗೂ ಉಪಾಧ್ಯಕ್ಷೆಯಾಗಿ ಬಿಜೆಪಿಯ ನಾಗರತ್ನ ಅವಿರೋಧವಾಗಿ ಆಯ್ಕೆಯಾದರು.

ಹಿಂದಿನ ಅಧ್ಯಕ್ಷೆ ಭಾಗ್ಯಶ್ರೀ ಹಾಗೂ ಉಪಾಧ್ಯಕ್ಷೆ ಎಸ್.ಭಾಗ್ಯ ಅವರು ತಮ್ಮ ಅಧಿಕಾರ ಅವಧಿ ಪೂರೈಸಿದ ಹಿನ್ನೆಲೆಯಲ್ಲಿ ಅವರಿಂದ ತೆರವಾದ ಸ್ಥಾನಗಳಿಗೆ ಶುಕ್ರವಾರ ಚುನಾವಣೆ ನಡೆಯಿತು. ಹಿಂದುಳಿದ ವರ್ಗ 'ಬಿ'ಗೆ ಮೀಸಲಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಜೆಡಿಎಸ್‌ನ ಕೃಷ್ಣೇಗೌಡ ಹಾಗೂ ಬಿಸಿಎ ಮಹಿಳೆಗೆ ಮೀಸಲಾಗಿದ್ದ ಉಪಾಧ್ಯಕ್ಷ ಸ್ಥಾನಕ್ಕೆ ಬಿಜೆಪಿಯ ನಾಗರತ್ನ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ, ತಹಸೀಲ್ದಾರ್ ಟಿ.ಜಿ.ಸುರೇಶಾಚಾರ್ ಘೋಷಿಸಿದರು.

ಪುರಸಭೆಯ ಒಟ್ಟು 23 ಸದಸ್ಯರ ಪೈಕಿ 22 ಮಂದಿ ಚುನಾವಣೆಯಲ್ಲಿ ಭಾಗ ವಹಿಸಿದ್ದರು. ಬಿ.ಎಸ್.ಶೃತಿ ಗೈರಾಗಿದ್ದರು. ಅವಿರೋಧ ಆಯ್ಕೆಯಾಗುತ್ತಿದ್ದಂತೆಯೇ ಪುರಸಭೆ ಎದುರು ಜಮಾಯಿಸಿದ್ದ ಬಿಜೆಪಿ, ಜೆಡಿಎಸ್ ಕಾರ್ಯಕರ್ತರು, ಮುಖಂಡರು ಪಟಾಕಿ ಸಿಡಿಸಿ ಸಂಭ್ರಮಿಸಿದರು. ನೂತನ ಅಧ್ಯಕ್ಷ ಕೃಷ್ಣೇಗೌಡರಿಗೆ ಜೆಡಿಎಸ್ ಕಾರ್ಯಕರ್ತರು ಮೂಸಂಬಿ ಹಾರ ಹಾಕಿ ತೆರೆದ ವಾಹನದಲ್ಲಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಿ ಸಂಭ್ರಮಿಸಿದರು.

ನೂತನ ಅಧ್ಯಕ್ಷ ಕೃಷ್ಣೇಗೌಡ ಮಾತನಾಡಿ, ಸದಸ್ಯರು ನನ್ನ ಮೇಲೆ ನಂಬಿಕೆ ಇಟ್ಟು ಅಧ್ಯಕ್ಷ ಸ್ಥಾನ ನೀಡಿದ್ದಾರೆ. ಪುರಸಭೆ ಏಳಿಗೆಗೆ ಶಕ್ತಿಮೀರಿ ಶ್ರಮಿಸುವ ಮೂಲಕ ನನ್ನ ಮೇಲೆ ಇಟ್ಟಿರುವ ನಂಬಿಕೆ ಉಳಿಸಿಕೊಳ್ಳಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆ. ಪಟ್ಟಣದ ಎಲ್ಲಾ ವಾರ್ಡ್‌ನ ಮೂಲ ಸೌಕರ್ಯಕ್ಕೆ ಹೆಚ್ಚಿನ ಆದ್ಯತೆ ನೀಡುವ ಮೂಲಕ ಮಾದರಿ ಪುರಸಭೆ ಮಾಡಲು ಶ್ರಮಿಸುತ್ತೇನೆ ಎಂದರು.

ಮಾದರಿ ಪುರಸಭೆ ಮಾಡಲು ಶ್ರಮಿಸಿ: ಮಾಜಿ ಶಾಸಕ ಅಶ್ವಿನ್ ಕುಮಾರ್ ಮಾತನಾಡಿ, ಜೆಡಿಎಸ್–ಬಿಜೆಪಿ ಸದಸ್ಯರು ಒಗ್ಗಟ್ಟು ಪ್ರದರ್ಶಿಸಿ ಎನ್‌ಡಿಎ ಮೈತ್ರಿ ಸುಭದ್ರಗೊಳಿಸಲು ಮತ್ತು ಬನ್ನೂರು ಪುರಸಭೆ ಆಡಳಿತ ಯಂತ್ರ ಸರಿಪಡಿಸಲು ನಮ್ಮ ಅಭ್ಯರ್ಥಿಗಳಿಗೆ ಅಧಿಕಾರ ನೀಡಿದ್ದಾರೆ. ಎರಡೂ ಪಕ್ಷದ ಅಭ್ಯರ್ಥಿಗಳು ಯಾವುದೇ ಆಮಿಷಕ್ಕೆ ಒಳಗಾಗದೇ ಪ್ರಾಮಾಣಿಕವಾಗಿ ಮೈತ್ರಿಕೂಟಕ್ಕೆ ಜಯ ನೀಡಿದ್ದಾರೆ. ಪುರಸಭೆಯಲ್ಲಿ 14 ತಿಂಗಳ ಅವಕಾಶ ಸಿಕ್ಕಿದೆ. ಸಿಕ್ಕಿರುವ ಅವಕಾಶವನ್ನು ನೂತನ ಅಧ್ಯಕ್ಷ–ಉಪಾಧ್ಯಕ್ಷರು ಸದ್ಬಳಕೆ ಮಾಡಿಕೊಳ್ಳುವ ಮೂಲಕ ಪುರಸಭೆಯನ್ನು ಮಾದರಿ ಪುರಸಭೆ ಮಾಡಲು ಶ್ರಮವಹಿಸಬೇಕೆಂದು ಸಲಹೆ ನೀಡಿದರು.

ಮೈಸೂರು ಜಿಲ್ಲೆಗೆ ಪ್ರಥಮ: ಮೈಸೂರು ಜಿಲ್ಲೆಯಲ್ಲಿ ಇದೇ ಪ್ರಥಮ ಬಾರಿ ಬಿಜೆಪಿ–ಜೆಡಿಎಸ್ ಮೈತ್ರಿ ಬನ್ನೂರು ಪುರಸಭೆಯಲ್ಲಿ ಯಶಸ್ವಿಯಾಗಿದ್ದು, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ಕೈಬಲ ಪಡಿಸಲು ಇದು ಮೊದಲ ಹೆಜ್ಜೆಯಾಗಿದೆ. ಇನ್ನು ಮುಂದೆ ನಡೆಯುವ ಚುನಾವಣೆಗಳಲ್ಲಿ ಬಿಜೆಪಿ ಜೆಡಿಎಸ್‌ಗೆ ಜಯವಾಗಲಿದೆ ಎಂದು ಮೈಸೂರು ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ತಿಳಿಸಿದರು.

ಈ ವೇಳೆ ನಿಕಟಪೂರ್ವ ಅಧ್ಯಕ್ಷೆ ಭಾಗ್ಯಶ್ರೀ, ಉಪಾಧ್ಯಕ್ಷೆ ಎಸ್.ಭಾಗ್ಯ, ಸದಸ್ಯರಾದ ಎಂ.ಕೆ.ಮಹೇಶ್, ಬಿ.ಕೆ.ಆನಂದ್, ಎಂ.ಆರ್.ಸೌಮ್ಯರಾಣಿ, ನಂಜುಂಡಸ್ವಾಮಿ, ಬಿ.ಆರ್.ಶ್ರೀನಿವಾಸ್, ಅನಂತಮೂರ್ತಿ, ಶೋಭಾ, ದಿವ್ಯ, ಫಿರ್ದೋಸ್, ಫೀರ್ ಖಾನ್, ಬಿ.ಎಸ್.ಲೋಕಾಂಬಿಕ, ಪುಷ್ಪವತಿ, ಮೂರ್ತಿ, ಬಿ.ಕೆ.ಶಾಂತರಾಜು, ಶಿವಣ್ಣ, ಚೆಲುವರಾಜು, ಸಿ.ಹೆಚ್.ವಿಜಯಕುಮಾರ್, ಸಿ.ಸಿ.ಸುರೇಶ್, ಟೌನ್ ಅಧ್ಯಕ್ಷ ಪ್ರಭಾಕರ್, ಜೆಡಿಎಸ್ ಕ್ಷೇತ್ರಾಧ್ಯಕ್ಷ ಚಿನ್ನಸ್ವಾಮಿ, ಒಕ್ಕಲಿಗರ ಸಮಾಜದ ಹಿರಿಯ ಮುಖಂಡ ವೈ.ಎಸ್.ರಾಮಸ್ವಾಮಿ, ಮಾಜಿ ಜಿಪಂ ಸದಸ್ಯ ಜೈಪಾಲ್ ಭರಣಿ, ಟಿಎಪಿಎಂಎಸ್ ನಿರ್ದೇಶಕ ಪಿ.ವಾಸುದೇವ್, ಜಿಲ್ಲಾ ಉಪಾಧ್ಯಕ್ಷ ರಾಮಚಂದ್ರ, ಬಿ.ಎನ್.ಸುರೇಶ್, ಹೋಬಳಿ ಅಧ್ಯಕ್ಷ ಕುಮಾರಸ್ವಾಮಿ, ಕಾಳೇಗೌಡ, ಯುವ ಮುಖಂಡ ರವಿ, ಪೈಲ್ವಾನ್ ಚಂದ್ರು ಕಿಟ್ಟಪ್ಪ, ರಮೇಶಣ್ಣ, ತಿಮ್ಮೇಗೌಡ್ರು, ದೇವೇಗೌಡ್ರು, ಶಿವಕುಮಾರ್, ಜೈರಾಮ, ದೇವರಾಜು, ಮಾಜಿ ಎಪಿಎಂಸಿ ಅಧ್ಯಕ್ಷ ವೆಂಕಟೇಶ್, ಶಿವು, ಪೈಲ್ವಾನ್ ನಿಂಗಪ್ಪ, ಪೈಲ್ವಾನ್ ವೆಂಕಟೇಶ್ ಮತ್ತಿತರರಿದ್ದರು.

> “ಕೇಂದ್ರದಲ್ಲಿ ಎನ್‌ಡಿಎ ಸರ್ಕಾರ ಅಧಿಕಾರದಲ್ಲಿದೆ. ಭಾರತದ ಸರ್ವತೋಮುಖ ಅಭಿವೃದ್ಧಿಗಾಗಿ, ಸುಭದ್ರ, ಶ್ರೇಷ್ಠ ಹಾಗೂ ವಿಕಸಿತ ಭಾರತಕ್ಕಾಗಿ ಕೆಲಸ ಮಾಡುತ್ತಿದೆ. ರಾಜ್ಯದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ನಾಯಕತ್ವದಲ್ಲಿ ಮೈತ್ರಿಕೂಟದ ಕಾರ್ಯಕರ್ತರು ಪಕ್ಷ ಸಂಘಟಿಸುತ್ತಿದ್ದಾರೆ. ಅಲ್ಲದೇ ಜನರ ಹಿತರಕ್ಷಣೆಗಾಗಿ ಕೆಲಸ ಮಾಡಲಾಗುತ್ತಿದೆ. ಪ್ರಧಾನಿ ಮೋದಿ ಅವರ ನಾಯಕತ್ವದಲ್ಲಿ ನಾವೆಲ್ಲರೂ ವಿಕಸಿತ ಭಾರತಕ್ಕಾಗಿ ಕೆಲಸ ಮಾಡುತ್ತಿದ್ದೇವೆ. ಬಿಜೆಪಿ–ಜೆಡಿಎಸ್ ಕೈ ಜೋಡಿಸಿ ಕೆಲಸ ಮಾಡುತ್ತಿರುವುದು ಶ್ಲಾಘನೀಯ. ಮುಂದೆಯೂ ಇದೇ ರೀತಿ ಒಗ್ಗಟ್ಟಿನಿಂದ ಕೆಲಸ ಮಾಡಲು ಎಲ್ಲರೂ ಮುಂದಾಗಬೇಕಿದೆ. ಬನ್ನೂರು ಹಾಗೂ ನಮ್ಮ ಮನೆಗೂ ಯಾವಾಗಲೂ ಉತ್ತಮ ಸಂಬಂಧವಿದೆ. ಸಂಬಂಧದ ಮೂಲಕ ಒಳ್ಳೆಯ ಕೆಲಸ ಮಾಡಬೇಕು. ಬದುಕುವ ಸ್ಥಿತಿ ಉತ್ತಮಗೊಳಿಸಿಕೊಳ್ಳಬೇಕು.
> – ಯದುವೀರ್, ಸಂಸದ

ಕಾರ್ಮಿಕನಿಂದ ಸ್ನೇಹಿತನ ಹತ್ಯೆ

ನಂಜನಗೂಡು, ಸೆ.6– ತನ್ನ ಪತ್ನಿಯೊಂದಿಗೆ ಸಲುಗೆಯಿಂದ ಮಾತನಾಡುತ್ತಿದ್ದ ಸ್ನೇಹಿತನ ಮೇಲೆ ಸಂಶಯಗೊಂಡ ಕೂಲಿ ಕಾರ್ಮಿಕ ಆತನನ್ನು ಹತ್ಯೆ ಮಾಡಿದ ಘಟನೆ ತಾಲೂಕಿನ ಹುಣಸನಾಳು ಗ್ರಾಮದಲ್ಲಿ ಶುಕ್ರವಾರ ನಡೆದಿದ್ದು, ಹತ್ಯೆಯನ್ನು ತಡೆಯಲು ಬಂದ ಮತ್ತೋರ್ವ ಸ್ನೇಹಿತ ಗಂಭೀರವಾಗಿ ಗಾಯಗೊಂಡಿದ್ದಾನೆ.

ಗ್ರಾಮದ ನಿವಾಸಿ ಲೇ.ರಂಗಶೆಟ್ಟಿ ಎಂಬುವರ ಪುತ್ರ ರಂಗಸ್ವಾಮಿ(40) ಮೃತಪಟ್ಟವರು. ಹುಣಸನಾಳು ಗೇಟ್ ಸಮೀಪದ ಖಾಸಗಿ ಕಾರ್ಖಾನೆಯೊಂದರ ಗೋದಾಮಿನಲ್ಲಿ ಕೂಲಿ ಕಾರ್ಮಿಕರಾಗಿ ರಂಗಸ್ವಾಮಿ, ಮಹದೇವಶೆಟ್ಟಿ ಕೆಲಸ ಮಾಡುತ್ತಿದ್ದರು. ಶುಕ್ರವಾರ ಬೆಳಗ್ಗೆ ರಂಗಸ್ವಾಮಿ ಮೊಬೈಲ್‌ಗೆ ಕರೆ ಮಾಡಿದ ಮಹದೇವಶೆಟ್ಟಿ ನನ್ನ ಪತ್ನಿ ಜೊತೆ ಸಲುಗೆಯಿಂದ ಮಾತನಾಡುತ್ತಿದ್ದೀಯಾ ಎಂದು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾನೆ. ರಂಗಸ್ವಾಮಿ ಈ ಸಂಬಂಧ ತನ್ನ ಸಹೋದರನೊಡನೆ ಚರ್ಚಿಸಿ ಊರಿನ ಯಜಮಾನರಿಗೆ ಈ ಬಗ್ಗೆ ದೂರು ನೀಡಿದ್ದಾನೆ. ಬಳಿಕ ಬಹಿರ್ದೆಸೆಗೆ ತೆರಳುವುದಾಗಿ ತಿಳಿಸಿ ಮನೆಯಿಂದ ಹೊರಬಂದ ರಂಗಸ್ವಾಮಿಗೆ ಗ್ರಾಮದ ಮುಖ್ಯರಸ್ತೆಯಲ್ಲಿರುವ ಬೇಕರಿ ಸಮೀಪ ಮಹದೇವಶೆಟ್ಟಿ, ಆತನ ಮಗ ಪ್ರಜ್ವಲ್ ಹಾಗೂ ಆತನ ಅಣ್ಣನ ಮಗ ಗಣೇಶ ಎದುರಾಗಿ ಅವಾಚ್ಯ ಶಬ್ದಗಳಿಂದ ನಿಂದಿಸಿ, ಹಲ್ಲೆ ನಡೆಸಿ ಮಾರಕಾಸ್ತ್ರದಿಂದ ತಲೆಗೆ ಹೊಡೆದು ಹತ್ಯೆ ಮಾಡಿದ್ದಾರೆ. ಈ ಸಂದರ್ಭ ಜಗಳ ಬಿಡಿಸಲೆಂದು ಬಂದ ಶಿವನಂಜಶೆಟ್ಟಿ ಎಂಬುವರಿಗೂ ಗಂಭೀರ ಗಾಯಗಳಾಗಿದ್ದು, ಆರೋಪಿಗಳ ಮೇಲೆ ಕಾನೂನು ರೀತ್ಯ ಕ್ರಮ ವಹಿಸುವಂತೆ ಕೋರಿ ಮೃತನ ಸಹೋದರ ಮಹದೇವಶೆಟ್ಟಿ ಎಂಬುವರು ನಂಜನಗೂಡು ಗ್ರಾಮಾಂತರ ಠಾಣೆಗೆ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಶವದ ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ಹಸ್ತಾಂತರಿಸಿದರು.

ಬೆಟ್ಟದಪುರದಲ್ಲಿ ಸಂಭ್ರಮದ ಗೌರಿ ಹಬ್ಬ



ಸ್ವರ್ಣಗೌರಿ ಹಬ್ಬದ ಅಂಗವಾಗಿ ಶುಕ್ರವಾರ ಬೆಟ್ಟದಪುರದ ಶಿಡ್ಲು ಮಲ್ಲಿಕಾರ್ಜುನ ಸ್ವಾಮಿ ಹಾಗೂ ಪವಾಡ ಬಸವೇಶ್ವರ ದೇವಾಲಯದಲ್ಲಿ ಗೌರಿ ಪ್ರತಿಷ್ಠಾಪಿಸಿ ಪೂಜಿಸಲಾಯಿತು. ಗ್ರಾಮದ ಮಹಿಳೆಯರು ದೇವಾಲಯಕ್ಕೆ ಆಗಮಿಸಿ ಗೌರಿಗೆ ಬಾಗಿನ ಅರ್ಪಿಸಿದರು. ಬಳಿಕ ಬಾಗಿನ ಪರಸ್ಪರ ವಿನಿಮಯ ಮಾಡಿಕೊಂಡರು.

ಪಕ್ಷ ಸಂಘಟನೆಗೆ ಹೆಚ್ಚು ಒತ್ತು ನೀಡಲು ಕರೆ



ಪಿರಿಯಾಪಟ್ಟಣದಲ್ಲಿ ಬೂತ್ ಮಟ್ಟದ ಜೆಡಿಎಸ್ ಕಾರ್ಯಕರ್ತರ ಹಾಗೂ ಸದಸ್ಯತ್ವ ನೋಂದಣಿ ಕಾರ್ಯಕ್ರಮ ಉದ್ಘಾಟಿಸಯಿತು.

ಪಿರಿಯಾಪಟ್ಟಣ, ಸೆ6– ರಾಜಕೀಯವಾಗಿ ಸಂಘಟಿತರಾಗದಿದ್ದರೆ ವೈರಿಗಳಿಂದ ಸಂಕಷ್ಟಕ್ಕೀಡಾಗುತ್ತೀರಿ. ಆದ್ದರಿಂದ ಮುಂದಿನ ದಿನಗಳಲ್ಲಿ ಪಕ್ಷ ಸಂಘಟನೆಗೆ ಹೆಚ್ಚು ಒತ್ತು ನೀಡುವಂತೆ ಮಾಜಿ ಶಾಸಕ ಕೆ.ಮಹದೇವ್ ಕಾರ್ಯಕರ್ತರಿಗೆ ಕರೆ ನೀಡಿದರು.

ಪಟ್ಟಣದ ಮಂಜುನಾಥ ಸಮುದಾಯ ಭವನದಲ್ಲಿ ನಡೆದ ಬೂತ್ ಮಟ್ಟದ ಜೆಡಿಎಸ್ ಕಾರ್ಯಕರ್ತರ ಹಾಗೂ ಸದಸ್ಯತ್ವ ನೋಂದಣಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವಿಧಾನಸಭಾ ಚುನಾವಣೆ ಮುಗಿದು ಒಂದೂವರೆ ವರ್ಷವಾಗಿದ್ದು, ಅಧಿಕಾರ ಇದ್ದಾಗ ಇದ್ದ ಉತ್ಸಾಹ ಈಗ ನಮ್ಮ ಕಾರ್ಯಕರ್ತರಲ್ಲಿ ಇಲ್ಲ. ಇದು ಎಲ್ಲಾ ಪಕ್ಷದಲ್ಲೂ ಸಹಜ. ಆದರೆ ಕಾರ್ಯಕರ್ತರು ಕೈ ಕಟ್ಟಿ ಕುಳಿತುಕೊಳ್ಳಬಾರದು. ಪ್ರಸ್ತುತ ಸಚಿವರು ನನ್ನ ಮತ್ತು ನನ್ನ ಮಗನ ವಿರುದ್ಧ ಸಾಕಷ್ಟು ರಾಜಕೀಯ ಕುತಂತ್ರ ನಡೆಸುವ ಮೂಲಕ ನಮ್ಮ ಕುಟುಂಬವನ್ನು ಸಾಕಷ್ಟು ಸಂಕಷ್ಟಕ್ಕೀಡು ಮಾಡಿದ್ದಾರೆ. ಇದನ್ನೆಲ್ಲಾ ನಿಮಗೆ ಹೇಳಿ ನಿಮ್ಮನ್ನು ಎತ್ತಿ ಕಟ್ಟುವ ಕೆಲಸಕ್ಕೆ ನಾನು ಮುಂದಾಗುವುದಿಲ್ಲ. ಏಕೆಂದರೆ ಎಲ್ಲಾ ಕುತಂತ್ರ ತಡೆಯುವ ಶಕ್ತಿ ನಮಗಿದೆ. ಆದರೆ ಸಾಮಾನ್ಯ ಕಾರ್ಯಕರ್ತರಾದ ನಿಮಗೆ ಕಿರುಕುಳ ನೀಡಿದರೇ ನೀವು ತಾನೇ ಹೇಗೆ ಸಹಿಸಲು ಸಾಧ್ಯ ಎಂದ ಅವರು, ಈಗಾಗಲೇ ನನ್ನ ಬಳಿ ಸಾಕಷ್ಟು ಕಾರ್ಯಕರ್ತರು ಕಿರುಕುಳದ ಬಗ್ಗೆ ತಿಳಿಸಿದ್ದಾರೆ. ಇನ್ನೂ ಕೆಲವರು ಹೆದರಿಕೆಯಿಂದ ಅಥವಾ ಸ್ವಾಭಿಮಾನದಿಂದ ಹೇಳಿಕೊಳ್ಳುತ್ತಿಲ್ಲ. ಯಾವುದೇ ಕಾರ್ಯಕರ್ತರ ಮೇಲೆ ದಬ್ಬಾಳಿಕೆ ನಡೆದರೆ ನಾನು ಸಹಿಸುವುದಿಲ್ಲ. ಅವರಿಗೆ ನನ್ನ ಮನೆ ಬಾಗಿಲು ಸದಾ ತೆರೆದಿರುತ್ತದೆ ಎಂದರು.

ತಾಲೂಕಿನ 235 ಬೂತ್‌ಗಳಲ್ಲಿ ಸಭೆ ಆಯೋಜಿಸುವ ಮೂಲಕ ಸದಸ್ಯತ್ವ ನೋಂದಣಿಗೆ ಚಾಲನೆ ನೀಡಬೇಕು ಎಂದರು. ಸಮಾರಂಭದಲ್ಲಿ ತಾಲೂಕು ಜೆಡಿಎಸ್ ಅಧ್ಯಕ್ಷ ಅಣ್ಣಯ್ಯ, ಮುಖಂಡರಾದ ಚಂದ್ರಶೇಖರಯ್ಯ, ಶಿವಣ್ಣ, ಕುಮಾರ್, ರಾಮು, ಹೆಚ್.ಡಿ.ರಾಜೇಂದ್ರ, ನಾಗೇಂದ್ರ, ಪಿ.ಎನ್.ವಿನೋದ್ ಕುಮಾರ್, ಪ್ರೀತಿ ಅರಸ್, ಮೈಲಾರಪ್ಪ, ನಾಗರಾಜೇಗೌಡ ಸೇರಿದಂತೆ ನೂರಾರು ಮುಖಂಡರು, ಕಾರ್ಯಕರ್ತರು ಹಾಜರಿದ್ದರು.

ಸರ್ಕಾರಿ ಜಾಗ ಒತ್ತುವರಿ ಶೀಘ್ರ ತೆರವು: ಶಾಸಕ ದರ್ಶನ್



ನಗರಸಭೆ ನೂತನ ಅಧ್ಯಕ್ಷ, ಉಪಾಧ್ಯಕ್ಷರನ್ನು ಸನ್ಮಾನಿಸಲಾಯಿತು.

ನಂಜನಗೂಡು, ಸೆ.6– ನಗರ ವ್ಯಾಪ್ತಿಯಲ್ಲಿ ಸರ್ಕಾರಿ ಜಾಗ ಒತ್ತುವರಿ ಮಾಡಿಕೊಂಡಿರುವ ಬಗ್ಗೆ ಸಾಕಷ್ಟು ದೂರುಗಳು ಬಂದಿದ್ದು, ಕಂದಾಯ ಇಲಾಖೆ ಸಚಿವರ ಆದೇಶದಂತೆ ಶೀಘ್ರ ಒತ್ತುವರಿ ತೆರವುಗೊಳಿಸುವಂತೆ ತಹಸೀಲ್ದಾರ್‌ಗೆ ಸೂಚಿಸಲಾಗಿದೆ ಎಂದು ಶಾಸಕ ದರ್ಶನ್ ತಿಳಿಸಿದರು.

ನಗರಸಭೆ ಕಚೇರಿಯಲ್ಲಿ ಶುಕ್ರವಾರ ನೂತನ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಅಧಿಕಾರ ಸ್ವೀಕಾರ ಸಮಾರಂಭದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಗರಸಭೆಯಲ್ಲಿ ಖಾತೆ ಬದಲಾವಣೆ ಹಾಗೂ ಇನ್ನಿತರ ಸೇವೆ ನೀಡುವಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆಯುತ್ತಿರುವ ಬಗ್ಗೆ ನನ್ನ ಗಮನಕ್ಕೆ ಬಂದಿದೆ. ಈ ವಿಚಾರವಾಗಿ ಅಧಿಕಾರಿಗಳಿಗೆ ಜನಸ್ನೇಹಿಯಾಗಿ, ಮಧ್ಯವರ್ತಿಗಳಿಗೆ ಅವಕಾಶ ನೀಡದೆ, ಲಂಚಕ್ಕೆ ಎಡೆ ಮಾಡಿಕೊಡದಂತೆ ನಡೆದುಕೊಳ್ಳುವಂತೆ, ಸಾಧ್ಯವಾಗದಿದ್ದರೆ ಜಾಗ ಖಾಲಿ ಮಾಡುವಂತೆ ಎಚ್ಚರಿಕೆ ನೀಡಲಾಗಿದೆ. ನೂತನ ಅಧ್ಯಕ್ಷ ಶ್ರೀಕಂಠಸ್ವಾಮಿ ಕಟ್ಟುನಿಟ್ಟಿನ ಕ್ರಮವಹಿಸುತ್ತಾರೆ ಎಂಬ ಭರವಸೆ ಇದೆ. ಇನ್ನು ಮುಂದೆ ಸಾರ್ವಜನಿಕ ಸೇವೆಗಳು ದೂರುಗಳಿಲ್ಲದಂತೆ ನಡೆಯುತ್ತವೆ ಎಂದರು.

ನಗರದ ಒಳಚರಂಡಿ ಯೋಜನೆಗೆ ಮತ್ತೆ 21 ಕೋಟಿ ಅನುದಾನ ನೀಡಲಾಗಿದ್ದು, ಈ ವರ್ಷದ ಅಂತ್ಯಕ್ಕೆ ಕಾಮಗಾರಿ ಪೂರ್ಣಗೊಳ್ಳಲಿದೆ. ಒಳ ಚರಂಡಿಯ ಕೊಳಚೆ ನೀರನ್ನು ಅರಸನ ಕೆರೆಗೆ ಬಿಡುವಂತೆ ಯೋಜನೆ ಸಿದ್ಧಪಡಿಸಲಾಗಿತ್ತು ಆದರೆ ಕೊಳಚೆ ನೀರನ್ನು ಆಧುನಿಕ ತಂತ್ರಜ್ಞಾನದಿಂದ ಶುದ್ಧೀಕರಿಸುತ್ತಿರುವುದರಿಂದ ಆ ನೀರು ಕೃಷಿಗೆ ಯೋಗ್ಯವಾಗಿದೆ ಎಂಬ ವರದಿ ಬಂದಿದೆ. ಹೀಗಾಗಿ ಆ ಭಾಗದಲ್ಲಿ 15 ಎಕರೆ ಖಾಸಗಿ ಜಮೀನು ಖರೀದಿಸಿ, ನೀರನ್ನು ಸಂಗ್ರಹಿಸಿ ಕೃಷಿ ಜಮೀನುಗಳಿಗೆ ನೀರನ್ನು ಕೊಡುವ ಬಗ್ಗೆ ಯೋಜಿಸಲಾಗುತ್ತಿದೆ ನೀರು ಪೋಲಾಗದೆ ಕೃಷಿಗೆ ಬಳಕೆಯಾಗಲಿದೆ ಎಂದರು.

ಈ ವೇಳೆ ನಗರಸಭೆ ಅಧ್ಯಕ್ಷ ಶ್ರೀಕಂಠಸ್ವಾಮಿ, ಉಪಾಧ್ಯಕ್ಷೆ ರೆಹಾನಾಭಾನು, ಸದಸ್ಯರಾದ ಪ್ರದೀಪ್ ಕುಮಾರ್, ಗಾಯಿತ್ರಿ, ಮಹೇಶ್, ಗಂಗಾಧರ್, ಸಿದ್ದಿಕ್ ಅಹಮ್ಮದ್, ಯೋಗೇಶ್, ಮುಖಂಡರಾದ ಕಳಲೆ ಕೇಶವಮೂರ್ತಿ, ನಗರ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್, ಅಶೋಕ್ ಉಪಸ್ಥಿತರಿದ್ದರು.

ಹುಸೇನಪುರ, ಮನುಗನಹಳ್ಳಿಯಲ್ಲಿ ಪ್ರಗತಿ ಪರಿಶೀಲನಾ ಸಭೆ



ಹುಸೇನಪುರ ಮತ್ತು ಮನುಗನಹಳ್ಳಿಯಲ್ಲಿ ಜಿಪಂ ಸಿಇಓ ಗಾಯತ್ರಿ ಪರಿಶೀಲನೆ ನಡೆಸಿದರು

ಹುಣಸೂರು, ಸೆ.6– ಗ್ರಾಪಂ ಪಕ್ಕದಲ್ಲಿರುವ ಅಂಗನವಾಡಿ ಶೌಚಾಲಯ ರಿಪೇರಿ, ಪೂರೈಕೆಯಾಗುವ ಆಹಾರ ಸರಬರಾಜಿನ ಕಡತಗಳ ನಿರ್ವಹಣೆ ಹಾಗೂ ಮಕ್ಕಳಿಗೆ ಹೆಚ್ಚಿನ ಚಟುವಟಿಕೆ ಕೈಗೊಳ್ಳಲು ಕ್ರಮ ವಹಿಸುವಂತೆ ಜಿಪಂ ಸಿಇಓ ಕೆ.ಎಂ.ಗಾಯತ್ರಿ ತಾಕೀತು ಮಾಡಿದರು.

ತಾಲೂಕಿನ ಹುಸೇನಪುರ ಮತ್ತು ಮನುಗನಹಳ್ಳಿ ಗ್ರಾಪಂಗೆ ಭೇಟಿ ನೀಡಿ ಅವರು, ಸರ್ಕಾರದಿಂದ ನೀಡುವ ಅನುದಾನದ ಸದ್ಬಳಕೆ ಕುರಿತು ವಿವಿಧ ಇಲಾಖೆ ಅಧಿಕಾರಿಗಳು, ಅಧ್ಯಕ್ಷರು, ಪಿಡಿಓ ಹಾಗೂ ಸದಸ್ಯರೊಂದಿಗೆ ಪ್ರಗತಿ ಪರಿಶೀಲನಾ ಸಭೆ ನಡೆಸಿದರು.

ಬಳಿಕ ಪಕ್ಕದಲ್ಲಿರುವ ಅಂಗನವಾಡಿಗೆ ಭೇಟಿ ನೀಡಿದ ವೇಳೆ ಶೌಚಾಲಯ ಅವ್ಯವಸ್ಥೆ, ಆಹಾರ ಪೂರೈಕೆ ಮತ್ತು ಆಹಾರ ವಿತರಣೆ ರಿಜಿಸ್ಟರ್ ನಿರ್ವಹಣೆ ಪರಿಶೀಲಿಸಿದರು. ಜೊತೆಗೆ ಕೂಸಿನ ಮನೆಗೂ ಭೇಟಿ ನೀಡಿ ಕಂಡು ಬಂದ ಸಮಸ್ಯೆಗಳಿಗೆ ಪರಿಹಾರ ಒದಗಿಸುವಂತೆ ಪಿಡಿಓಗೆ ಸೂಚಿಸಿದರು.

ಇದಕ್ಕೂ ಮುನ್ನಾ ಸಭೆಯಲ್ಲಿ ನರೇಗಾ ಯೋಜನೆಯಡಿ ಪ್ರಸಕ್ತ ಸಾಲಿನಲ್ಲಿ ಅನುಷ್ಠಾನಗೊಳ್ಳುವ ಕಾಮಗಾರಿ ಕುರಿತು ಚರ್ಚಿಸಲಾಯಿತು. ಅಲ್ಲದೇ ಕ್ರಿಯಾ ಯೋಜನೆಯಲ್ಲಿನ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕ್ರಮ ವಹಿಸುವಂತೆ ತಿಳಿಸಿದರು.

ಈ ವೇಳೆ ತಾಪಂ ಇಓ ಹೊಂಗಯ್ಯ, ಕೆಪಿಆರ್‌ಇಡಿ ಇಲಾಖೆ ಜಿಲ್ಲಾ ಕಾರ್ಯನಿರ್ವಾಹಕ ಅಭಿಯಂತರ ರಂಜಿತ್ ಕುಮಾರ್, ಪಿಆರ್‌ಡಬ್ಲ್ಯೂ ಇಲಾಖೆ ಮಹಮ್ಮದ್ ಖಲೀಂ, ಎಇಇ ಪುಟ್ಟನಾಗರಾಜು, ಜೆಇ ಸಚಿನ್, ಎಇ ಮಹೇಂದ್ರ, ನರೇಗಾ ಸಹಾಯಕ ನಿರ್ದೇಶಕ ಗಿರಿಧರ್.ಎಸ್, ಪಿಡಿಓಗಳಾದ ಛಾಯಾ, ಸಂತೋಷ್, ನರೇಗಾ ಇಂಜಿನಿಯರ್, ಗ್ರಾಪಂ ಸದಸ್ಯರು, ಕಾರ್ಯದರ್ಶಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಶಿಕ್ಷಕರ ಪಾತ್ರ ಅಪಾರ



ಸರಗೂರು, ಸೆ.6– ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಶಿಕ್ಷಕರ ಪಾತ್ರ ಅಪಾರ ಎಂದು ತಹಸೀಲ್ದಾರ್ ರುಕಿಯಾ ಬೇಗಂ ತಿಳಿಸಿದರು.

ತಾಲೂಕಿನ ಆಗತ್ತೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಶಿಕ್ಷಕರ ದಿನಾಚರಣೆ, ಗುರುವಂದನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಾನು ಇದೇ ಶಾಲೆಯಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡಿದ್ದು, ಇದೀಗ ತಹಸೀಲ್ದಾರ್ ಆಗಿ ಕೆಲಸ ಮಾಡುತ್ತಿದ್ದೇನೆ. ಆಗತ್ತೂರು ಶಾಲೆ ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗೂ ಒತ್ತು ನೀಡಿ ತಾಲೂಕಿನಲ್ಲೇ ಉತ್ತಮ ಶಾಲೆ ಎಂದು ಹೆಸರು ಪಡೆದಿದೆ ಎಂದ ಅವರು, ಗುರುಗಳು ಶಾಲೆಯಲ್ಲಿ ಕಲಿಸುವ ಪಾಠ, ನೀಡುವ ಮಾರ್ಗದರ್ಶನ, ತೋರುವ ಜ್ಞಾನದ ಬೆಳಕು ಎಲ್ಲರ ಬದುಕಿಗೊಂದು ಭದ್ರ ಬುನಾದಿ ಹಾಕಿ ಕೊಡುತ್ತದೆ. ಸಾಧನೆ ಹಾದಿ ತೆರೆಯುತ್ತದೆ. ಅಲ್ಲದೇ ಉತ್ತಮ ಭವಿಷ್ಯ ರೂಪಿಸುತ್ತದೆ. ಜೀವನದ ಶಿಸ್ತು, ಜ್ಞಾನದ ಹಸಿವು ಆರಂಭವಾಗುವುದೇ ಶಿಕ್ಷಕರ ಒಡನಾಟದಿಂದ ಎಂದರು.

ಮುಖ್ಯ ಶಿಕ್ಷಕ ಸಿದ್ದರಾಜು ಮಾತನಾಡಿ ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಅವರು ರಾಷ್ಟ್ರಪತಿ, ಶಿಕ್ಷಕರಾಗಿ ಮಾಡಿರುವ ಸೇವೆ ಅನನ್ಯ. ಶಿಕ್ಷಣ ತಜ್ಞರಾಗಿ ಅವರು ಕೈಗೊಂಡ ಕ್ರಾಂತಿಕಾರಿ ನಿರ್ಣಯಗಳು ಶಿಕ್ಷಣ ಕ್ಷೇತ್ರದಲ್ಲಿ ಮಹತ್ತರ ಪಾತ್ರವಹಿಸಿದೆ. ಮಕ್ಕಳನ್ನು ತಿದ್ದಿ ಸರಿದಾರಿಗೆ ತಂದು ಉತ್ತಮ ಪ್ರಜೆಗಳಾಗಿಸುವ ಶಿಕ್ಷಕರನ್ನು ಗೌರವಿಸುವ ಸಂಸ್ಕಾರ ಇಂದಿನ ಮಕ್ಕಳು ಬೆಳೆಸಿಕೊಳ್ಳಬೇಕು ಎಂದರು.

ಜೀವಿಕ ಉಮೇಶ್ ಮಾತನಾಡಿದರು. ಇದೇ ವೇಳೆ ಮಕ್ಕಳು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು. ಸುಭಾಷ್ ಪವರ್ ಕಾರ್ಪೋರೇಷನ್ ಸಂಸ್ಥೆಯಿಂದ ನಲಿಕಲಿ ವಿದ್ಯಾರ್ಥಿಗಳಿಗೆ ಉಚಿತವಾಗಿ ಪೀಠೋಪಕರಣ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಸುಭಾಷ್ ಪವರ್ ಕಾರ್ಪೋರೇಷನ್‌ನ ಸೆಂದಿಲ್ ಕುಮಾರ್, ನಿರಂಜನ್, ಮಹೇಶ್, ಸತೀಶ್, ಶಿಕ್ಷಕರಾದ ಶಿವಣ್ಣ ರವಿ, ಅರುಣಾಕ್ಷಿ ಶಶಿಕಲಾ, ಸಿದ್ದರಾಜು, ಬಂಗಾರಯ್ಯ, ಲಕ್ಷ್ಮೀ, ಕುಮಾರಿ, ಜಯರಾಮ, ರೀಟಾ, ಸರಸ್ವತಿ, ಸುಮಿತ್ರಾ, ಸಣ್ಣ ತಿಮ್ಮನಾಯಕರನ್ನು ಸನ್ಮಾನಿಸಲಾಯಿತು.

ತಾರಕ ಜಲಾಶಯಕ್ಕೆ ಶಾಸಕ ಅನಿಲ್ ಬಾಗಿನ ಅರ್ಪಣೆ



ತಾರಕ ಜಲಾಶಯಕ್ಕೆ ಶಾಸಕ ಅನಿಲ್ ಬಾಗಿನ ಅರ್ಪಿಸಿದರು.

ಹೆಚ್.ಡಿ.ಕೋಟೆ, ಸೆ.6– ತಾರಕ ಜಲಾಶಯಕ್ಕೆ 3ನೇ ಬಾರಿ ಬಾಗಿನ ಅರ್ಪಿಸುವ ಸೌಭಾಗ್ಯ ನನಗೆ ದೊರೆತಿದೆ ಎಂದರೆ ತಾಲೂಕಿನ ಜನತೆಯ ಆರ್ಶೀವಾದ ಕಾರಣ ಎಂದು ಶಾಸಕ ಅನಿಲ್ ತಿಳಿಸಿದರು.

ತಾಲೂಕಿನ ತಾರಕ ಜಲಾಶಯಕ್ಕೆ ಶುಕ್ರವಾರ ಗೌರಿ ಹಬ್ಬದಂದು ಬಾಗಿನ ಅರ್ಪಿಸಿ, ತಾಲೂಕಿನ ಜನತೆಗೆ ಗೌರಿ, ಗಣೇಶ ಹಬ್ಬದ ಶುಭಾಶಯ ಕೋರಿ ಮಾತನಾಡಿದ ಅವರು, ತಾರಕ ಜಲಾನಯನ ಪ್ರದೇಶದಲ್ಲಿ ತಾಲೂಕು ವ್ಯಾಪ್ತಿಯಲ್ಲಿ 17400 ಎಕರೆ ಅಚ್ಚುಕಟ್ಟು ಪ್ರದೇಶವಿದ್ದು, ಈ ಭಾಗದ ರೈತರಿಗೆ ಯಾವುದೇ ತೊಂದರೆ ಆಗದಂತೆ ತಾರಕ ಎಡದಂಡೆ ಮತ್ತು ಬಲದಂಡೆ ನಾಲೆ ಹೂಳು ತೆಗೆಯಲು, ಗಿಡಗಂಟಿ ತೆರವುಗೊಳಿಸಲು 60 ಲಕ್ಷ ಬಿಡುಗಡೆಯಾಗಿದ್ದು, ಉಳಿದ ಕೆಲಸಕ್ಕೆ ಅಗತ್ಯವಿರುವ 25 ಲಕ್ಷ ರೂ.ಗಳನ್ನು ಬಿಡುಗಡೆ ಮಾಡುವಂತೆ ಮನವಿ ಮಾಡಲಾಗಿದೆ. ಅಲ್ಲದೇ ರೈತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಇನ್ನಿತರ ಕಾಮಗಾರಿಗಳಿಗೂ ಹೆಚ್ಚು ಒತ್ತು ನೀಡಿದ್ದೇನೆ ಎಂದರು.

ತಾರಕ ಜಲಾಶಯ ಮೇಲಿನ ಮತ್ತು ಅಪ್ರೋಚ್ ರಸ್ತೆಗಳ ನಿರ್ಮಾಣ, ಜಲಾಶಯ ವ್ಯಾಪ್ತಿಯಲ್ಲಿ ತಂತಿಬೇಲಿ, ಸಿಬ್ಬಂದಿ ಕೊಠಡಿ, ಶೌಚಾಲಯ ನಿರ್ಮಾಣ, ಜಲಾಶಯದ ಘಟಕಗಳಿಗೆ ಸುಣ್ಣ ಬಣ್ಣ, ಭದ್ರತಾ ವ್ಯವಸ್ಥೆಗೆ ಸಿಸಿ ಕ್ಯಾಮರಾ ಅಳವಡಿಕೆ, ಜಲಾಶಯದ ಮೇಲಿನ ರಸ್ತೆಗೆ ವಿದ್ಯುತ್ ಅಲಂಕಾರ ಸೇರಿದಂತೆ 7 ಕೋಟಿ ವೆಚ್ಚದ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿದ್ದೇನೆ ಎಂದರು.

ಕಬಿನಿ ಜಲಾಶಯಕ್ಕೆ ಬಾಗಿನ ಅರ್ಪಿಸಲು ಮುಖ್ಯಮಂತ್ರಿಗಳು ಆಗಮಿಸಿದ್ದ ವೇಳೆ ಕಬಿನಿ ಜಲಾಶಯದಲ್ಲಿ ಉದ್ಯಾನವನ ಹಾಗೂ 50ನೇ ವರ್ಷದ ಕಬಿನಿ ಉತ್ಸವ ಮಾಡಲು ಗಮನ ಸೆಳೆದಿದ್ದೇನೆ. ಕಬಿನ ಉತ್ಸವವನ್ನು ವಿಜೃಂಭಣೆಯಿಂದ ನಡೆಸಲಾಗುವುದು ಎಂದರು.

ಹೆಬ್ಬಾಳ ಜಲಾಶಯ ಅಭಿವೃದ್ಧಿ ಬಗ್ಗೆ ಈಗಾಗಲೇ ಚರ್ಚೆಯಾಗಿದ್ದು, ಯಾವ ಮಾದರಿ ಅಭಿವೃದ್ಧಿ ಮಾಡಬೇಕು ಎಂಬ ರೂಪುರೇಷೆ ತಯಾರಿಸಿ ಮುಂದಿನ ದಿನಗಳಲ್ಲಿ ಅಭಿವೃದ್ಧಿ ಕಾಮಗಾರಿ ಕೈಗೆತ್ತಿಕೊಳ್ಳಲಾಗುತ್ತದೆ ಎಂದರು.

ತಾಲೂಕಿನ ರಸ್ತೆಗಳನ್ನು ಹಂತ ಹಂತವಾಗಿ ಅಭಿವೃದ್ಧಿ ಪಡಿಸಲಾಗುತ್ತಿದ್ದು, ಉಳಿದ ರಸ್ತೆಗಳ ಅಭಿವೃದ್ಧಿಗಾಗಿ ಮುಖ್ಯಮಂತ್ರಿಗಳಿಗೆ ಹೆಚ್ಚಿನ ಅನುದಾನ ನೀಡುವಂತೆ ಮನವಿ ಮಾಡಿದ್ದೇನೆ ಎಂದರು.

ಈ ವೇಳೆ ತಹಸೀಲ್ದಾರ್ ಶ್ರೀನಿವಾಸ್, ಕಬಿನಿ ಕಾರ್ಯಪಾಲಕ ಅಭಿಯಂತರ ಚಂದ್ರಶೇಖರ್, ತಾರಕ ಎಇಇ ರಾಮೇಗೌಡ, ಕಬಿನಿ ಎಇಇ ಗಣೇಶ್, ಸರಗೂರು ಎಇಇ ಉಷಾ, ಸಹಾಯಕ ಇಂಜಿನಿಯರ್‌ಗಳಾದ ಮಂಜು, ನಟಶೇಖರ್, ಗೌಸಿಯಾ ತಾಜ್, ಅವೀಶ್, ಹಿರೇಹಳ್ಳಿ ಗ್ರಾಪಂ ಅಧ್ಯಕ್ಷ ಮಂಜು, ಉಪಾಧ್ಯಕ್ಷೆ ಇಂದ್ರಮ್ಮ, ಮುಖಂಡರಾದ ಸತೀಶ್‌ಗೌಡ, ಸೋಮೇಶ್, ಪರಶಿವಮೂರ್ತಿ, ರಾಜು, ಕಾಂಗ್ರೆಸ್ ವಕ್ತಾರ ಅಶೋಕ್, ಸೌಮ್ಯ, ಕಬಿನಿ ಮಹಾಮಂಡಳಿ ಉಪಾಧ್ಯ ಬಿ.ಸಿ.ಬಸಪ್ಪ, ಸರಗೂರು ತಾಲೂಕು ಕಸಾಪ ಅಧ್ಯಕ್ಷ ಕೆಂಡಗಣ್ಣ ಸ್ವಾಮಿ, ತಾಲೂಕು ನಾಯಕ ಸಮಾಜದ ಅಧ್ಯಕ್ಷ ಶಂಭುಲಿಂಗನಾಯಕ, ರಾಜು, ಸುರೇಶ್, ರಾಜನಾಯಕ, ನಾಗರಾಜು, ಅಂಕಪ್ಪ ಪುಟ್ಟರಾಜು, ರೇಖಾ, ರೈತಪರ್ವ ರಾಜ್ಯ ಕಾರ್ಯಾಧ್ಯಕ್ಷ ನವೀನ್ ಗೌಡ, ರೈತ ಮುಖಂಡ ಪಳನಿಸ್ವಾಮಿ, ಸಿದ್ದಲಿಂಗೇಗೌಡ, ಮಂಜುನಾಥ್, ಮಾದರಾಜು, ಪುಟ್ಟೇಗೌಡ, ಮಹೇಂದ್ರ, ನಾಗರಾಜು ಸೇರಿದಂತೆ ಇನ್ನಿತರರಿದ್ದರು.

> ತಾಲೂಕಿನ ದಮನಕಟ್ಟೆ ಸಫಾರಿಗೆ ಪ್ರವಾಸಿಗರು ಆಗಮಿಸುವುದರಿಂದ ತಾರಕ ಜಲಾಶಯದ ಹಿನ್ನೀರಿನಲ್ಲಿ ಪ್ರವಾಸಿಗರಿಗೆ ಇನ್ನೂ ಹೆಚ್ಚಿನ ಮನರಂಜನೆಗೋಸ್ಕರ ಬೋಟಿಂಗ್ ವ್ಯವಸ್ಥೆ ಮಾಡಲು ಈಗಾಗಲೇ ಸರ್ಕಾರ ಪ್ರಸ್ತಾವನೆ ಸಲ್ಲಿಸಲಾಗಿದೆ. – ಅನಿಲ್, ಶಾಸಕ.

ಅ.6ಕ್ಕೆ ಕೇಂದ್ರ ಸಚಿವ ಹೆಚ್‌ಡಿಕೆಗೆ ನಾಗರಿಕ ಸನ್ಮಾನ

ಪೂರ್ವಭಾವಿ ಸಭೆಯಲ್ಲಿ ಮಾಜಿ ಸಚಿವ ಸಾ.ರಾ.ಮಹೇಶ್



ಪೂರ್ವಭಾವಿ ಸಭೆಯನ್ನು ಮಾಜಿ ಸಚಿವ ಸಾ.ರಾ.ಮಹೇಶ್ ಉದ್ಘಾಟಿಸಿದರು.

ಕೆ.ಆರ್.ನಗರ, ಸೆ.6– ಪಟ್ಟಣದ ಪುರಸಭೆ ಬಯಲು ರಂಗಮಂದಿರದಲ್ಲಿ ಕ್ಷೇತ್ರದ ಜನತೆಯ ಪರವಾಗಿ ಅ.6ರಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ನಾಗರಿಕ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಮಾಜಿ ಸಚಿವ ಸಾ.ರಾ.ಮಹೇಶ್ ತಿಳಿಸಿದರು.

ಪಟ್ಟಣದ ಹೆಚ್.ಡಿ.ದೇವೇಗೌಡ ಸಮುದಾಯ ಭವನದಲ್ಲಿ ನಡೆದ ಹೆಚ್.ಡಿ.ಕುಮಾರಸ್ವಾಮಿ ಅಭಿನಂದನಾ ಪೂರ್ವಭಾವಿ ಮತ್ತು ಜೆಡಿಎಸ್ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ಕೆಆರ್.ನಗರ ಮಂಡ್ಯ ಲೋಕಸಭಾ ಕ್ಷೇತ್ರಕ್ಕೆ ಸೇರ್ಪಡೆಯಾದ ನಂತರ ಇದೇ ಮೊದಲ ಬಾರಿಗೆ ಕ್ಷೇತ್ರದ ಮತದಾರರು ನಮ್ಮ ಪಕ್ಷಕ್ಕೆ ಬಹುಮತ ನೀಡಿದ್ದು, ಇದಕ್ಕಾಗಿ ಅವರಿಗೆ ನಾವು ಅಭಾರಿಯಾಗಿದ್ದೇವೆ ಎಂದರು.

ಅಂದಿನ ಕಾರ್ಯಕ್ರಮದಲ್ಲಿ ಕ್ಷೇತ್ರ ವ್ಯಾಪ್ತಿಯ ಜೆಡಿಎಸ್ ಮುಖಂಡರು, ಕಾರ್ಯಕರ್ತರು ಮತ್ತು ಹೆಚ್.ಡಿ.ಕುಮಾರಸ್ವಾಮಿ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು. ಬೃಹತ್ ಸಮಾವೇಶದ ಮೂಲಕ ನಮ್ಮ ನಾಯಕರಿಗೆ ಗೌರವ ಸಲ್ಲಿಸೋಣ ಎಂದರು.

ಕಾರ್ಯಕ್ರಮದ ನಂತರ 25 ಸಾವಿರ ಮಂದಿಗೆ ಮಾಂಸಹಾರದ ಊಟ, ಸಸ್ಯಹಾರಿಗಳಿಗೂ ಪ್ರತ್ಯೇಕ ಭೋಜನ ವ್ಯವಸ್ಥೆ ಮಾಡಲಾಗುವುದು. ಹೀಗಾಗಿ ಎಲ್ಲರೂ ಕಾರ್ಯಕ್ರಮದ ಯಶಸ್ವಿಗೆ ಕೈ ಜೋಡಿಸಬೇಕು ಎಂದು ಮನವಿ ಮಾಡಿದರು.

ಕೆ.ಆರ್.ನಗರ ಕ್ಷೇತ್ರದ ಜನರ ಸಮಸ್ಯೆ ಆಲಿಸಲು ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಕಚೇರಿ ಆರಂಭಿಸಲಿದ್ದಾರೆ. ಹೀಗಾಗಿ ಜನತೆ ಇದನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು ಸದಸ್ಯತ್ವ ನೋಂದಣಿ ಅಭಿಯಾನದಲ್ಲಿ ಸಕ್ರೀಯವಾಗಿ ಪಾಲ್ಗೊಂಡು ಪಕ್ಷ ಸಂಘಟನೆ ಮಾಡಬೇಕು ಎಂದರು.


ಸಭೆಯಲ್ಲಿ ಜಿಪಂ ಮಾಜಿ ಉಪಾಧ್ಯಕ್ಷ ಎ.ಎಸ್.ಚನ್ನಬಸಪ್ಪ, ಮಾಜಿ ಸದಸ್ಯರಾದ ಅಮಿತ್.ವಿ.ದೇವರಹಟ್ಟಿ, ಎಂ.ಟಿ.ಕುಮಾರ್, ರಾಜ್ಯ ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್, ತಾಲೂಕು ಜೆಡಿಎಸ್ ಅಧ್ಯಕ್ಷ ಕುಮಾರ್, ಸಾಲಿಗ್ರಾಮ ತಾಲೂಕು ಅಧ್ಯಕ್ಷ ರಾಜಣ್ಣ, ಯುವ ಜೆಡಿಎಸ್ ಅಧ್ಯಕ್ಷ ಮಧು, ಮಾಜಿ ಅಧ್ಯಕ್ಷ ಹೆಚ್.ಆರ್.ಮಧುಚಂದ್ರ, ತಾಲೂಕು ಒಕ್ಕಲಿಗರ ಸಂಘದ ಅಧ್ಯಕ್ಷ ಅಣ್ಣೇಗೌಡ, ಮೈಮುಲ್ ನಿರ್ದೇಶಕ ಎ.ಟಿ.ಸೋಮಶೇಖರ್, ತಾಲೂಕು ಜೆಡಿಎಸ್ ವಕ್ತಾರ ಕೆ.ಎಲ್.ರಮೇಶ್, ಜಿಲ್ಲಾ ಜೆಡಿಎಸ್ ಮುಖಂಡ ಹೆಚ್.ಕೆ.ಮಧುಚಂದ್ರ, ಗ್ರಾಮಾಂತರ ಉಪಾಧ್ಯಕ್ಷ ಕುಚೇಲ, ಜೆಡಿಎಸ್ ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ದಾಕ್ಷಾಯಿಣಿ, ತಾಲೂಕು ಅಧ್ಯಕ್ಷೆ ರಾಜಲಕ್ಷ್ಮಿ, ನಗರ ಜೆಡಿಎಸ್ ಅಧ್ಯಕ್ಷ ಸಂತೋಷ್ ಗೌಡ, ನಗರ ಜೆಡಿಎಸ್ ಪ್ರಧಾನ ಕಾರ್ಯದರ್ಶಿ ರುದ್ರೇಶ್, ಪುರಸಭೆ ಸದಸ್ಯರಾದ ಉಮೇಶ್, ಕೆ.ಎಲ್.ಜಗದೀಶ್, ಸರೋಜ, ಜೆಡಿಎಸ್ ಮುಖಂಡ ನಾಗರಾಜು, ಅನೀಫ್‌ಗೌಡ, ಮಂಜು, ಪುಟ್ಟರಾಜು, ಬಾಲಾಜಿ ಗಣೇಶ್ ಮತ್ತಿತರರಿದ್ದರು.

ಎರಡನೇ ತಂಡದ ಗಜಪಡೆಯಲ್ಲಿ ಸುಗ್ರೀವ ಬಲುಭಾರ


ಸುಗ್ರೀವ– 5190 ಕೆಜಿ


ಹಿರಣ್ಯ–2930 ಕೆಜಿ.


ಮಹೇಂದ್ರ–4910 ಕೆಜಿ.


ಪ್ರಶಾಂತ–4875 ಕೆಜಿ.


ದೊಡ್ಡಹರವೆ ಲಕ್ಷ್ಮೀ– 3485 ಕೆಜಿ.

ಮೈಸೂರು,ಸೆ.6(ಎಂಟಿವೈ)– ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಎರಡನೇ ತಂಡದಲ್ಲಿ ಆಗಮಿಸಿರುವ 5 ಆನೆಗಳಿಗೆ ಶುಕ್ರವಾರ ತೂಕ ಮಾಡಿಸಲಾಯಿತು.

ದಸರಾ ಮಹೋತ್ಸವ ಗಜಪಡೆ ಸೇರಲು ಗುರುವಾರವಷ್ಟೇ ಎರಡನೇ ತಂಡದಲ್ಲಿ 5 ಆನೆಗಳು ಆಗಮಿಸಿ, ಮೈಸೂರು ಅರಮನೆ ಪ್ರವೇಶಿದ್ದವು. ನಿಯಮದಂತೆ ಅರಮನೆ ಪ್ರವೇಶಿಸಿದ ಮರು ದಿನವೇ ಆನೆಗಳ ತೂಕದ ಪರೀಕ್ಷೆ ನಡೆಸುವ ಪದ್ಧತಿ ಜಾರಿಯಲ್ಲಿದ್ದು, ಈ ಹಿನ್ನೆಲೆಯಲ್ಲಿ ಇಂದು ಬೆಳಗ್ಗೆ ಧನ್ವಂತ್ರಿ ರಸ್ತೆಯಲ್ಲಿರುವ ಸಾಯಿರಾಂ ಅಂಡ್ ಕೋ– ಎಲೆಕ್ಟ್ರಾನಿಕ್ ತೂಕದ ಕೇಂದ್ರಕ್ಕೆ ಕರೆತಂದು 5 ಆನೆಗಳಿಗೆ ತೂಕದ ಪರೀಕ್ಷೆ ನಡೆಸಲಾಯಿತು.

ಅರಮನೆಯಿಂದ ಇಂದು ಬೆಳಗ್ಗೆ ಮೊದಲ ತಂಡದ ಆನೆಗಳೊಂದಿಗೆ ಸಯ್ಯಾಜಿರಾವ್ ರಸ್ತೆವರೆಗೂ ಬಂದ ಎರಡನೇ ತಂಡದ ಆನೆಗಳು, ಧನ್ವಂತರಿ ರಸ್ತೆಯಲ್ಲಿ ಬೇರ್ಪಟ್ಟು ತೂಕದ ಯಂತ್ರದ ಕೇಂದ್ರಕ್ಕೆ ಸಾಗಿದವು. 5 ಆನೆಗಳಲ್ಲಿ ದುಬಾರೆ ಶಿಬಿರದ 42 ವರ್ಷದ ಸುಗ್ರೀವ 5190 ಕೆಜಿ, ಮತ್ತಿಗೋಡು ಶಿಬಿರ 41 ವರ್ಷದ ಮಹೇಂದ್ರ 4910 ಕೆಜಿ, ದುಬಾರೆ ಶಿಬಿರದ 51 ವರ್ಷದ ಪ್ರಶಾಂತ 4875 ಕೆಜಿ, ದೊಡ್ಡಹರವೆ ಶಿಬಿರದ 53 ವರ್ಷದ ಲಕ್ಷ್ಮೀ 3485 ಕೆಜಿ ಹಾಗೂ ಬಂಡೀಪುರ ಅರಣ್ಯದ ರಾಂಪುರ ಶಿಬಿರದ 47 ವರ್ಷದ ಹಿರಣ್ಯ 2930 ಕೆಜಿ ತೂಗಿದವು.

ಮೈಸೂರು ವನ್ಯಜೀವಿ ವಿಭಾಗದ ಡಿಸಿಎಫ್ ಡಾ.ಐ.ಬಿ.ಪ್ರಭುಗೌಡ, ಆರ್‌ಎಫ್‌ಓ ಸಂತೋಷ್ ಹೂಗಾರ್, ಪಶುವೈದ್ಯ ಡಾ.ಮುಜೀಬ್ ಸೇರಿದಂತೆ ಇನ್ನಿತರರು ಆನೆ ತೂಕದ ಪರೀಕ್ಷೆ ವೀಕ್ಷಿಸಿದರು. ಬಳಿಕ ಜೆ.ಕೆ.ಮೈದಾನ, ಚೆಲುವಾಂಬ ಆಸ್ಪತ್ರೆ ಬಳಿಯಿಂದ ಇರ್ವಿನ್ ರಸ್ತೆ ಮೂಲಕ ಆಯುರ್ವೇದ ಆಸ್ಪತ್ರೆ ವೃತ್ತಕ್ಕೆ ಬಂದು ಮೊದಲ ತಂಡದ ಗಜಪಡೆಯೊಂದಿಗೆ ಅರಮನೆಗೆ ವಾಪಸ್ಸು ಕರೆತರಲಾಯಿತು. ಮೊದಲ ತಂಡದಲ್ಲಿ ಆಗಮಿಸಿದ್ದ 9 ಆನೆಗಳಿಗೆ ಆ.24ರಂದು ತೂಕದ ಪರೀಕ್ಷೆ ನಡೆಸಿದ್ದನ್ನು ಸ್ಮರಿಸಬಹುದು.

ಎಲ್ಲಾ ಆನೆಗಳು ದಸರಾ ಮಹೋತ್ಸವಕ್ಕೆ ಸಜ್ಜಾಗುತ್ತಿವೆ

ಎರಡನೇ ತಂಡದಲ್ಲಿ ಆಗಮಿಸಿದ 5 ಆನೆಗಳಿಗೂ ತೂಕ ಮಾಡಿಸಲಾಗಿದೆ. ಎಲ್ಲಾ ಆನೆಗಳು ಆರೋಗ್ಯದಿಂದ ಕೂಡಿದ್ದು, ದಸರಾ ಮಹೋತ್ಸವಕ್ಕೆ ಸಜ್ಜಾಗುತ್ತಿವೆ. ಅಲ್ಲದೆ, ಆನೆಗಳ ಆರೋಗ್ಯದ ಮೇಲೆ ಹೆಚ್ಚಿನ ನಿಗಾ ವಹಿಸಲಾಗಿದೆ.

- ಡಾ.ಐ.ಬಿ.ಪ್ರಭುಗೌಡ, ಡಿಸಿಎಫ್, ವನ್ಯಜೀವಿ ವಿಭಾಗ

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಭೀಮಾ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕೃಷ್ಣಂ ಪ್ರಣಯ ಸಖಿ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಸ್ತ್ರೀ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಭೀಮಾ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಭೀಮಾ (ಕ)	4 ಪ್ರದರ್ಶನಗಳು
ರಾಜಕಮಲ್	
ಸರಿಪೋದಾ ಶನಿವಾರಂ (ತೆ)	4 ಪ್ರದರ್ಶನಗಳು
ಸಂಗಂ	
ಗ್ರೇಟೆಸ್ಟ್ ಆಫ್ ಆಲ್ ಟೈಮ್ (ತ)	4 ಪ್ರದರ್ಶನಗಳು
ಲಿಡೋ	
ಕರಿಯಾ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಭೀಮಾ (ಕ)	4 ಪ್ರದರ್ಶನಗಳು
ಪ್ರಭಾ	
ಅನ್ನ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ವಾರ್ಝಾ ಬಯೋಪಿಕ್ ಆಫ್ ಎ ಬಿಲಿಯನ್ ಬಾಯ್ಸ್ (ಮ): ಬೆ.10.20ಕ್ಕೆ, ಕೃಷ್ಣಂ ಪ್ರಣಯ ಸಖಿ (ಕ): ಮ.12.55ಕ್ಕೆ, ಸಂ.4ಕ್ಕೆ, ಸರಿಪೋದಾ ಶನಿವಾರಂ (ತೆ): ರಾ.7.10ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 2	ಪೆಪೆ (ಕ): ಬೆ.11ಕ್ಕೆ, ಸಂ.4.30ಕ್ಕೆ, ಸ್ತ್ರೀ 2 (ಹಿಂ): ಮ.1.30ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 3	ಅಫ್ರೇಡ್ (ಇಂ): ಬೆ.11.30ಕ್ಕೆ, ರಾ.10ಕ್ಕೆ, ಕೊಟೇಷನ್ ಗ್ಯಾಂಗ್ ಪಾರ್ಟ್ 1 (ತ): ಮ.1.30ಕ್ಕೆ, ಸರಿಪೋದಾ ಶನಿವಾರಂ (ತೆ): ಸಂ.4ಕ್ಕೆ, ಲಾಫಿಂಗ್ ಬುದ್ಧ (ಕ): ರಾ.7.20ಕ್ಕೆ.
ಸ್ಕ್ರೀನ್ 4	ಕೃಷ್ಣಂ ಪ್ರಣಯ ಸಖಿ (ತ): ಬೆ.10.05ಕ್ಕೆ, ರಾ.7.05ಕ್ಕೆ, ರಾ.10.10ಕ್ಕೆ, ಭೀಮಾ (ಕ): ಮ.1.15ಕ್ಕೆ, ಅಹೋ ವಿಕ್ರಮಾರ್ಕ (ತೆ): ಸಂ.4.15ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಕೃಷ್ಣಂ ಪ್ರಣಯ ಸಖಿ (ಕ): ಬೆ.10.30ಕ್ಕೆ, ಪೆಪೆ (ಕ): ಮ.1.35ಕ್ಕೆ, ಲಾಫಿಂಗ್ ಬುದ್ಧ (ಕ): ಸಂ.4.05ಕ್ಕೆ, ವಾರ್ಝಾ ಬಯೋಪಿಕ್ ಆಫ್ ಎ ಬಿಲಿಯನ್ ಬಾಯ್ಸ್ (ಮ): ಸಂ.6.45ಕ್ಕೆ, ಸ್ತ್ರೀ 2 (ಹಿಂ): ರಾ.9.15ಕ್ಕೆ.
ಸ್ಕ್ರೀನ್ 2	ಕೃಷ್ಣಂ ಪ್ರಣಯ ಸಖಿ (ಕ): ಮ.12.30ಕ್ಕೆ, ಸಂ.6.25ಕ್ಕೆ, ರಾ.9.30ಕ್ಕೆ, ಭೀಮಾ (ಕ): ಮ.3.35ಕ್ಕೆ.
ಸ್ಕ್ರೀನ್ 3	ಭೀಮಾ (ಕ): ಮ.12.45ಕ್ಕೆ, ಕೃಷ್ಣಂ ಪ್ರಣಯ ಸಖಿ (ಕ): ಮ.3.45ಕ್ಕೆ, ಸ್ತ್ರೀ 2 (ಹಿಂ): ಸಂ.6.45ಕ್ಕೆ, ದೇವಧೂತನ್ (ಮ): ರಾ.9.30ಕ್ಕೆ.
ಸ್ಕ್ರೀನ್ 4	ಪೆಪೆ (ಕ): ಬೆ.10.40ಕ್ಕೆ, ಮ.3.45ಕ್ಕೆ, ಅಹೋ ವಿಕ್ರಮಾರ್ಕ (ತೆ): ಮ.1.05ಕ್ಕೆ, ಸರಿಪೋದಾ ಶನಿವಾರಂ (ತೆ): ಸಂ.6.15ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರಿನ ನೆಕ್ಸಸ್ ಸೆಂಟರ್ ಸಿಟಿಯಲ್ಲಿ ಮೊದಲ 360^0 ಗುಮ್ಮಟದ ಅನುಭವ

nexus CENTRE CITY

ಮೈಸೂರು,ಸೆ.6–ಮೈಸೂರಿನ ನೆಕ್ಸಸ್ ಸೆಂಟರ್ ಸಿಟಿ ಮಾಲ್‌ನಲ್ಲಿ ಸೆ.3ರಿಂದ ಮೊದಲ ಬಾರಿಗೆ 360^0 ತಲ್ಲೀನಗೊಳಿಸುವ ಗುಮ್ಮಟದ ಅನುಭವವನ್ನು ನೀಡುತ್ತದೆ. ಇದು 1 ತಿಂಗಳ ಅವಧಿಯ ಅನುಭವವಾಗಿದ್ದು, ಎಲ್ಲಾ ವಯೋಮಾನದ ಜನರಿಗೆ ಇದು ತೆರೆದಿರುತ್ತದೆ. ಇದು ಟಿಕೆಟ್ ಪಡೆದ ಅನುಭವವಾಗಿದೆ ಮತ್ತು ಟಿಕೆಟ್‌ಗಳು Bookmyshow ಮತ್ತು Paytm Insider ನಲ್ಲಿ ಲಭ್ಯವಿರುತ್ತವೆ.

360^0 ಡೋಮ್ ಅಲ್ಲಾದ್ದೀನ್, ಅರೌಂಡ್ ದಿ ವರ್ಲ್ಡ್, ಬ್ಲ್ಯಾಕ್ ಹೋಲ್ ಮತ್ತು ಇನ್ನೂ ಅನೇಕ ರೋಮಾಂಚಕ ಪ್ರದರ್ಶನಗಳೊಂದಿಗೆ ತಲ್ಲೀನಗೊಳಿಸುವ ಮತ್ತು ಸೆರೆಹಿಡಿಯುವ ಅನುಭವವನ್ನು ನೀಡುತ್ತದೆ. ಪ್ರತಿ ಪ್ರದರ್ಶನವು ವೀಕ್ಷಕರನ್ನು ವಿವಿಧ ಪ್ರಪಂಚಗಳಿಗೆ ಸಾಗಿಸಲು ವಿನ್ಯಾಸಗೊಳಿಸಲಾದ 10–ನಿಮಿಷದ ದೃಶ್ಯಾವಳಿಯಾಗಿದ್ದು, ಎಲ್ಲಾ ವಯಸ್ಸಿನವರಿಗೆ ಮರೆಯಲಾಗದ ಅನುಭವವನ್ನು ನೀಡುತ್ತದೆ.

ಮೈಸೂರಿನ ನೆಕ್ಸಸ್ ಸೆಂಟರ್ ಸಿಟಿ ಮಾಲ್‌ನಲ್ಲಿ ಈ ಅದ್ಭುತ ಮನರಂಜನಾ ಅನುಭವದ ಭಾಗವಾಗಲು ಮತ್ತು ವಾಸ್ತವವನ್ನು ಮೀರಿದ ಪ್ರಯಾಣವನ್ನು ಪ್ರಾರಂಭಿಸುವ ಅವಕಾಶವನ್ನು ಕಳೆದುಕೊಳ್ಳಬೇಡಿ.

ಮುಡಾ ಹಗರಣದ ಮೂಲ ರೂವಾರಿ ನಟೇಶ್ ಅವರನ್ನು ಕೂಡಲೇ ಅಮಾನತು ಮಾಡಿ

ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್‌ಗೆ ರಘು ಕೌಟಿಲ್ಯ ಪತ್ರ

ಮೈಸೂರು, ಸೆ.6(ಬಿಎಲ್‌ಯು)– ಮುಡಾ ನಿವೇಶನ ಅಕ್ರಮ ಮಂಜೂರಾತಿ ಸಂಬಂಧ ಜಿ.ಟಿ.ದಿನೇಶ್ ಕುಮಾರ್ ಅಮಾನತು ಮಾಡಿದಂತೆ ಈ ಹಗರಣದ ಮೂಲ ರೂವಾರಿ, ಹಿಂದಿನ ಮತ್ತೊಬ್ಬ ಆಯುಕ್ತ ಡಿ.ಬಿ.ನಟೇಶ್ ಅವರನ್ನು ಕೂಡ ಅಮಾನತು ಮಾಡಬೇಕು ಎಂದು ಬಿಜೆಪಿ ಒಬಿಸಿ ಮೋರ್ಚಾದ ರಾಜ್ಯಾಧ್ಯಕ್ಷ ರಘು ಕೌಟಿಲ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಪತ್ರ ಬರೆದಿದ್ದಾರೆ.

ಮುಡಾದಲ್ಲಿ ನಡೆದಿರುವ ಅಕ್ರಮಗಳಿಗೆ ಸಂಬಂಧಿಸಿದಂತೆ ಸರ್ಕಾರವೇ ರಚನೆ ಮಾಡಿದ್ದ ತಾಂತ್ರಿಕ ಸಮಿತಿ ನವೆಂಬರ್ 3, 2023 ರಂದು ವರದಿ ನೀಡಿದೆ. ಶೇಕಡ 50:50 ಅನುಪಾತದಡಿ ನಿವೇಶನಗಳ ಅಕ್ರಮ ಮಂಜೂರಾತಿ ಸೇರಿದಂತೆ ಹಲವು ಹಗರಣಗಳ ಬಗ್ಗೆ ಸಮಿತಿ ಬೆಳಕು ಚೆಲ್ಲಿದೆ. ಮುಡಾ ಆಸ್ತಿ ಲೂಟಿ ಮಾಡಿ ಸಾವಿರಾರು ಕೋಟಿ ರೂಪಾಯಿಯನ್ನು ಸರ್ಕಾರಕ್ಕೆ ನಷ್ಟ ಉಂಟು ಮಾಡಿರುವ ಬಗ್ಗೆ ಸಮಿತಿ ಸಮಗ್ರ ವರದಿ ನೀಡಿದೆ ಎಂದು ತಿಳಿಸಿದ್ದಾರೆ.

ಈ ಪ್ರಕರಣದ ಸಂಬಂಧ ಈಗಾಗಲೇ ಹಿಂದಿನ ಆಯುಕ್ತ ಜಿ.ಟಿ.ದಿನೇಶ್ ಕುಮಾರ್ ಅವರನ್ನು ಸರ್ಕಾರ ಅಮಾನತು ಮಾಡಿದೆ. ಸುಮಾರು 10 ಸಾವಿರ ನಿವೇಶನಗಳ ಅಕ್ರಮ ಮಂಜೂರಾತಿ ಮೂಲಕ 10 ಸಾವಿರ ಕೋಟಿಗೂ ಹೆಚ್ಚು ಹಗರಣ ನಡೆದಿದೆ. ಆದರೆ ಈ ಹಗರಣದ ಮೂಲ ರೂವಾರಿ ಡಿ.ಬಿ.ನಟೇಶ್ ವಿರುದ್ಧ ಈ ತನಕ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ರಘು ಕೌಟಿಲ್ಯ ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಮುಡಾ ಸಭೆಯ ಗಮನಕ್ಕೆ ತರದೆ, ಸರ್ಕಾರದ ಅನುಮೋದನೆ ಕೂಡ ಪಡೆಯದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರಿಗೆ ಏಕಪಕ್ಷೀಯವಾಗಿ 14 ನಿವೇಶನಗಳ ಅಧಿಕೃತ ಜ್ಞಾಪನಾ ಪತ್ರವನ್ನು ಇದೇ ನಟೇಶ್ ನೀಡಿದ್ದಾರೆ ಎಂದು ಆರೋಪಿಸಿದ್ದಾರೆ.

14 ನಿವೇಶನಗಳ ಮಂಜೂರಾತಿ ಪತ್ರ ಹಾಗೂ ಕ್ರಯ ಪತ್ರವನ್ನು ನಿಯಮಬಾಹಿರವಾಗಿ ಪಾರ್ವತಿ ಅವರಿಗೆ ನೀಡಿದ್ದಾರೆ. ಇಲ್ಲಿಂದ ಆರಂಭವಾಗುವ ಇವರ ಲೂಟಿತನ ಕಳೆದ ಜೂನ್ ಕೊನೆ ತನಕ ಎಗ್ಗಿಲ್ಲದೆ ಸಾಗಿದೆ. ಮುಡಾ ಹಗರಣಗಳನ್ನು ಸಾಮಾಜಿಕ ಕಾರ್ಯಕರ್ತರು ಹಾಗೂ ಬಿಜೆಪಿ ಗಂಭೀರವಾಗಿ ಪರಿಗಣಿಸಿ ಹೋರಾಟ ನಡೆಸಿದ ಪರಿಣಾಮವಾಗಿ ಮುಡಾ ಹಗರಣ ಬಗೆದಷ್ಟು ಬಯಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಜಿಲ್ಲಾಧಿಕಾರಿಗಳು ನೀಡಿದ ನಿರ್ದೇಶನಗಳನ್ನು ಪಾಲಿಸದೆ ಸಾವಿರಾರು ನಿವೇಶನಗಳನ್ನು ಅಧಿಕಾರಿಗಳು ಹಾಗೂ ನೆಲಬಾಕ ಮಾಫಿಯಾ ನುಂಗಿ ಹಾಕಿದೆ. ಈ ಹಿನ್ನೆಲೆಯಲ್ಲಿ ಶೇಕಡ 50:50 ಅನುಪಾತದ ನಿವೇಶನ ಸೇರಿದಂತೆ ಅಕ್ರಮವಾಗಿ ಮಂಜೂರಾಗಿರುವ ಎಲ್ಲಾ ನಿವೇಶನಗಳನ್ನು ಕೂಡಲೇ ರದ್ದು ಮಾಡಿ ಅಧಿಸೂಚನೆ ಹೊರಡಿಸಬೇಕು ಎಂದು ರಘು ಕೌಟಿಲ್ಯ ಆಗ್ರಹಿಸಿದ್ದಾರೆ.

ಮುಡಾ ಹಗರಣದಲ್ಲಿ ಜಿ.ಟಿ.ದಿನೇಶ್ ಕುಮಾರ್ ಅಮಾನತು ಮಾಡಿದಂತೆ, ಹಿಂದಿನ ಮತ್ತೊಬ್ಬ ಆಯುಕ್ತ ಡಿ.ಬಿ.ನಟೇಶ್ ಅವರನ್ನು ಅಮಾನತು ಮಾಡಬೇಕು. ಇವರ ಜೊತೆಗೆ ಹಗರಣದ ಕೂಟದಲ್ಲಿ ಕೈ ಜೋಡಿಸಿರುವ ಮುಡಾ ಕಾರ್ಯದರ್ಶಿಗಳು, ವಿಶೇಷ ಭೂಸ್ವಾಧೀನಾಧಿಕಾರಿಗಳು, ತಹಶೀಲ್ದಾರ್, ಸರ್ವೇಯರ್‌ಗಳು ಸೇರಿದಂತೆ ಇತರರನ್ನು ಸೇವೆಯಿಂದ ಅಮಾನತು ಮಾಡಬೇಕು. ಜೊತೆಗೆ ಇವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು ಎಂದು ಒತ್ತಾಯಿಸಿದ್ದಾರೆ.

ಈ ವಿಚಾರದ ಬಗ್ಗೆ ವಿಳಂಬ ನೀತಿ ಅನುಸರಿಸಿದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರಿಗೆ ನಿವೇಶನಗಳನ್ನು ಬಳುವಳಿಯಾಗಿ ನೀಡಿದ ಅಧಿಕಾರಿಗಳನ್ನು ನೀವು ರಕ್ಷಿಸುತ್ತಿದ್ದೀರಾ ಎಂದು ನಿರ್ಣಯಿಸಿ ಮುಂದಿನ ಕಾನೂನು ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ.

ಇದೇ ಪತ್ರದ ಪ್ರತಿಯನ್ನು ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಎಂ.ದೀಪಾ ಹಾಗೂ ಅಪರ ಮುಖ್ಯ ಕಾರ್ಯದರ್ಶಿ ಉಮಾಶಂಕರ್ ಅವರಿಗೂ ಪತ್ರ ಕಳುಹಿಸಿದ್ದಾರೆ. ನಟೇಶ್ ಅವರನ್ನು ಕೂಡಲೇ ಅಮಾನತು ಮಾಡದಿದ್ದರೆ ನಿಮ್ಮ ವಿರುದ್ಧ ಕೂಡ ಕಾನೂನು ಹೋರಾಟ ಮಾಡಬೇಕಾಗುತ್ತದೆ ಎಂದು ರಘು ಕೌಟಿಲ್ಯ ಎಚ್ಚರಿಕೆ ನೀಡಿದ್ದಾರೆ.

ವೈಜ್ಞಾನಿಕ ಹಂಪ್ ಅಳವಡಿಸಲು ಜನಸ್ಪಂದನಾ ಫೌಂಡೇಷನ್ ಆಗ್ರಹ


ಮೈಸೂರಿನ ಪ್ರಮುಖ ರಸ್ತೆಗಳಿಗೆ ವೈಜ್ಞಾನಿಕ ಹಂಪ್ ಅಳವಡಿಸುವಂತೆ ಪಿ.ಜಿ.ಜನಸ್ಪಂದನ ಫೌಂಡೇಷನ್ ವತಿಯಿಂದ ನಗರ ಪಾಲಿಕೆ ಆಯುಕ್ತರಿಗೆ ಮನವಿ ಸಲ್ಲಿಸಲಾಯಿತು.

ಮೈಸೂರು, ಸೆ.6(ಜಿಎ)– ಮೈಸೂರಿನ ಪ್ರಮುಖ ರಸ್ತೆಗಳಿಗೆ ವೈಜ್ಞಾನಿಕ ಹಂಪ್ ಅಳವಡಿಸುವಂತೆ ಪಿ.ಜಿ.ಜನಸ್ಪಂದನ ಫೌಂಡೇಷನ್ ವತಿಯಿಂದ ನಗರ ಪಾಲಿಕೆ ಆಯುಕ್ತರಿಗೆ ಮನವಿ ಸಲ್ಲಿಸಲಾಯಿತು.

ನಂತರ ಫೌಂಡೇಷನ್‌ನ ಅಧ್ಯಕ್ಷ ಹಾಗೂ ಪಾಲಿಕೆ ಮಾಜಿ ಸದಸ್ಯರೂ ಆದ ಪಿ.ಪ್ರಶಾಂತ್‌ಗೌಡ ಮಾತನಾಡಿ, ಮೈಸೂರು ನಗರ ಪಾಲಿಕೆ ವ್ಯಾಪ್ತಿಗೆ ಬರುವ ಪ್ರಮುಖ ರಸ್ತೆಗಳಲ್ಲಿ ಅಪಘಾತಗಳು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದ್ದು, ಕಳೆದ ಹತ್ತು ದಿನಗಳಲ್ಲಿ ದೇವರಾಜ ಅರಸು ರಸ್ತೆಯಲ್ಲಿ ಇಬ್ಬರು ಸಾವನ್ನಪ್ಪಿದ್ದಾರೆ. ಕೃಷ್ಣ ವಿಲಾಸ ರಸ್ತೆ, ರಾಮ ವಿಲಾಸ ರಸ್ತೆ, ಎನ್‌ಎಸ್ ರಸ್ತೆ, ಜೆಎಲ್‌ಬಿ ರಸ್ತೆ ಹಾಗೂ ಮುಡಾ ವೃತ್ತ ಸೇರಿದಂತೆ ಎಲ್ಲಾ ಮುಖ್ಯ ರಸ್ತೆಗಳಲ್ಲಿ ಅತಿ ಹೆಚ್ಚು ಅಪಘಾತಗಳು ಸಂಭವಿಸುತ್ತಿರುವುದರಿಂದ ಈ ಮಾರ್ಗದಲ್ಲಿ ಸಂಚರಿಸಲು ಆತಂಕ ಪಡುವಂತಾಗಿದೆ ಎಂದರು.

ಈ ಹಿಂದೆ ನಾನು ಪಾಲಿಕೆ ಸದಸ್ಯನಾಗಿದ್ದ ಅವಧಿಯಲ್ಲಿ ಪೊಲೀಸ್ ಆಯುಕ್ತ, ಮೇಯರ್, ಶಾಸಕರು, ಎಂಎಲ್‌ಸಿ, ಎಂಪಿ ಮತ್ತು ಪಾಲಿಕೆ ಸದಸ್ಯರು ಟ್ರಾಫಿಕ್ ಸಮಸ್ಯೆ ಕುರಿತು ಕೌನ್ಸಿಲ್‌ನಲ್ಲಿ ಚರ್ಚಿಸಿ, ಅಭಿವೃದ್ಧಿಗೆ ಹಣ ಬಿಡುಗಡೆ ಮಾಡಿ ವಿವಿಧ ಕಾಮಗಾರಿಗಳನ್ನು ಮಾಡಲಾಗಿತ್ತು. ಆದರೆ, ಇತ್ತೀಚಿನ ದಿನಗಳಲ್ಲಿ ನಗರ ಪಾಲಿಕೆ ವತಿಯಿಂದ ಯಾವುದೇ ಸಹಕಾರ ದೊರೆಯುತ್ತಿಲ್ಲ. ಮಾನವೀಯತೆ ದೃಷ್ಟಿಯಿಂದ ಅಪಘಾತಗಳನ್ನು ತಡೆಗಟ್ಟಲು ಕೂಡಲೇ ಅವಶ್ಯಕ ಇರುವ ರಸ್ತೆಗಳಿಗೆ ವೈಜ್ಞಾನಿಕ ರಸ್ತೆ ದಿಬ್ಬ, ಬ್ಯಾರಿಕೇಡ್, ಸಿಸಿ ಕ್ಯಾಮರಾ ಇತರೆ ಅನುಕೂಲಗಳನ್ನು ಮಾಡುವಂತೆ ಮನವಿ ಸಲ್ಲಿಸಿದರು. ಈ ವೇಳೆ ವಕೀಲ ಗೋಪಿನಾಥ್, ಗುರುಪ್ರಸಾದ್ ಸ್ಕಂದ ಉಪಸ್ಥಿತರಿದ್ದರು.

ಪರಿಸರ ಸ್ನೇಹಿ ಗಣಪತಿ ಬಳಸಲು ಕರೆ


ಬೇರು ಭೂಮಿ ಮತ್ತು ಧೀರ ಭಗತ್ ರಾಯ್ ಚಲನಚಿತ್ರ ತಂಡವೂ ಪರಿಸರ ಸ್ನೇಹಿ ಗಣಪತಿ ಬಳಸುವಂತೆ ಸಂದೇಶ ಸಾರಿದರು.

ಮೈಸೂರು, ಸೆ.6(ಜಿಎ)– ಗೌರಿ–ಗಣೇಶ ಹಬ್ಬದ ಪ್ರಯುಕ್ತ ಬೇರು ಭೂಮಿ ಮತ್ತು ಧೀರ ಭಗತ್ ರಾಯ್ ಚಲನಚಿತ್ರ ತಂಡವೂ ವಿಭಿನ್ನ ಕಾರ್ಯಾಗಾರ ಮೂಲಕ ಪರಿಸರ ಸ್ನೇಹಿ ಗಣಪತಿ ಬಳಸುವಂತೆ ಸಂದೇಶ ಸಾರಿದರು.

ಮೈಸೂರಿನ ಜಿಲ್ಲೆಯ ಹೆಚ್.ಡಿ.ಕೋಟೆಯ ಸರಗೂರು ತಾಲೂಕಿನ ಜೆಎಸ್‌ಎಸ್ ಮಹಿಳಾ ಪದವಿ ಪೂರ್ವ ಕಾಲೇಜಿನಲ್ಲಿ ಬೇರು ಭೂಮಿ ಮತ್ತು ಧೀರ ಭಗತ್ ರಾಯ್ ಚಲನಚಿತ್ರದ ಸಹಯೋಗದಲ್ಲಿ ಏರ್ಪಡಿಸಿದ್ದ ಪರಿಸರ ಸ್ನೇಹಿ ಮಣ್ಣಿನ ಗಣೇಶನ ಮೂರ್ತಿಯನ್ನು ಮಾಡುವ ಕಾರ್ಯಾಗಾರ ಯಶಸ್ವಿಯಾಗಿ ನೆರವೇರಿತು. ಕಾಲೇಜಿನ ಸುಮಾರು 150 ವಿದ್ಯಾರ್ಥಿಗಳು ಭಾಗವಹಿಸಿ ವಿಶೇಷ ರೀತಿಯ ಸುಂದರ ಮಣ್ಣಿನ ಗಣೇಶನ ಮೂರ್ತಿಯನ್ನು ಮಾಡುವ ಮೂಲಕ ಈ ಕಾರ್ಯಕ್ರಮಕ್ಕೆ ಮೆರುಗನ್ನು ಹೆಚ್ಚಿಸಿದರು.

ವಿ. ನಂದಕುಮಾರ್‌ಗೆ ಪಿಎಚ್.ಡಿ



ಮೈಸೂರು, ಸೆ. 6– ಡಾ. ಕೆ. ವೆಂಕಟರಮಣನ್ ಅವರ ಮಾರ್ಗದರ್ಶನದಲ್ಲಿ ವಿ. ನಂದಕುಮಾರ್ ಅವರು ಸಂಶೋಧನೆ ನಡೆಸಿ ಸಾದರಪಡಿಸಿದ ನಾವೆಲ್ ಗ್ರಾಫಿಟಿಕ್ ಕಾರ್ಬನ್ ನೈಟ್ರೈಡ್ ಅಲಂಕೃತ ಲೋಹದ ಆಕ್ಸೈಡ್ ಆಧಾರಿತ ಟರ್ನರಿ ಹೈಬ್ರಿಡ್ ನ್ಯಾನೋಫ್ಲೂಯಿಡ್ಗಳ ಸಂಶ್ಲೇಷಣೆ ಮತ್ತು ಗುಣಲಕ್ಷಣಗಳು ಕುರಿತು ಮಹಾಪ್ರಬಂಧವನ್ನು ತಮಿಳುನಾಡಿನ ಶ್ರೀ ಚಂದ್ರಶೇಖರೇಂದ್ರ ಸರಸ್ವತಿ ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ವಕ್ಫ್ ಬೋರ್ಡ್ ತಿದ್ದುಪಡಿ ಮಸೂದೆ ವಿರೋಧಿಸಿ ಎಸ್‌ಡಿಪಿಐ ಪ್ರತಿಭಟನೆ



ವಕ್ಫ್ ಬೋರ್ಡ್ ತಿದ್ದುಪಡಿ ಮಸೂದೆ–2024 ವಿರೋಧಿಸಿ ಎಸ್‌ಡಿಪಿಐ ಪದಾಧಿಕಾರಿಗಳು ಶುಕ್ರವಾರ ಮೈಸೂರು–ಬೆಂಗಳೂರು ರಸ್ತೆಯ ಫೌಂಟೇನ್ ವೃತ್ತದ ಬಳಿ ಪ್ರತಿಭಟನೆ ನಡೆಸಿದರು.

ಮೈಸೂರು, ಸೆ6(ಎಸ್‌ಪಿಎನ್)– ವಕ್ಫ್ ಬೋರ್ಡ್ ತಿದ್ದುಪಡಿ ಮಸೂದೆ–2024ಕ್ಕೆ ಕೇಂದ್ರ ಸರ್ಕಾರ ತಿದ್ದುಪಡಿ ಮಾಡಬಾರದು ಎಂದು ಆಗ್ರಹಿಸಿ ಸೋಷಿಯಲ್ ಡೆಮಾಕ್ರೆಟಿಕ್ ಪಾರ್ಟಿ ಇಂಡಿಯಾ (ಎಸ್‌ಡಿಪಿಐ)ದ ಪದಾಧಿಕಾರಿಗಳು ಶುಕ್ರವಾರ ಮೈಸೂರು–ಬೆಂಗಳೂರು ರಸ್ತೆಯ ಫೌಂಟೇನ್ ವೃತ್ತದ ಬಳಿ ಪ್ರತಿಭಟನೆ ನಡೆಸಿದರು.

ಪ್ರತಿಭಟನೆ ನೇತೃತ್ವವನ್ನು ಎಸ್‌ಡಿಪಿಐ ಜಿಲ್ಲಾಧ್ಯಕ್ಷ ರಫಾತುಲ್ಲಾ ಖಾನ್ ವಹಿಸಿದ್ದು, ಕೇಂದ್ರದ ಎನ್‌ಡಿಎ ಸರ್ಕಾರದ ವಿರುದ್ಧ ವಿವಿಧ ಘೋಷಣೆಗಳನ್ನು ಕೂಗಿ, ವಕ್ಫ್ ಬೋರ್ಡ್ ತಿದ್ದುಪಡಿ ಮಸೂದೆ–2024ಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದರು.

ನಂತರ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಮಾತನಾಡಿ, ವಕ್ಫ್ ಬೋರ್ಡ್ ತಿದ್ದುಪಡಿ ಮಸೂದೆ–2024 ಅನ್ನು ವಿರೋಧಿಸಿ, ಎಸ್‌ಡಿಪಿಐ ದೇಶ್ಯಾದ್ಯಂತ ಪ್ರತಿಭಟನೆ ಮಾಡುತ್ತಿದೆ. ಆದರೆ, ವಕ್ಫ್ ಬೋರ್ಡ್ ಆಸ್ತಿ 20 ಕೋಟಿ ಭಾರತೀಯ ಮುಸ್ಲಿಂ ಸಮುದಾಯಕ್ಕೆ ಸೇರಿದ್ದು, ಈ ಕಾಯ್ದೆಗೆ ತಿದ್ದುಪಡಿ ತಂದರೆ, ಮುಸ್ಲಿಂ ಸಮುದಾಯ ಮತ್ತು ಸಂಘಟನೆಗಳು ವಿರೋಧ ಮಾಡಲ್ಲ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ತಪ್ಪು ತಿಳಿದುಕೊಂಡಿದ್ದಾರೆ.

ವಕ್ಫ್ ಬೋರ್ಡ್ ತಿದ್ದುಪಡಿ ಮಸೂದೆ–2024ರಲ್ಲಿ ಆಸ್ತಿ–ಪಾಸ್ತಿ ಸಂರಕ್ಷಣೆ ಮಾಡುವ ಜವಾಬ್ದಾರಿಯನ್ನು ಆಯಾಯ ಜಿಲ್ಲೆಯ ಜಿಲ್ಲಾಧಿಕಾರಿ ಹೊಂದಿರುತ್ತಾರೆ. ಆ ಜಿಲ್ಲಾಧಿಕಾರಿಗಳು ಆಯಾಯ ರಾಜ್ಯದ ಸರ್ಕಾರದ ಅಧೀನದಲ್ಲಿ ಕೆಲಸ ಮಾಡುತ್ತಾರೆ. ಅವರು ಸಮುದಾಯದ ಪರ ಕೆಲಸ ಮಾಡಲ್ಲ. ಹಾಗಾಗಿ ತಿದ್ದುಪಡಿ ಮಸೂದೆ ವಿರುದ್ಧ ಉತ್ತರ ಪ್ರದೇಶದ ಮಾಜಿ ಸಿಎಂ ಅಖಿಲೇಶ್ ಯಾದವ್, ಆಂಧ್ರಪ್ರದೇಶ ಸಿಎಂ ಚಂದ್ರಬಾಬು ನಾಯ್ಡು ಸೇರಿದಂತೆ ಇತರೆ ಜಾತ್ಯಾತೀತ ನಾಯಕರನ್ನು ಭೇಟಿ ಮಾಡಿ ಚರ್ಚಿಸಿದ್ದು, ನ್ಯಾಯಾಲಯದ ಮೂಲಕ ಹೋರಾಟಕ್ಕೂ ಸಿದ್ಧತೆ ನಡೆಯುತ್ತಿದೆ ಎಂದು ಹೇಳಿದರು.

ಮುಖಂಡರ ಮೌಲಾನಾ ನೂರುದ್ದೀನ್ ಫಾರೂಖಿಯಾ ಮಾತನಾಡಿ, ವಕ್ಫ್ ಬೋರ್ಡ್ ಮುಸ್ಲಿಂ ಸಮುದಾಯದ ಮಕ್ಕಳ ಏಳಿಗೆಗಾಗಿ ಇದೆ. ಇಲ್ಲಿಗೆ ಅನೇಕ ಮುಸ್ಲಿಂ ಸಮದಾಯದ ಮುಖಂಡರು ತಮ್ಮ ಆಸ್ತಿಯನ್ನು ದಾನ ಮಾಡಿದ್ದಾರೆ. ಇದನ್ನು ಉಳಿಸಿಕೊಳ್ಳಲು ನಾವು ಶತಾಯ–ಗತಾಯ ಹೋರಾಡುತ್ತೇವೆ. ವಕ್ಫ್ ಬೋರ್ಡ್ ಕಾಯ್ದೆಗೆ ತಿದ್ದುಪಡಿ ತಂದು ಹಿಂದೂಗಳನ್ನು ಸದಸ್ಯರನ್ನಾಗಿ ಮಾಡಬಹುದು ಎಂದು ಆತಂಕ ವ್ಯಕ್ತಪಡಿಸಿದ ಅವರು, ರಾಮಮಂದಿರ, ಶಬರಿಮಲೆ ದೇವಸ್ಥಾನಗಳಲ್ಲಿ ಮುಸ್ಲಿಂ ಸದಸ್ಯರನ್ನು ಏಕೆ ನೇಮಿಸಲ್ಲ ಎಂದು ಪ್ರಶ್ನಿಸಿದರು.

ಎಸ್‌ಡಿಪಿಐ ಮುಖಂಡ ಅಮ್ಜದ್ ಖಾನ್ ಮಾತನಾಡಿ, ಶ್ರೀರಂಗಪಟ್ಟಣದ ಶ್ರೀರಂಗ ದೇವಸ್ಥಾನಕ್ಕೆ ಬೆಂಗಳೂರು ಬಳಿ ವೃದ್ಧ ದಂಪತಿ ಎರಡು ಸಾವಿರ ಎಕರೆ ಭೂಮಿಯನ್ನು ದಾನವಾಗಿ ನೀಡಿದ್ದರು. ಇಂದು ಹುಡುಕಿದರೂ ಒಂದಿಂಚು ಜಮೀನು ಇಲ್ಲ. ಬೆಂಗಳೂರಿನಲ್ಲಿ ಒಕ್ಕಲಿಗರ ಸಂಘ ಇದೆ. ಆ ಸಂಘಕ್ಕೆ ನೂರಾರು ಕೋಟಿ ಬೆಲೆಬಾಳುವ ಆಸ್ತಿಯಿತ್ತು. ಈಗ ಅಲ್ಲಿಯೂ ಅಲ್ಲಿನ ಜಮೀನು ಕಬಳಿಕೆಯಾಗಿದೆ. ಹೀಗೆ ಸರ್ಕಾರ ಮತ್ತು ಮುಖಂಡರ ಕಪಿಮುಷ್ಠಿಯಲ್ಲಿರುವ ಎಲ್ಲಾ ಪ್ರಾಧಿಕಾರ, ಮಂಡಳಿಗಳ ವಶದಲ್ಲಿದ್ದ ಜಮೀನು ಅನ್ಯರ ಪಾಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಪ್ರತಿಭಟನೆಯಲ್ಲಿ ಮೊಹಮದ್ ಜಹೀರ್, ಎಂ.ಎನ್.ಫಿರ್ದೋಶ್, ಫರ್ದೀನ್ ಅಹಮದ್ ಸೇರಿದಂತೆ ಇತರೆ ಮುಖಂಡರಿದ್ದರು.

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಜನನ: 15-01-1937 ನಿಧನ: 26-08-2024

ಶ್ರೀ ಕುಳ್ಳೇಗೌಡ ರವರು

(ನಾಗರೀಕ ವೇದಿಕೆ ಕಾರ್ಯದರ್ಶಿ)

ನಂ.41/ಎ, 8ನೇ ಮುಖ್ಯರಸ್ತೆ, 13ನೇ ಅಡ್ಡರಸ್ತೆ, ಸರಸ್ವತಿಪುರಂ, ಮೈಸೂರು -570009 ವಾಸವಾಗಿರುವ

ಶ್ರೀ ಕೆ. ದಿನೇಶ್ ರವರು ಮಾಡುವ ವಿಜ್ಞಾಪನೆಗಳು

ದಿನಾಂಕ 26.08.2024ನೇ ಸೋಮವಾರ ನನ್ನ ಪೂಜ್ಯ ತಂದೆಯವರು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇನೆ. ತತ್ಸಂಬಂಧವಾದ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿನಾಂಕ 08-09-2024ನೇ ಭಾನುವಾರ ಬೆಳಿಗ್ಗೆ 11.00 ಗಂಟೆಗೆ ನಮ್ಮ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ತಿಳಿದು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು

ಶ್ರೀ ಕುಳ್ಳೇಗೌಡರ ಕುಟುಂಬವರ್ಗದವರು ಹಾಗೂ ಬಂಧುಮಿತ್ರರು

ಪ್ರಥಮ ವರ್ಷದ ಪುಣ್ಯಸ್ಮರಣೆ



ಶ್ರೀಮತಿ ಪುಷ್ಪಮ್ಮ

ನಿಧನ: 07.09.2023

ದುಃಖತಪ್ತರು: ಪಿ.ಕುಳ್ಳೇಗೌಡ (ಮಿಲ್ಟ್ರಿ), ಮಕ್ಕಳು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು, ಮರಿಮಕ್ಕಳು, ಚಿಕ್ಕಣ್ಣ ನಾಯಕರ ಬೀದಿ, ತಿ.ನರಸೀಪುರ.

3ನೇ ವರ್ಷದ ಸವಿನೆನಪು



ದೇವರು ನಿಮ್ಮ ಆತ್ಮಕ್ಕೆ ಶಾಂತಿ ಕೊಡಲಿ ನೀವು ನಮ್ಮನ್ನಗಲಿ ಇಂದಿಗೆ ಮೂರು ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ

ದುಃಖತಪ್ತರು: ಯಜಮಾನರು, ಹೆಣ್ಣುಮಕ್ಕಳು, ಗಂಡುಮಕ್ಕಳು, ಸೊಸೆ, ಅಳಿಯಂದಿರು, ಮೊಮ್ಮಕ್ಕಳು, ರಾಜೀವ್‌ನಗರ, 1ನೇ ಹಂತ, ಬಸ್‌ಸ್ಟಾಪ್, ಮೈಸೂರು

ಶ್ರೀಮತಿ ಲಕ್ಷ್ಮಮ್ಮ

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಒಂದನೇ ವರ್ಷದ ಪುಣ್ಯಸ್ಮರಣೆ



ಇಂದಿಗೆ ನೀವು ನಮ್ಮನ್ನಗಲಿ 1 ವರ್ಷ ಕಳೆದಿದೆ ನಿಮ್ಮ ಆತ್ಮಕ್ಕೆ ಚಿರಶಾಂತಿಯನ್ನು ಕೋರುವ ಹಾಗೂ ಸದಾ ನಿಮ್ಮ ನೆನಪಿನಲ್ಲಿರುವ ದುಃಖತಪ್ತರು: ಸೊಸೆ, ಮೊಮ್ಮಕ್ಕಳು, ಅಳಿಯಂದಿರು ಹಾಗೂ ಕುಟುಂಬವರ್ಗದವರು

ಶ್ರೀಮತಿ ಲಕ್ಕಮ್ಮ ರವರು

(MVV ನಿಲಯ ನಿವೃತ್ತ ನೌಕರರು)

7ನೇ ವರ್ಷದ ಸವಿನೆನಪು



ನೀವು ನಮ್ಮನ್ನು ಅಗಲಿ ಇಂದಿಗೆ **ಏಳು** ವರ್ಷ ಕಳೆದರೂ ನಿಮ್ಮ ನೆನಪಿನಲ್ಲಿ ಇರುವ

ಶ್ರೀಮತಿ ಎಂ. ಗೌರಮ್ಮ

ನಿಧನ: 25.8.2017

ದುಃಖತಪ್ತರು: ಮಾದೇಗೌಡ.ಹೆಚ್. ರಮ್ಯ ದೀಪು (ಮಗಳು, ಅಳಿಯ), ಮಂಜುನಾಥ್ ಪೂಜ (ಮಗ, ಸೊಸೆ), ಅನಿಕಾ, ಆರವ್, ಆಯೂಷ್

ಗೌರವಾನ್ವಿತ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ನ್ಯಾಯಾಧೀಶರು ಮೈಸೂರು.

ಎಫ್.ಡಿ ಪಿ ಸಂಖ್ಯೆ: 41/2013

ಅರ್ಜಿದಾರರು : ದೇವಮ್ಮ........ಪೌತಿ ವಾರಸುದಾರರು

1. ಕೆ.ಎಂ. ಕೃಷ್ಣ, 2.ಸರೋಜ, 3. ಶಿವು ಬಿನ್ ದಿ|| ಮಾದೇಗೌಡ, ವಯಸ್ಸು 52 ವರ್ಷ. ವಾಸ ಮನೆ ನಂ 603, 2ನೇ ಮುಖ್ಯ ರಸ್ತೆ, 2ನೇ ಅಡ್ಡ ರಸ್ತೆ, ಅರವಿಂದ ನಗರ, ಮೈಸೂರು. ವಿರುದ್ಧ

ಎದುರುದಾರರು : 1.ಎಸ್.ವಿ. ವೆಂಕಟಪ್ಪ, 2. ಚಿಕ್ಕವೆಂಕಟಪ್ಪ.......ಪೌತಿ ವಾರಸುದಾರರು

ಎ) ಜಯಶೀಲ ಕೋಂ ಚಿಕ್ಕವೆಂಕಟಪ್ಪ ವಯಸ್ಸು 72 ವರ್ಷ, ಬಿ) ಶಶೀಕಲಾ ವಯಸ್ಸು 55 ವರ್ಷ ಎದುರುದಾರರು ವಾಸಿಸುವ ಮನೆ ನಂ 803, 2ನೇ ಮುಖ್ಯ ರಸ್ತೆ, 5ನೇ ಅಡ್ಡ ರಸ್ತೆ ಜಯನಗರ, ಮೈಸೂರು.

ಸಾರ್ವಜನಿಕ ಪ್ರಕಟಣೆ

ಈ ಮೇಲೆ ನಮೂದು ಮಾಡಿರುವ ಮೃತ ಅರ್ಜಿದಾರರು ವಾರಸುದಾರರಾದ ಶ್ರೀಯುತ ಕೃಷ್ಣ ಮತ್ತು ಇತರರು ಎದುರುದಾರರ ವಾರಸುದಾರರಾದ ಜಯಶೀಲ ಮತ್ತು ಇತರರ ವಿರುದ್ಧ ಭಾಗವನ್ನು ಕೋರಿ ಮೈಸೂರು ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಮೈಸೂರು ಹಾಗೂ ಇತರೆ ಸ್ಥಳದಲಿರುವ ಒಟ್ಟು ಕುಟುಂಬದ ಆಸ್ತಿಯ ಬಗ್ಗೆ ದಾವೆ ಹೂಡಿದ್ದು, ಸದರಿ ದಾವೆಯು ಡಿಕ್ರಿಯಾದ ನಂತರ ಸದರಿ ಡಿಕ್ರಿಯ ಅನುಗುಣವಾಗಿ ಅಂತಿಮ ಡಿಕ್ರಿ ನೀಡಬೇಕೆಂದು ಮೇಲೆ ನಮೂದು ಮಾಡಿರುವ ಅರ್ಜಿಯನ್ನು ಹೂಡಿರುತ್ತಾರೆ. ಸದರಿ ಅರ್ಜಿಯು ದಿನಾಂಕ 25/10/2024 ರಂದು ತಮ್ಮ ಹಾಜರಾತಿಯನ್ನು ನಿಗದಿಪಡಿಸಿದ್ದು 2ನೇ ಎದುರುದಾರರ ವಾರಸುದಾರರಾದ ಶಶೀಕಲಾ ಹಾಗೂ ಸುಶೀಲಾ ರವರುಗಳಾದ ತಾವು ಸದರಿ ದಿನಾಂಕದಂದು ಖುದ್ದಾಗಿ ಅಥವಾ ತಮ್ಮ ವಕೀಲರ ಮಖೇನ ಬೆಳಗ್ಗೆ 11:00 ಘಂಟೆಗೆ ನ್ಯಾಯಾಲಯದಲ್ಲಿ ಹಾಜರಾಗತಕ್ಕದೆಂದು ತಪ್ಪಿದಲ್ಲಿ ಮೇಲಿನ ದಾವೆಯನ್ನು ತಮ್ಮ ವಿರುದ್ಧ ಏಕಪಕ್ಷಿಯವಾಗಿ ತೀರ್ಮಾನಿಸಲಾಗುವುದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ನ್ಯಾಯಾಲಯದ ಆದೇಶದಂತೆ

By Order of the Court
Sd/- Chief Ministerial Officer
Court of Senior civil judge & CJM, Mysuru

ಸ್ಥಳ: ಮೈಸೂರು, ದಿನಾಂಕ : 31/8/24

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಎ-ಷೆಡ್ಯೂಲ್ ನಲ್ಲಿ ನಮೂದಿಸಿರುವ ಸ್ವತ್ತನ್ನು ಅದರ ಮಾಲೀಕರಾದ, ಕೇರಳ ರಾಜ್ಯ, ಕೋಜಿಕೋಡ್ ಜಿಲ್ಲೆ ಮತ್ತು ತಾಲ್ಲೂಕು, ಚೆವಯೂರ್ ಗ್ರಾಮ, ಸೋಪನಂ, ನಂ: 9/133 ರ ನಿವಾಸಿಯಾದ, ಶ್ರೀಮತಿ ಸ್ನೇಹಲತ ಕೋಂ. ಕೆ. ಮೋಹನನ್ ನೈರ್ ರವರಿಂದ ಹಾಗೂ ಬಿ-ಷೆಡ್ಯೂಲ್ ನಲ್ಲಿ ನಮೂದಿಸಿರುವ ಸ್ವತ್ತನ್ನು, ಅದರ ಮಾಲೀಕರಾದ, ಬೆಂಗಳೂರು, ನಂದಿನಿ ಲೇಔಟ್, ಕಂಠೀರವ ನಗರ, 10ನೇ ಕ್ರಾಸ್, ನಂ: 914 ರ ನಿವಾಸಿಯಾದ, ಶ್ರೀ ಮಹೇಶ್ ಬಿನ್ ಲೇ. ಮುನಿಕವೀರಪ್ಪ ಮತ್ತು ಶ್ರೀಮತಿ. ರೇಣುಕ ಬಿನ್ ಲೇ. ಮುನಿಕವೀರಪ್ಪ, ಇವರಿಂದ ಖರೀದಿಸಲು ನನ್ನ ಕಕ್ಷಿದಾರರು ಉದ್ದೇಶಿಸಿರುತ್ತಾರೆ.

ಷೆಡ್ಯೂಲ್ ಎ ಮತ್ತು ಬಿ ಸ್ವತ್ತುಗಳ ಪರಬಾರೆಯ ವಿಚಾರದಲ್ಲಿ ಯಾರಿಗಾದಾರೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಐದು (05) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತುಗಳ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು.

ಎ-ಷೆಡ್ಯೂಲ್

ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲ್ಲೂಕು, ಬೇಗೂರು ಹೋಬಳಿ, ಶೀಗೆವಾಡಿ ಗ್ರಾಮದ (1), ಸರ್ವೆ ನಂಬರ್: 28/1ಎ ರಲ್ಲಿನ ನಾಲ್ಕು ಎಕರೆ ಹದಿನೆಂಟು ಗುಂಟೆ (4.18.00.00) ಖುಷ್ಕಿ ಜಮೀನು. (2) ಸರ್ವೆ ನಂಬರ್: 28/2 ರಲ್ಲಿನ ನಾಲ್ಕು ಎಕರೆ ಮೂವತ್ತ-ನಾಲ್ಕು ಗುಂಟೆ (4.34.00.00) ಖುಷ್ಕಿ ಜಮೀನು (3), ಸರ್ವೆ ನಂಬರ್: 266 ರಲ್ಲಿನ ಹದಿಮೂರು ಎಕರೆ ಮೂವತ್ತೇಳು ಗುಂಟೆ (13.37.00.00) ಖುಷ್ಕಿ ಜಮೀನು (4), ಸರ್ವೆ ನಂಬರ್: 267 ರಲ್ಲಿನ ಹದಿಮೂರು ಎಕರೆ ಹದಿನಾಲ್ಕು ಗುಂಟೆ (13.14.00.00) ಖುಷ್ಕಿ ಜಮೀನು ಮತ್ತು ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲ್ಲೂಕು, ಬೇಗೂರು ಹೋಬಳಿ, ಕಬ್ಬಹಳ್ಳಿ ಗ್ರಾಮದ (5), ಸರ್ವೆ ನಂಬರ್: 362/1 ರಲ್ಲಿನ ಐದು ಎಕರೆ ಎರಡು ಗುಂಟೆ (5.02.00.00) ಖುಷ್ಕಿ ಜಮೀನು.

ಬಿ-ಷೆಡ್ಯೂಲ್

ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲ್ಲೂಕು, ಬೇಗೂರು ಹೋಬಳಿ, ಶೀಗೆವಾಡಿ ಗ್ರಾಮದ ಸರ್ವೆ ನಂಬರ್: 28/1ಬಿ ರಲ್ಲಿನ ಒಂದು ಎಕರೆ ಹದಿನಾಲ್ಕು ಗುಂಟೆ (1.14.00.00) ಖುಷ್ಕಿ ಜಮೀನು.

ಸಹಿ/- ಎಂ.ಎನ್. ಪ್ರಕಾಶ್ ಕಾಳಪ್ಪ, ವಕೀಲರು
#2-3, First Floor, PRI Complex, 67/7A, New Sayyajirao Road, Fort Mohalla, Mysore 570004
India Cell: 93431 12535 E-mail: mnprakashkalappa@gmail.com

ಮೈಸೂರು: 06-09-2024

ಮೈಸೂರು ಅರಮನೆ ಮಂಡಳಿ, ಮೈಸೂರು

ಟೆಂಡರ್ ಅಧಿಸೂಚನೆ ಸಂಖ್ಯೆ: ಕಾನಿಅ/ಅಮಂ/ಉನಿ/ಸಕಾಇಂ/ಸಇಂ/ಟೆಂಡರ್ ಸಂಖ್ಯೆ: 04/2024–25 ದಿನಾಂಕ: 05.09.2024.

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಉಪ ನಿರ್ದೇಶಕರು, ಅರಮನೆ ಮಂಡಳಿ, ಮೈಸೂರು ಇವರಿಂದ ಮೈಸೂರು ಅರಮನೆಯ ಆವರಣದಲ್ಲಿ ಒಟ್ಟು ಅಂದಾಜು ಮೊತ್ತ ರೂ.12.00 ಲಕ್ಷಗಳಿಗೆ ಸಂಬಂಧಿಸಿದ ಒಟ್ಟು 03 ಸಂಖ್ಯೆ ದಸರಾ ಪೂರ್ವಭಾವಿ ಖರೀದಿ / ನಿರ್ವಹಣೆ ಕಾಮಗಾರಿಗಳಿಗೆ ಸಂಬಂಧಿಸಿದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ನೊಂದಾಯಿತ ಅರ್ಹ ವಿದ್ಯುತ್ ಗುತ್ತಿಗೆದಾರರಿಂದ / ನೋಂದಾಯಿತ ಏಜೆನ್ಸಿ / ತಯಾರಕರುಗಳಿಂದ ದ್ವಿಪ್ರತಿಯಲ್ಲಿ ಮೊಹರಾದ ಲಕೋಟೆಯಲ್ಲಿ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. 1) ಖಾಲಿ ಟೆಂಡರ್ ಫಾರಂ ಕೋರಿ ಅರ್ಜಿ ಸಲ್ಲಿಸಲು ಕೊನೆಯ ದಿ: 11.09.2024 ಸಂಜೆ 4:00 ಗಂಟೆಯವರೆಗೆ. 2) ಖಾಲಿ ಟೆಂಡರ್ ಫಾರಂಗಳನ್ನು ಗುತ್ತಿಗೆದಾರರಿಗೆ ನೀಡುವ ದಿ: 12.09.2024 ಸಂಜೆ 4:00 ಗಂಟೆಯವರೆಗೆ. 3) ಭರ್ತಿ ಮಾಡಿದ ಟೆಂಡರ್ ಸ್ವೀಕರಿಸುವ ದಿ: 13.09.2024 ಸಂಜೆ 4.00 ಗಂಟೆಯವರೆಗೆ. 4) ಟೆಂಡರ್‌ಗಳನ್ನು ತೆರೆಯುವ ದಿನಾಂಕ: 30.08.2024ರ ಸಂಜೆ 4.30 ಗಂಟೆಗೆ. 5) ಟೆಂಡರ್‌ಗಿಟ್ಟಿರುವ ಗರಿಷ್ಠ ಮೊತ್ತ ರೂ.5.00 ಲಕ್ಷಗಳು ಹಾಗೂ ಕನಿಷ್ಠ ಮೊತ್ತ ರೂ.2.00 ಲಕ್ಷಗಳು. ಯಾವುದಾದರೂ ಅಥವಾ ಎಲ್ಲಾ ಟೆಂಡರ್‌ಗಳನ್ನು ಯಾವ ಕಾರಣಗಳನ್ನೂ ನೀಡದೆ ಸ್ವೀಕರಿಸುವ / ತಿರಸ್ಕರಿಸುವ ಹಕ್ಕು ಉಪ ನಿರ್ದೇಶಕರು, ಮೈಸೂರು ಅರಮನೆ ಮಂಡಳಿ, ಮೈಸೂರು ರವರಿಗೆ ಸೇರಿರುತ್ತದೆ. ಇಷ್ಟಲ್ಲದೆ ಇನ್ನುಳಿದ ಯಾವುದಾದರೂ ಮಾಹಿತಿಗಳನ್ನು ಗುತ್ತಿಗೆದಾರರು ಬಯಸಿದ್ದಲ್ಲಿ ಅವುಗಳನ್ನು ಈ ಕಛೇರಿಯ ಕೆಲಸದ ಎಲ್ಲಾ ದಿನಗಳಂದು ಮತ್ತು ಕಛೇರಿಯ ವೇಳೆಯಲ್ಲಿ ಪಡೆಯಬಹುದು. ಒಂದು ವೇಳೆ ಮೇಲೆ ನೀಡಲಾಗಿರುವ ದಿನಗಳು ಸಾರ್ವಜನಿಕ ರಜಾ ದಿನಗಳಾಗಿದ್ದಲ್ಲಿ ಅನಂತರದ ದಿನಗಳನ್ನು ಪರಿಗಣಿಸಲಾಗುವುದು.

ಸಹಿ/– ಉಪ ನಿರ್ದೇಶಕರು, ಮೈಸೂರು ಅರಮನೆ ಮಂಡಳಿ, ಮೈಸೂರು.

DIPR/DDMS-522/KSMCA-350/2024-25

ಸ್ಥಾಪನೆ: 1923

ದಿ ಗ್ರಾಜ್ಯುಯೇಟ್ಸ್ ಕೋ–ಆಪರೇಟಿವ್ ಬ್ಯಾಂಕ್ ಲಿ.,

ಚಾಮರಾಜ ಜೋಡಿ ರಸ್ತೆ, ಮೈಸೂರು–570024

ದೂರವಾಣಿ: 0821–2442864 ಮೊಬೈಲ್: 9972039899

100ನೇ ವಾರ್ಷಿಕ ಮಹಾಸಭೆಯ ಸೂಚನಾ ಪ್ರಕಟಣೆ

ಮಾನ್ಯ ಸದಸ್ಯರುಗಳೇ,

ಈ ಬ್ಯಾಂಕಿನ 2023–24 ನೇ ಸಾಲಿನ 100ನೇ ವಾರ್ಷಿಕ ಮಹಾಸಭೆಯನ್ನು ದಿನಾಂಕ 08.09.2024 ರಂದು ಭಾನುವಾರ ಬೆಳಿಗ್ಗೆ 10.00 ಗಂಟೆಗೆ ಸರಿಯಾಗಿ ಮೈಸೂರು ನಗರದ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ನಡೆಸಲು ಏರ್ಪಾಡು ಮಾಡಲಾಗಿರುತ್ತದೆ. ನಮ್ಮ ಬ್ಯಾಂಕಿನ ಅಧ್ಯಕ್ಷರಾದ

ಶ್ರೀ ಎನ್. ಶ್ರೀನಿವಾಸ ಬಿ.ಕಾಂ., ಎಲ್.ಎಲ್.ಬಿ.,

ಇವರ ಘನ ಅಧ್ಯಕ್ಷತೆಯಲ್ಲಿ ನಡೆಸಲು ತೀರ್ಮಾನಿಸಿರುತ್ತದೆ

ಈಗಾಗಲೇ ಮಾನ್ಯ ಸದಸ್ಯರುಗಳಿಗೆ ವಾರ್ಷಿಕ ಮಹಾಸಭೆಯ ಸೂಚನಾ ಪ್ರಕಟಣೆಯನ್ನು ಅಂಚೆ ಮೂಲಕ ಕಳುಹಿಸಲಾಗಿದ್ದು, ಒಂದು ವೇಳೆ ಸೂಚನಾ ಪ್ರಕಟಣೆಯು ತಲುಪದೇ ಇದ್ದಲ್ಲಿ ಇದನ್ನೇ ಆಹ್ವಾನವೆಂದು ಪರಿಗಣಿಸಿ ಮಾನ್ಯ ಸದಸ್ಯರುಗಳು ತಮ್ಮ ಷೇರು ಪಾಸ್ ಪುಸ್ತಕವನ್ನು ಕಡ್ಡಾಯವಾಗಿ ತಂದು ಮಹಾಸಭೆಯಲ್ಲಿ ಭಾಗವಹಿಸಲು ಕೋರಲಾಗಿದೆ.

ದಿನಾಂಕ: 02–09–2024

ಸಹಿ:– ಶ್ರೀ.ಟಿ.ವಿ.ಮಹೇಶ್
ಪ್ರಭಾರ ವ್ಯವಸ್ಥಾಪಕರು

ಅಧ್ಯಕ್ಷರು : ಶ್ರೀ.ಎನ್.ಶ್ರೀನಿವಾಸ ಉಪಾಧ್ಯಕ್ಷರು : ಶ್ರೀಮತಿ.ಸುಜಾತ ವೆಂಕಟರಾಜು, ನಿರ್ದೇಶಕರುಗಳಾದ: ಶ್ರೀ.ಆರ್.ಅನಂತರಾಮು, ಪ್ರೊ.ಪಿ.ವಿ.ನರಹರಿ, ಶ್ರೀ.ಕೆ.ಜಿ.ಸತೀಶ್, ಶ್ರೀ.ಟಿ.ಎಸ್.ರವಿಶಂಕರ್, ಶ್ರೀ.ಎಸ್.ಎನ್.ಜಗದೀಶ್, ಶ್ರೀಮತಿ.ಎಂ.ಎ.ಹೇಮಲತ, ಡಾ.ಕೆ.ವಿ.ಲಕ್ಷ್ಮೀದೇವಿ, ಡಾ. ಸುಜಾತ.ಎಸ್.ರಾವ್, ಶ್ರೀಮತಿ.ಸಿ.ಕಮಲಮ್ಮ, ಶ್ರೀ.ಎಲ್.ಸೋಮಣ್ಣ, ಶ್ರೀಮತಿ.ಆರ್.ವರಲಕ್ಷ್ಮೀ, ವೃತ್ತಿಪರ ನಿರ್ದೇಶಕರಾದ: ಶ್ರೀ.ಎಂ.ಎಸ್.ರಾಜಾರಾಂ. ಶ್ರೀ.ಆರ್.ದೇವರಾಜು

ವಿಶೇಷ ಸೂಚನೆ:

1. ಬ್ಯಾಂಕಿನ 2023–24 ನೇ ಸಾಲಿನ ಲಾಭ–ನಷ್ಟದ ತಃಖ್ತೆ ಹಾಗೂ ಆಸ್ತಿ–ಜವಾಬ್ದಾರಿ ತಃಖ್ತೆಗಳನ್ನು ವೆಬ್‌ಸೈಟ್ www.gcbmys.in ರಲ್ಲಿಯೂ ಸಹ ಪರಿವೀಕ್ಷಿಸಲು ಲಭ್ಯವಿರುತ್ತದೆ.
2. ಸದಸ್ಯರು/ಸದಸ್ಯರೇತರುಗಳಿಗೆ ಅತ್ಯಂತ ಕಡಿಮೆ ಬಡ್ಡಿ ದರದಲ್ಲಿ ಅಂದರೆ ಶೇಕಡ 9% ರೀತ್ಯಾ ಚಿನ್ನದಾಭರಣ ಸಾಲವನ್ನು ಮಂಜೂರು ಮಾಡುತ್ತಲಿದ್ದು, ಅವಶ್ಯಕತೆಯುಳ್ಳವರು ಪಡೆಯಬಹುದಾಗಿರುತ್ತದೆ.